# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯು ದಿನಾಂಕಃ 01–06–2012 ರಂದು ನಡೆಸಲಾದ ವಿಷಯಗಳ ಸಭೆಯ ನಡವಳಿಗಳು

| ಕ್ರ. ಸಂ. | ಹಾಜರಿದ್ದ ಸಮಿತಿಯ ಪದಾಧಿಕಾರಿಗಳು ಶ್ರೀಯುತರಾದ | | ಕ್ರ. ಸಂ. | ಹಾಜರಿದ್ದ ಅಧಿಕಾರಿಗಳು |
|---|---|---|---|---|
| 1 | **ಶ್ರೀ.ಎನ್.ಆರ್.ಶ್ರೀಧರ ರೆಡ್ಡಿ** | ಅಧ್ಯಕ್ಷರು | 1 | ಕೌನ್ಸಿಲ್ ಕಾರ್ಯದರ್ಶಿಗಳು |
| 2 | ಶ್ರೀಮತಿ.ಸುಮಿತ್ರ | ಸದಸ್ಯರು | 2 | ಮುಖ್ಯ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ |
| 3 | ಶ್ರೀ.ಎಂ.ವೆಂಕಟೇಶ್ | ಸದಸ್ಯರು | | |
| 4 | ಶ್ರೀ.ಎಸ್.ಎಸ್.ಪ್ರಸಾದ್ | ಸದಸ್ಯರು | 3 | ಮುಖ್ಯ ಅಭಿಯಂತರರು, ಬೃಹತ್ ನೀರುಗಾಲುವೆ. |
| 5 | ಶ್ರೀ.ಆರ್.ಚಂದ್ರಶೇಖರಯ್ಯ | ಸದಸ್ಯರು | | |
| 6 | ಶ್ರೀಮತಿ.ಸರಸ್ವತಮ್ಮ | ಸದಸ್ಯರು | 4 | ಕಾರ್ಯಪಾಲಕ ಅಭಿಯಂತರರು( ರ.ಮೂ.ಸೌ/ ಯೋಜನೆ/ ಬೃ.ಮ.ನೀ.ಗಾ) |
| 7 | ಶ್ರೀ.ಎಸ್.ಕೇಶವಮೂರ್ತಿ | ಸದಸ್ಯರು | | |
| 8 | ಶ್ರೀ.ಎನ್.ಪಿಳ್ಳಪ್ಪ | ಸದಸ್ಯರು | | |
| 9 | ಶ್ರೀಮತಿ.ಯಶೋದಮ್ಮ.ಕೆ.ಆರ್ | ಸದಸ್ಯರು | | |
| 10 | ಶ್ರೀ.ಕೆ.ಎಲ್.ತಿಮ್ಮನಂಜಯ್ಯ | ಸದಸ್ಯರು | | |
| 11 | ಶ್ರೀ.ಆರ್.ಪ್ರಕಾಶ್ | ಸದಸ್ಯರು | | |

**(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲಿಸಲಾಯಿತು)**

## 01] ವಿಷಯ ಸಂಖ್ಯೆಃ09 /2012–13

ಅಪರ ಆಯುಕ್ತರವರು (ಯೋಜನೆ) ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪದ್ಮನಾಭನಗರ ವಿಧಾನಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ: 165 ಬನಶಂಕರಿ 2ನೇ ಹಂತ 17ನೇ ಅಡ್ಡರಸ್ತೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಈಜುಕೊಳವನ್ನು ಮೇಲ್ವಿಚಾರಣೆ ಮತ್ತು ನಿರ್ವಹಣೆಗಾಗಿ ಕಾರ್ಯಪಾಲಕ ಅಭಿಯಂತರರು ಯೋಜನೆ (ದಕ್ಷಿಣ) ರವರ ಕಛೇರಿಯಿಂದ ಇ–ಪ್ರಕ್ಯೂರ್‌ಮೆಂಟ್ ಮುಖಾಂತರ 10ವರ್ಷಗಳ ಅವಧಿಯ ಹೊರಗುತ್ತಿಗೆಗೆ ಟೆಂಡರ್ ಕರೆಯಲಾಗಿರುವ ವಿವರಗಳು ಈ ಕೆಳಕಂಡಂತಿರುತ್ತವೆ

1. ಟೆಂಡರ್ ನೋಟಿಫಿಕೇಷನ್ ಸಂಖ್ಯೆ –EE/PS/EOI/PR/33/11-12.
   ( 2nd call) dated: 20.01.2012.
2. ಟೆಂಡರ್‌ನ ತಾಂತ್ರಿಕ ಬಿಡ್ ತೆರದ ದಿನಾಂಕ –ದಿ: 01.03.2012
3. ಟೆಂಡರ್‌ನ ಆರ್ಥಿಕ ಬಿಡ್ ತೆರದ ದಿನಾಂಕ – ದಿ: 24.03.2012
4. ಟೆಂಡರ್ ಭಾಗವಹಿಸಿದ ಗುತ್ತಿದೇದಾರರ ಹೆಸರು ಮತ್ತು ಶೇಕಡವಾರು ದರ

| ಕ್ರ. ಸಂ. | ಗುತ್ತಿಗೆದಾರರ ಹೆಸರು | ನಮೂದಿಸಿರುವ ದರ | ಷರಾ |
|---|---|---|---|
| **1** | **ಶ್ರೀ ಜಿ. ಮೋಹನ್,** (ಪೂಜಾ ಏಜೆನ್ಸಿಸ್) | **3,06,00,000/–** | **ಹೆಚ್ಚು ಮೊತ್ತ ನಮೂದಿಸಿರುವ ಗುತ್ತಿಗೆದಾರರ (H1)** |

| | | | |
|---|---|---|---|
| 2 | **ಶ್ರೀ ಸುಧೀರ್ ವಿ.ಎಸ್,** (ಗ್ಲೋರಿಯಸ್ ಆಕ್ವಟೇಕ್ಸ್) | **3,05,10,000/-** | **ಹೆಚ್ಚು ಮೊತ್ತ ನಮೂದಿಸಿರುವ ಎರಡನೇ ಗುತ್ತಿಗೆದಾರರು (H2)** |
| 3 | **ಶ್ರೀ ಸತೀಶ್ ಕುಮಾರ್,** (ಸ್ವಿಮ್ ಲೈಫ್) | **2,77,77,777/-** | **ಹೆಚ್ಚು ಮೊತ್ತ ನಮೂದಿಸಿರುವ ಮೂರನೇ ಗುತ್ತಿಗೆದಾರರು (H3)** |

ಸದರಿ ಬಿಡ್ದುದಾರರಲ್ಲಿ **ಶ್ರೀ ಜಿ. ಮೋಹನ್** (ಪೂಜಾ ಏಜೆನ್ಸಿಸ್) **H1** ರವರು ರೂ. 30,600,000.00 ಗಳನ್ನು ನಮೂದಿಸಿ ಮೊದಲನೇ ಹೆಚ್ಚುವರಿ ಮೊತ್ತವನ್ನು ನಮೂದಿಸಿದ ಅರ್ಹ ಗುತ್ತಿಗೆದಾರರಾಗಿರುತ್ತಾರೆ. ಈಜು ಕೊಳದ ನಿರ್ಮಾಣವು ಸುಮಾರು ರೂ. 4.00 ಕೋಟಿ ವೆಚ್ಚದಲ್ಲಿ ಪೂರ್ಣಗೊಂಡಿರುತ್ತದೆ. ಈ ಕ್ಷೇತ್ರದ ಮಾನ್ಯ ಶಾಸಕರು ಹಾಗೂ ಗೃಹ ಮತ್ತು ಸಾರಿಗೆ ಸಚಿವರು, ಪಾಲಿಕೆ ಸದಸ್ಯರು ಸದರಿ ಈಜು ಕೊಳವನ್ನು ಸಾರ್ವಜನಿಕರ ಸೇವೆಗೆ 10 ದಿನದೊಳಗಾಗಿ ಮುಕ್ತಾಗೊಳಿಸಲು ಮೌಖಿಕವಾಗಿ ಆದೇಶಿಸಿರುತ್ತಾರೆ.

1. ಸದರಿ ಈಜುಕೊಳದ ಮೇಲ್ವಿಚಾರಣೆ ಹಾಗೂ ನಿರ್ವಹಣೆಯನ್ನು ಪಾಲಿಕೆಯಿಂದ ನೋಡಿಕೊಳ್ಳಲು ನುರಿತ ಮತ್ತು ತಾಂತ್ರಿಕ ಸಿಬ್ಬಂದಿಯೂ ನಮ್ಮಲ್ಲಿ ಲಭ್ಯವಿರುವುದಿಲ್ಲ ಆದುದರಿಂದ ಪಾಲಿಕೆಯವತಿಯಿಂದ ಮೇಲ್ವಿಚಾರಣೆ ಹಾಗೂ ನಿರ್ವಹಣೆಯನ್ನು ಮಾಡಲು ಸಾಧ್ಯವಾಗುವುದಿಲ್ಲ.

2. ಸದರಿ ಈಜುಕೊಳವನ್ನು ನೊಡಿಕೊಳ್ಳಲು ಭದ್ರತಾ ಸಿಬ್ಬಂದಿಯ ಅವಶ್ಯಕತೆ ಇದ್ದು, ಭದ್ರತಾ ಸಿಬ್ಬಂದಿಯು ಲಭ್ಯವಾಗುವುದಿಲ್ಲ.

3. ಈಜುಕೊಳವನ್ನು ಬೇಸಿಗೆಯಲ್ಲಿ ನೀರು ತುಂಬದೆ ಬಿಡುವುದರಿಂದ ಬಿರುಕು ಬಿಟ್ಟು ನೀರಿನ ಸೋರಿಕೆಯಗುವ ಸಾಧ್ಯತೆ ಇರುತ್ತದೆ. ಆದುದರಿಂದ ಸದರಿ ಈಜುಕೊಳವನ್ನು ನೀರಿನಿಂದ ತುಂಬಿಸಿ ನಿರ್ವಹಣೆ ಮಾಡುವುದು ಅವಶ್ಯಕವಾಗಿರುತ್ತದೆ. ಶಾಲಾ ಕಾಲೇಜುಗಳಿಗೆ ರಜೆ ಇರುವುದರಿಂದ ಈಜುಕೊಳದ ಆಸುಪಾಸಿನಲ್ಲಿ ವಾಸವಾಗಿರುವ ಮಕ್ಕಳ ಆರೋಗ್ಯ ಹಾಗೂ ಕ್ರೀಡೆಯ ಹಿತದೃಷ್ಟಿಯಿಂದ ಸದರಿ ಈಜುಕೊಳವನ್ನು ಶೀಘ್ರವಾಗಿ ಸಾರ್ವಜನಿಕರ ಸೇವೆಗೆ ಸಮರ್ಪಣೆ ಮಾಡಬೇಕಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಸದರಿ ಈಜುಕೊಳವನ್ನು ಪಾಲಿಕೆಯಿಂದ ನಿರ್ವಹಿಸಲು ಸಾಧ್ಯವಾಗುವುದಿಲ್ಲ ಸದರಿ ಈಜುಕೊಳದ ನಿರ್ವಹಣೆಯನ್ನು ಹೊರಗುತ್ತಿಗೆ ನೀಡಿ ನಿರ್ವಹಿಸಬೇಕಾಗಿರುತ್ತದೆ.

ಸದರಿ ಈಜುಕೊಳಕ್ಕೆ ಈಗಾಗಲೇ ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಕರೆಯಲಾಗಿದ್ದು, ಶ್ರೀ ಜಿ.ಮೋಹನ್ ರವರು ರೂ. 3.06 ಕೋಟಿ ಮೊತ್ತ ನಮೂದಿಸಿ ಹೆಚ್ಚು ಮೊತ್ತ ನಮೂದಿಸಿದ ಆರ್ಹ ಗುತ್ತಿಗೆದಾರರಾಗಿರುತ್ತಾರೆ. ಸದರಿ ಈಜುಕೊಳವನ್ನು 15 ದಿನಗಳಲ್ಲಿ ಪ್ರಾರಂಭಿಸಬೇಕಾಗಿರುವುದರಿಂದ ಮೇಲ್ಕಂಡ ಗುತ್ತಿಗೆದಾರರಿಗೆ ತಾತ್ಕಾಲಿಕವಾಗಿ ಇ-ಪ್ರಕ್ಯೂರ್‌ಮೆಂಟ್ ಟೆಂಡರ್‌ನಲ್ಲಿ ವಿಧಿಸಿರುವ ಷರತ್ತುಗಳಂತೆ ಈಜುಕೊಳದ ನಿರ್ವಹಣೆಯನ್ನು ತಾತ್ಕಾಲಿಕವಾಗಿ ಒಪ್ಪಂದ ಮಾಡಿಕೊಂಡು 3 ತಿಂಗಳ ಕಾಲ ಅಥವಾ ಘನ ಸರ್ಕಾರದ ಅನುಮೋದನೆ ದೊರೆಯುವವರೆಗೆ ಮುಂದುವರೆಸಿ ಸಾರ್ವಜನಿಕರ ಸೇವೆಗೆ ಈಜುಕೊಳವನ್ನು ಸಮರ್ಪಿಸಬೇಕಾಗಿರುತ್ತದೆ.

ಟೆಂಡರ್ ಕರಾರಿನಂತೆ ಗುತ್ತಿಗೆದಾರರು 20% off the Bid amount (ಗುತ್ತಿಗೆದಾರರು 10 ವರ್ಷಗಳ ಅವಧಿಗೆ ನಮೂದಿಸಿರುವ ಬಿಡ್ ಮೊತ್ತ ರೂ. 3.06 ಕೋಟಿಗಳಿಗೆ)i.e. Rs. 61.20 Lakhs ಹಾಗೂ 10% of the bid amount i.e., Rs. 30.60 lakhs additional security deposit ಅನ್ನು ಬ್ಯಾಂಕ್ ಗ್ಯಾರೆಂಟಿ ಮುಖಾಂತರ ನೀಡಬೇಕಾಗಿರುತ್ತದೆ. ಗುತ್ತಿಗೆದಾರರೊಡನೆ ತಾತ್ಕಾಲಿಕವಾಗಿ ಈಜುಕೊಳವನ್ನು ನಿರ್ವಹಣೆ ಮಾಡುವ ಸಂಬಂಧ ಚರ್ಚಿಸಲಾಗಿದ್ದು, ಗುತ್ತಿಗೆದಾರರು ತಾತ್ಕಾಲಿಕವಾಗಿ ನಿರ್ವಹಣೆ ಮಾಡಲು ರೂ. 25.00 ಲಕ್ಷಗಳ ಮುಂಗಡ ಹಣವನ್ನು (20% of the bid amount i.e., Rs.61.20 lakhs ಬದಲಾಗಿ)

ಮತ್ತು ರೂ. 10.00 ಲಕ್ಷಗಳ ಬ್ಯಾಂಕ್ ಗ್ಯಾರೆಂಟಿ additional security deposit ( 10% of the bid amount i.e., Rs. 30.60 lakhs ಗಳ ಬ್ಯಾಂಕ್ ಗ್ಯಾರೆಂಟಿ ಬದಲಾಗಿ) ಟೆಂಡರ್ ಕರಾರಿನಂತೆ 10 ವರ್ಷಗಳ ಅವಧಿಗೆ ಬಿಡ್ ಮಾಡಿರುವ ಮೊತ್ತ ರೂ. 3.06 ಕೋಟಿಗಳು ಮೊದಲನೆ ವರ್ಷದ bid amount Rs. 61.20 ಲಕ್ಷಗಳನ್ನು ಗಣನೆಗೆ ತೆಗೆದುಕೊಂಡಾಗ ಪ್ರತಿ ಮಾಹೆಗೆ ರೂ. 3.01 ಲಕ್ಷಗಳು ಬಿಡ್ ಮೊತ್ತವಾಗಿರುತ್ತದೆ. ಸದರಿ ಗುತ್ತಿಗೆದಾರರು ಪ್ರತಿ ಮಾಹೆ ರೂ. 3.01 ಲಕ್ಷಗಳನ್ನು ಪಾವತಿಸಲು ಒಪ್ಪಿರುತ್ತಾರೆ. ಸದರಿ ಹಣವನ್ನು ಮೊದಲನೇ ವರ್ಷದ ಬಿಡ್ ಮೊತ್ತದ ಲೆಕ್ಕಕ್ಕೆ (ಅಂದರೆ ರೂ. 61.20 ಲಕ್ಷಗಳ ಲೆಕ್ಕಕ್ಕೆ) ಸೇರಿಸಿಕೊಳ್ಳಲು ಕೋರಿರುತ್ತಾರೆ. ಮತ್ತು ತಾತ್ಕಾಲಿಕ ನಿರ್ವಹಣಾ ಅವಧಿಯನ್ನು, 10 ವರ್ಷಗಳ ಗುತ್ತಿಗೆ ಅವಧಿಯ ಲೆಕ್ಕಕ್ಕೆ ಪರಿಗಣಿಸಲು ಕೋರಿ ಈಜುಕೊಳದ ನಿರ್ವಹಣೆಯನ್ನು ತಾತ್ಕಾಲಿಕವಾಗಿ ನಿರ್ವಹಿಸಲು ಒಪ್ಪಿ ಗುತ್ತಿಗೆದಾರರಾದ ಶ್ರೀ. ಜಿ.ಮೋಹನ್ ರವರು ಪತ್ರವನ್ನು ನೀಡಿರುತ್ತಾರೆ. ಪತ್ರವನ್ನು ಲಗತ್ತಿಸಿದೆ.

10 ವರ್ಷಗಳ ಅವಧಿಗೆ ಈಜುಕೊಳದ ಮೇಲ್ವಿಚಾರಣೆ ಹಾಗೂ ನಿರ್ವಹಣೆಯ ಟೆಂಡರ್‌ಅನ್ನು ನಿಯಮಾನುಸಾರವಾಗಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ, ಪಾಲಿಕೆ ಸಭೆ ಹಾಗೂ ಘನ ಸರ್ಕಾರದಿಂದ ಅನುಮೋದನೆಯಾಗಬೇಕಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಕೆಳಕಂಡಂತೆ ಈ ಆದೇಶ ಕೋರಿದೆ.

1. **ಗಣೇಶ ಮಂದಿರ ವಾರ್ಡ್ ಸಂಖ್ಯೆ 165ರ ಬನಶಂಕರಿ 2ನೇ ಹಂತ 17ನೇ ಅಡ್ಡರಸ್ತೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ನಿರ್ಮಾಣವಾಗಿರುವ ಈಜುಕೊಳದ ಮೇಲ್ವಿಚಾರಣೆ ಹಾಗೂ ನಿರ್ವಹಣೆಗಾಗಿ 10 ವರ್ಷಗಳ ಅವಧಿಯ ಹೊರಗುತ್ತಿಗೆಗೆ ನೀಡಲು ಕರೆದಿರುವ ಟೆಂಡರ್‌ನಲ್ಲಿ ಅತೀ ಹೆಚ್ಚು ಮೊತ್ತ ರೂ. 3.06 ಕೋಟಿಗಳನ್ನು ನಮೂದಿಸಿರುವ ಆರ್ಹ ಗುತ್ತಿಗೆದಾರರಾದ ಶ್ರೀ ಜಿ.ಮೋಹನ್‌ರವರ ಟೆಂಡರ್ ಅನುಮೋದನೆ ಕೋರಿದೆ.**

2. **ಸದರಿ ಈಜುಕೊಳವನ್ನು ಮಾನ್ಯ ಗೃಹ ಹಾಗೂ ಸಾರಿಗೆ ಸಚಿವರ ಆದೇಶದಂತೆ 15 ದಿನಗೊಳಗಾಗಿ ಸಾರ್ವಜನಿಕರ ಸೇವೆಗಾಗಿ ಸಮರ್ಪಿಸಬೇಕಾಗಿರುವುದರಿಂದ ಈಜುಕೊಳದ ನಿರ್ವಹಣೆಗೆ ಪರ್ಯಾಯ ವ್ಯವಸ್ಥೆ ಇಲ್ಲದೆ ಇರುವುದರಿಂದ ಅನಿವಾರ್ಯವಾಗಿ ಟೆಂಡರ್‌ನಲ್ಲಿ ಭಾಗವಹಿಸಿ ಅತೀ ಹೆಚ್ಚು ದರ ನಮೂದಿಸಿರುವ ಶ್ರೀ ಜಿ.ಮೋಹನ್‌ರವರ ಮುಖಾಂತರ ನಿರ್ವಹಿಸಲು ರೂ. 25.00 ಲಕ್ಷಗಳ** (20% of the Bid amount i.e.,Rs. 61.20 Lakhs ಬದಲಾಗಿ) **ಹಾಗೂ ರೂ. 10.00 ಲಕ್ಷಗಳ ಬ್ಯಾಂಕ್ ಗ್ಯಾರಂಟಿ** (Additional Security deposit 10% of the Bid amount i.e., Rs. 30.60 lakhs ಗಳ ಬ್ಯಾಂಕ್ ಗ್ಯಾರಂಟಿ ಬದಲಾಗಿ) **ಟೆಂಡರ್‌ನ ಪ್ರತಿ ಮಾಹೆಯ ಬಿಡ್ ಮೊತ್ತ ರೂ. 3.01 ಲಕ್ಷಗಳನ್ನು ಪಾಲಿಕೆಗೆ ಪಾವತಿಸಿಕೊಂಡು ಟೆಂಡರ್‌ನ ಮೊದಲನೇ ವರ್ಷದ ಬಿಡ್ ಮೊತ್ತ ರೂ. 61.20 ಲಕ್ಷಗಳ ಲೆಕ್ಕಕೆ ಸೇರಿಸಿಕೊಳ್ಳುವ ಮತ್ತು ಇ-ಪ್ರಕ್ಯೂರ್‌ಮೆಂಟ್ ಟೆಂಡರಿನಲ್ಲಿ ವಿಧಿಸಿರುವ ಷರತ್ತಿಗೊಳಪಟ್ಟು ಅತೀ ಹೆಚ್ಚು ಮೊತ್ತ ನಮೂದಿಸಿ ಅರ್ಹ ಗುತ್ತಿಗೆದಾರರಾದ ಶ್ರೀ ಜಿ.ಮೋಹನ್‌ರವರೊಡನೆ 3 ತಿಂಗಳ ಕಾಲ ಅಥವಾ ಘನ ಸರ್ಕಾರದ ಅನುಮೋದನೆಯಾಗುವವರೆಗೆ ನಿರ್ವಹಿಸಲು ಪಾಲಿಕೆ ಸಭೆ ಹಾಗೂ ಘನ ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಿ ತಾತ್ಕಾಲಿಕ ಒಪ್ಪಂದ ಮಾಡಿಕೊಂಡು ಈಜು ಕೊಳದ ನಿರ್ವಹಣೆಯನ್ನು ತಾತ್ಕಾಲಿಕವಾಗಿ ನಿರ್ವಹಿಸಲು ಕಾರ್ಯಾದೇಶ ನೀಡಲು ಅನುಮೋದನೆ ಕೋರಿ ಸಮಿತಿಯ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರು(ಯೋಜನೆ) ರವರ ಟಿಪ್ಪಣಿ.**

**ನಿರ್ಣಯಃ ದಿನಾಂಕಃ 10-05-2012ರ ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿಯನ್ನು ಒಪ್ಪುತ್ತಾ, ಪಾಲಿಕೆ ಸಭೆಯ ಮುಂದೆ ಮಂಡಿಸಲು ಸಮಿತಿ ತೀರ್ಮಾನಿಸಿತು.**

## 02] ವಿಷಯ ಸಂಖ್ಯೆಃ10 /2012-13

ವಿಶೇಷ ಆಯುಕ್ತರವರು (ಯೋಜನೆ) ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಕ್ಷಿಣ ವಲಯದ ಪದ್ಮನಾಭನಗರ ವಿಧಾನ ಸಭಾ ಕ್ಷೇತ್ರದ ವಾರ್ಡ್ ನಂಃ 181, ಕುಮಾರಸ್ವಾಮಿ ಲೇಔಟ್ Pipeline road

ನಿಂದ BMTC Bus stop ವರೆಗೆ ಹರಿಯುತ್ತಿರುವ ಬೃಹತ್ ಮಳೆನೀರು ಕಾಲುವೆಯ ಕಾಮಗಾರಿಯನ್ನು (providing bed protection, jacketing and cover slab to storm water drain from Ch:2225 to 2775mts from Kumarswamy layout BMTC bus stop to 50 feet road, in ward No:181) e-procurement ಮುಖಾಂತರ ಟಂಡರ್‌ಅನ್ನು ಆಹ್ವಾನಿಸಲಾಗಿರುತ್ತದೆ. ಸದರಿ ಕಾಮಗಾರಿಗೆ ಶ್ರೀ. ಸುಧಾಕರ ಪರಿಟಿಯಾಲ ಗುತ್ತಿಗೆದಾರರರು, ಕಡಿಮೆ ದರಗಳನ್ನು ನಮೂದಿಸಿರುವುದರಿಂದ L1 ಆಗಿರುತ್ತಾರೆ. ಇವರು ನಮೂದಿಸಿರುವ ದರಗಳು ಅಂದಾಜು ಪಟ್ಟಿಗೆ (2011-12ನೇ ಸಾಲಿನ ದರಪಟ್ಟಿ) ಹೋಲಿಸಿದಾಗ ಹೆಚ್ಚುವರಿಯಾಗಿರುತ್ತದೆ (3.62% above) ಮತ್ತು Ist quarter issue rates of steel ಗೆ ಹೋಲಿಸಿದಾಗ 3.46% ಕಡಿಮೆಯಾಗಿರುತ್ತದೆ. ಈ ದರಗಳು ಸ್ಪರ್ಧಾತ್ಮಕವಾಗಿರುತ್ತದೆ ಹಾಗೂ ಒಪ್ಪಬಹುದಾಗಿದೆ.

ಆದುದರಿಂದ, ಶ್ರೀ.ಸುಧಾಕರ ಪರಿಟಿಯಾಲ ಗುತ್ತಿಗೆದಾರರು ನಮೂದಿಸಿರುವ ದರಗಳನ್ನು 3.62% ಹೆಚ್ಚುವರಿ ಅಂದರೆ ರೂ. 2,20,36,893.00 ಲಕ್ಷಗಳಿಗೆ ಟೆಂಡರ್ ಅನುಮೋದನೆ ನೀಡಲು ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರವರ ಟಿಪ್ಪಣಿ.

**: ಮುಂದೂಡಿದೆ:**

## 03] ವಿಷಯ ಸಂಖ್ಯೆ:11/2012-13

ವಿಶೇಷ ಆಯುಕ್ತರವರು (ಯೋಜನೆ) ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಚಲ್ಲಘಟ್ಟ ಮುಖ್ಯ ಕಣಿವೆ C-100 ಶಿವಾಜಿನಗರ ರಸೆಲ್ ಮಾರುಕಟ್ಟೆಯ ಬಳಿ ಹರಿಯುತ್ತಿದ್ದು ಪ್ರತಿ ಮಳೆಗಾಲದಲ್ಲೂ ಸದರಿ ಮಾರುಕಟ್ಟೆ ಪ್ರದೇಶವು ನೀರು ತುಂಬಿ ಹರಿದು ಸಾರ್ವಜನಿಕರ ಆಸ್ತಿಗೆ ಹಾಗೂ ಸ್ಥಳೀಯ ಅಂಗಡಿ ಮಾಲೀಕರಿಗೆ ಕಷ್ಟ ನಷ್ಟ ಉಂಟಾಗುತ್ತಿದ್ದು, ಇದನ್ನು ತಪ್ಪಿಸಲು, ಕಣಿವೆಯನ್ನು ಅಗಲ ಹಾಗೂ ಆಳಗೊಳಿಸಲು ಅಂದಾಜನ್ನು 2009-11ನೇ ಸಾಲಿನ ಲೋಕೋಪಯೋಗಿ ಮತ್ತು ಒಳನಾಡು ಸಾರಿಗೆ ಇಲಾಖೆಯ, ಬೆಂಗಳೂರು ವೃತ್ತದ ದರಪಟ್ಟಿಯ ದರಗಳನ್ನು ಪರಿಗಣಿಸಿ ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು, ಟೆಂಡರ್ ಮುಖಾಂತರ ಕಡಿಮೆ ದರ ನಮೂದಿಸಿದ್ದ ಮೆ: ಶ್ರೀ ರಾಮ್‌ಸಾಯಿ ಕನ್ಸ್ಟ್ರಕ್ಷನ್ಸ್, ಇವರಿಗೆ ವಹಿಸಿ ಕಾಮಗಾರಿಯನ್ನು (construction of RCC drain from Ch: 1890 to 2000m (from Charminar road to Jumma Masjid road) in Shivajinagar under Challagatta valley) ಪ್ರಾರಂಭಿಸಲಾಗಿತ್ತು. ಸದರಿ ಗುತ್ತಿಗೆದಾರರರು ನಿಗದಿತ ಕಾಲಾವಧಿಯಲ್ಲಿ ನಿರೀಕ್ಷಿತ ಪ್ರಗತಿ ತೋರಿಸದ ಕಾರಣ ಸದರಿ ಗುತ್ತಿಗೆಯನ್ನು ರಿಸ್ಕ್ ಅಂಡ್ ಕಾಸ್ಟ್ ಮೇಲೆ ರದ್ದುಗೊಳಿಸಿ ಮರು ಟೆಂಡರ್ ಕರೆಯಲಾಯಿತು.

ಈ ಕಾಮಗಾರಿಗೆ ದಿನಾಂಕ: 1-01-2012ರಂದು 5ನೇ ಬಾರಿ ಟೆಂಡರ್ ಅಧಿಸೂಚನೆಯನ್ನು ಹೊರಡಿಸಲಾಯಿತು. ಟೆಂಡರ್ ಸಲ್ಲಿಸಲು ಕಡೆಯ ದಿನಾಂಕವಾಗಿದ್ದ 20-01-2012ರಂದು ಶ್ರೀ. ಮಾಜರ್ ಆಲಿಖಾನ್ ರವರು ಟೆಂಡರ್ ಸಲ್ಲಿಸಿರುವ ಏಕೈಕ ಬಿಡ್ದುದಾರರಾಗಿರುತ್ತಾರೆ.

ಸದರಿ ಗುತ್ತಿಗೆದಾರರು ಸಲ್ಲಸಿದ್ದ ದಾಖಲೆಗಳನ್ನು ಪರಿಶೀಲಿಸಲಾಗಿ ತಾಂತ್ರಿಕವಾಗಿ ಗುತ್ತಿಗೆದಾರರರು ಅರ್ಹತೆಯನ್ನು ಹೊಂದಿರುವರೆಂದು ಘೋಷಿಸಿದ ನಂತರ ಇವರು ಸಲ್ಲಸಿದ್ದ ಆರ್ಥಿಕ ಬಿಡ್‌ಅನ್ನು ದಿನಾಂಕ: 27-01-2012ರಂದು ತೆರೆಯಲಾಗಿದ್ದು ಕೆಳಕಂಡಂತೆ ಒಟ್ಟಾರೆ ಮೊತ್ತವನ್ನು ನಮೂದಿಸಿರುತ್ತಾರೆ.

| | | |
|---|---|---|
| 1 | ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ ( 2009-10ನೇ ಸಾಲಿನ ದರಪಟ್ಟಿಯಂತೆ) | ರೂ. 2,06,01,634/- |
| 2 | ಪ್ರಸಕ್ತ ಸಾಲಿನ ಅಂದರೆ 2011-12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗೆ ಇಟ್ಟ ಮೊತ್ತ | ರೂ. 2,41,191,151/- |
| 3 | ಬಿಡ್ದುದಾರರಾದ ಶ್ರೀ. ಮಜರ್ ಆಲಿಖಾನ್ ರವರು ನಮೂದಿಸಿರುವ ಟೆಂಡರ್ ಮೊತ್ತ | ರೂ. 2,54,42,688/- |
| 4 | ದರ ಸಂದಾನದ ನಂತರ ಶ್ರೀ. ಮಜರ್ ಆಲಿಖಾನ್ ರವರು ನಮೂದಿಸಿರುವ ಟೆಂಡರ್ ಮೊತ್ತ | ರೂ.2,54,42,688/- |

| | | |
|---|---|---|
| 5 | ಟೆಂಡರ್ ಗಿಟ್ಟ ಮೊತ್ತದ ಮೇಲಿನ ಶೇಕಡವಾರು ಹೆಚ್ಚುವರಿ/ ಕಡಿಮೆ | ರೂ. 23.50 ಹೆಚ್ಚುವರಿ |
| 6 | ಪ್ರಸಕ್ತ ಸಾಲಿನ 2011–12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗೆ ಇಟ್ಟ ಮೊತ್ತದ ಮೇಲಿನ ಶೇಕಡವಾರು ಹೆಚ್ಚಳ/ ಕಡಿಮೆ | 5.17 ಹೆಚ್ಚುವರಿ |

ಶ್ರೀ. ಮಹರ್ ಆಲಿಖಾನ್ ರವರು ನಮೂದಿಸಿರುವ ಮೊತ್ತವು ಮಂಜೂರಾದ ಅಂದಾಜಿನಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 23.50 ರಷ್ಟು ಹೆಚ್ಚುವರಿ ಇದು ಪ್ರಸಕ್ತ ಸಾಲಿನ ಅಂದರೆ 2011–12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದ ಟೆಂಡರ್ ಮೊತ್ತಕ್ಕೆ ಹೋಲಿಸಿದಾಗ ಶೇಕಡ 5.17 ರಷ್ಟು ಹೆಚ್ಚುವರಿ ಆಗಿದ್ದು, ಸ್ಪರ್ಧಾತ್ಮಕವಾಗಿರುವುದು ಕಂಡುಬಂದಿರುತ್ತದೆ.

ಸಾರ್ವಜನಿಕ ಹಿತದೃಷ್ಟಿಯಿಂದ ಕಾಮಗಾರಿಯ ಜರೂರತೆಯ ಹಿನ್ನೆಲೆಯಲ್ಲಿ, ಬೃಹತ್ ಕಾಮಗಾರಿ ಸಾರ್ವಜನಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಅನುಮೋದನೆ ನಿರೀಕ್ಷಿಸಿ ಕಾಮಗಾರಿಯನ್ನು ತುರ್ತಾಗಿ ಕೈಗೊಳ್ಳಲು ಅನುವಾಗುವಂತೆ ಗುತ್ತಿಗೆದಾರರಿಗೆ ಲೆಟರ್ ಆಫ್ ಇಂಟೆಂಡ್ ನೀಡಿ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆ.

ಮೇಲಿನ ಹಿನ್ನೆಲೆಯಲ್ಲಿ, ಸದರಿ ಟೆಂಡರ್‌ನಲ್ಲಿ ಭಾಗವಹಿಸಿರುವ ಏಕೈಕ ಬಿಡ್ಡುದಾರರಾದ ಶ್ರೀ. ಮಾಜರ್ ಆಲಿಖಾನ್, ರವರಿಗೆ ಬೃಹತ್ ಕಾಮಗಾರಿ ಸಾರ್ವಜನಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಅನುಮೋದನೆ ನಿರೀಕ್ಷಿಸಿ ಕಾಮಗಾರಿಯನ್ನು ತುರ್ತಾಗಿ ಕೈಗೊಳ್ಳಲು ಅನುವಾಗುವಂತೆ ಗುತ್ತಿಗೆದಾರರಿಗೆ ಲೆಟರ್ ಆಫ್ ಇಂಟೆಂಟ್ ನೀಡಿರುವ ಕ್ರಮವನ್ನು ಸ್ಥಿರೀಕರಿಸಿ ಇವರ ಸಂಧಾನಿತ ಟೆಂಡರ್ ಮೊತ್ತ ರೂ. 2,54,42,688/–(ಮಂಜೂರಾದ ಅಂದಾಜು ಪಟ್ಟಿಯಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 23.50 ರಷ್ಟು ಹೆಚ್ಚುವರಿ ಹಾಗೂ ಪ್ರಸಕ್ತ ಸಾಲಿನ ಅಂದರೆ 2011–12ನೇ ಸಾಲಿನ ದರಪಟ್ಟಿಯ ದರಗಳಂತೆ ಪರಿಷ್ಕರಿಸಲಾದ ಟೆಂಡರಿಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 5.17 ರಷ್ಟು ಹೆಚ್ಚುವರಿ) ಗಳಿಗೆ ಅನುಮೋದನೆ ಕೋರಿ ಕಾಮಗಾರಿಗಳ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರವರ ಟಿಪ್ಪಣಿ.

**ಃ ಮುಂದೂಡಿದೆಃ**

## <u>04] ವಿಷಯ ಸಂಖ್ಯೆಃ12/2012–13</u>

ಅಪರ ಆಯುಕ್ತರವರು (ಯೋಜನೆ) ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ: 119 ಶ್ರೀ ಧರ್ಮರಾಯಸ್ವಾಮಿ ದೇವಸ್ಥಾನದ ವ್ಯಾಪ್ತಿಯಲ್ಲಿ ಬರುವ ದಾಸಪ್ಪ ಹೆರಿಗೆ ಆಸ್ಪತ್ರೆಯ ಆವರಣದಲ್ಲಿರುವ ಕಾರ್ಯಪಾಲಕ ಅಭಿಯಂತರರು ಯೋಜನೆ (ಪಶ್ಚಿಮ) ಕಟ್ಟಡದ ನವೀಕರಣ ಕಾಮಗಾರಿಗಾಗಿ ಮಾನ್ಯ ಉಪ ಮಹಾಪೌರರ ಟಿಪ್ಪಣಿ ಸಂಖ್ಯೆಃ ಉ.ಮ.ಪೌ/ಆಕಾ/ಪಿಆರ್/01/11–12 ದಿನಾಂಕಃ 17–03–2012ರ ಪತ್ರದಲ್ಲಿ 2011–12ನೇ ಸಾಲಿನ ಆಯವ್ಯಯದ 01 ಕೌನ್ಸಿಲ್ ವೆಚ್ಚಗಳು– ಉಪ ಮಹಾಪೌರರು ಆಜ್ಞೆ ಮಾಡಿದ ವಿಶೇಷ ಕಾಮಗಾರಿಗಳು ಶೀರ್ಷಿಕೆ ಪಿ–2178 ಅಡಿಯಲ್ಲಿ ರೂ. 10.00 ಲಕ್ಷಗಳ ಮೊತ್ತವನ್ನು ಬಿಡುಗಡೆ ಮಾಡಲಾಗಿರುವುದರಿಂದ, 2011–12ರ ಲೋಕೋಪಯೋಗಿ ಇಲಾಖೆಯ ದರ ಪಟ್ಟಿ ಅನ್ವಯ ರೂ. 10.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿರುತ್ತದೆ.

ಆದುದರಿಂದ ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ ಹಾಗೂ ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ ಕೆ.ಆರ್.ಐ.ಡಿ.ಎಲ್.(KRIDL) ಸಂಸ್ಥೆ ಮುಖಾಂತರ ನಿರ್ವಹಿಸುವ ಬಗ್ಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ

ಸಮಿತಿಯ ಮುಂದೆ ಮಂಡಿಸಲಾದ ಆಪರ ಆಯುಕ್ತರು(ಯೋಜನೆ) ರವರ ದಿನಾಂಕ:25–04–2012ರ ಟಿಪ್ಪಣಿ.

**ನಿರ್ಣಯಃ ದಿನಾಂಕಃ 25–04–2012ರ ಅಪರ ಆಯುಕ್ತರು (ಯೋ) ರವರ ಟಿಪ್ಪಣಿ ಒಪ್ಪಲಾಯಿತು.**

## 05] ವಿಷಯ ಸಂಖ್ಯೆಃ13/2012–13

ವಿಶೇಷ ಆಯುಕ್ತರವರು (ಯೋಜನೆ) ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಿನಾಂಕಃ 28–03–2012ರಲ್ಲಿ ಮಾನ್ಯ ಮುಖ್ಯ ಮಂತ್ರಿಗಳ ಗೃಹ ಕಛೇರಿ ಕೃಷ್ಣದಲ್ಲಿ ನಡೆದ ಸಭೆಯಲ್ಲಿ ಹಾಜರಿದ್ದ ಮಾನ್ಯ ಶಾಸಕರು ಮಹದೇವಪುರ ಕ್ಷೇತ್ರ ಹಾಗೂ ಆಯುಕ್ತರು, ಬಿ.ಬಿ.ಎಂ.ಪಿ. ಬೆಂಗಳೂರು, ಜಂಟಿ ಆಯುಕ್ತರು, ಮಹದೇವಪುರ ವಲಯ, ಪ್ರಧಾನ ಅಭಿಯಂತರರು, ಬಿ.ಬಿ.ಎಂ.ಪಿ. ಮುಖ್ಯ ಅಭಿಯಂತರರು, ಮಹದೇವಪುರ ವಲಯ, ಕಾರ್ಯಪಾಲಕ ಅಭಿಯಂತರರು (ಯೋಜನೆ) ರವರ ಸಮ್ಮುಖದಲ್ಲಿ ಚರ್ಚಿಸಿದ ನಿರ್ಣಯದಂತೆ ಮಂಡಿಸಲಾದ ಟಿಪ್ಪಣಿ.

ಮಹದೇವಪುರ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಬೆಳ್ಳಂದೂರು ವಾರ್ಡ್‌ನಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಿಸಲು 2010–11ನೇ ಸಾಲಿನ ಆಯವ್ಯಯದಲ್ಲಿ ರೂ. 300.00 ಲಕ್ಷಗಳನ್ನು ಮೀಸಲಿಟ್ಟಿದ್ದು ಸದರಿ ಅನುದಾನವನ್ನು ಒಳಾಂಗಣ ಕ್ರೀಡಾಂಗಣ ಬದಲಾಗಿ ಬಹುಪಯೋಗಿ ರಂಗಮಂದಿರವನ್ನು ನಿರ್ಮಿಸಲು ಸೂಕ್ತವೆಂದು ನಿರ್ಣಯಿಸಿದರು. ಅದರಂತೆ, ಮಾನ್ಯ ಶಾಸಕರು ಈ ಮೊದಲೇ ದಿನಾಂಕಃ 17–09–2011ರಲ್ಲಿ ಮಾನ್ಯ ಆಯುಕ್ತರಲ್ಲಿ ಪತ್ರ ಮುಖೇನ ವರದಿಯನ್ನು ಮಂಡಿಸಿರುತ್ತಾರೆ.

ಅದರಂತೆ, ಬೆಳ್ಳಂದೂರು ವಾರ್ಡ್‌ನಲ್ಲಿರುವ ದೊಡ್ಡ ಕನ್ನಲ್ಲಿ ಗ್ರಾಮದ ಸರ್ವೆ ನಂ: 8 ರಲ್ಲಿ ಪ್ರಸಕ್ತ ಸಾಲಿನ ಆಯವ್ಯದಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಿಸಲು ಮೀಸಲಿಟ್ಟಿರುವ ರೂ. 300.00 ಲಕ್ಷಗಳ ಅನುದಾನವನ್ನು ಸಭೆಯ ನಿರ್ಣಯದಂತೆ ಉದ್ದೇಶಿಸಿರುವ ಬಹುಪಯೋಗಿ ರಂಗಮಂದಿರ ಕಟ್ಟಡವನ್ನು ನಿರ್ಮಿಸುವ ಕಾಮಗಾರಿಗೆ ಜಾಬ್ ನಂಬರ್ ಮತ್ತು ಆಡಳಿತಾತ್ಮಕ ಅನುಮೋದನೆ ನೀಡಲು ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರು(ಯೋಜನೆ) ರವರ ಟಿಪ್ಪಣಿ.

**ನಿರ್ಣಯಃ ದಿನಾಂಕಃ 26–04–2012ರ ವಿಶೇಷ ಆಯುಕ್ತರು (ಯೋ) ರವರ ಟಿಪ್ಪಣಿಯನ್ನು ಒಪ್ಪುತ್ತಾ, ವಿಷಯವನ್ನು ಪಾಲಿಕೆ ಸಭೆ ಮುಂದೆ ತರಲು ತೀರ್ಮಾನಿಸಲಾಯಿತು.**

## 06] ವಿಷಯ ಸಂಖ್ಯೆಃ14/2012–13

ವಿಶೇಷ ಆಯುಕ್ತರವರು (ಯೋಜನೆ) ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಚಲ್ಲಘಟ್ಟ ಮುಖ್ಯ ಕಣಿವೆ C-100 ಶಿವಾಜಿನಗರ ರಸೆಲ್ ಮಾರುಕಟ್ಟೆಯ ಬಳಿ ಹರಿಯುತ್ತಿದ್ದು ಪ್ರತಿ ಮಳೆಗಾಲದಲ್ಲೂ ಸದರಿ ಮಾರುಕಟ್ಟೆ ಪ್ರದೇಶವು ನೀರು ತುಂಬಿ ಹರಿದು ಸಾರ್ವಜನಿಕರ ಆಸ್ತಿಗೆ ಹಾಗೂ ಸ್ಥಳೀಯ ಅಂಗಡಿ ಮಾಲೀಕರಿಗೆ ಕಷ್ಟ ನಷ್ಟ ಉಂಟಾಗುತ್ತಿದ್ದು, ಇದನ್ನು ತಪ್ಪಿಸಲು, ಕಣಿವೆಯನ್ನು ಅಗಲ ಹಾಗೂ ಆಳಗೊಳಿಸಲು ಅಂದಾಜನ್ನು 2009–11ನೇ ಸಾಲಿನ ಲೋಕೋಪಯೋಗಿ ಮತ್ತು ಒಳನಾಡು ಸಾರಿಗೆ ಇಲಾಖೆಯ, ಬೆಂಗಳೂರು ವೃತ್ತದ ದರಪಟ್ಟಿಯ ದರಗಳನ್ನು ಪರಿಗಣಿಸಿ ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು, ಟೆಂಡರ್ ಮುಖಾಂತರ ಕಡಿಮೆ ದರ ನಮೂದಿಸಿದ್ದ ಮೆಃ ಶ್ರೀ ರಾಮ್‌ಸಾಯಿ ಕನ್ಸ್ಟ್ರಕ್ಷನ್ಸ್, ಇವರಿಗೆ ವಹಿಸಿ ಕಾಮಗಾರಿಯನ್ನು (construction of RCC drain from Ch: 2110 to 2250m (from Seppings road) in Shivajinagar under Challagatta valley) ಪ್ರಾರಂಭಿಸಲಾಗಿತ್ತು. ಸದರಿ ಗುತ್ತಿಗೆದಾರರರು ನಿಗದಿತ

ಕಾಲಾವಧಿಯಲ್ಲಿ ನಿರೀಕ್ಷಿತ ಪ್ರಗತಿ ತೋರಿಸದ ಕಾರಣ ಸದರಿ ಗುತ್ತಿಗೆಯನ್ನು ರಿಸ್ಕ್ ಅಂಡ್ ಕಾಸ್ಟ್ ಮೇಲೆ ರದ್ದುಗೊಳಿಸಿ ಮರು ಟೆಂಡರ್ ಕರೆಯಲಾಯಿತು.

ಈ ಕಾಮಗಾರಿಗೆ ದಿನಾಂಕಃ 24-02-2012ರಂದು 5ನೇ ಬಾರಿ ಟೆಂಡರ್ ಅಧಿಸೂಚನೆಯನ್ನು e-procrurement ಮೂಲಕ ಹೊರಡಿಸಲಾಯಿತು. ಟೆಂಡರ್ ಸಲ್ಲಿಸಲು ಕಡೆಯ ದಿನಾಂಕವಾಗಿದ್ದ 05-03-2012ರಂದು ಶ್ರೀ. ಕೆ.ವಿ.ಆರ್. ಕನ್ಸ್ಟ್ರಕ್ಷನ್ ರವರು ಟೆಂಡರ್ ಸಲ್ಲಿಸಿರುವ ಏಕೈಕ ಬಿಡ್ದುದಾರರಾಗಿರುತ್ತಾರೆ.

ಸದರಿ ಗುತ್ತಿಗೆದಾರರು ಸಲ್ಲಸಿದ್ದ ದಾಖಲೆಗಳನ್ನು ಪರಿಶೀಲಿಸಲಾಗಿ ತಾಂತ್ರಿಕವಾಗಿ ಗುತ್ತಿಗೆದಾರರರು ಅರ್ಹತೆಯನ್ನು ಹೊಂದಿರುವರೆಂದು ಘೋಷಿಸಿದ ನಂತರ ಇವರು ಸಲ್ಲಸಿದ್ದ ಆರ್ಥಿಕ ಬಿಡ್‌ಅನ್ನು ದಿನಾಂಕಃ 09-03-2012ರಂದು ತೆರೆಯಲಾಗಿದ್ದು ಕೆಳಕಂಡಂತೆ ಒಟ್ಟಾರೆ ಮೊತ್ತವನ್ನು ನಮೂದಿಸಿರುತ್ತಾರೆ.

| | | |
|---|---|---|
| 1 | ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ ( 2009-10ನೇ ಸಾಲಿನ ದರಪಟ್ಟಿಯಂತೆ) | ರೂ. 2,04,85,070/- |
| 2 | ಪ್ರಸಕ್ತ ಸಾಲಿನ ಅಂದರೆ 2011-12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗೆ ಇಟ್ಟ ಮೊತ್ತ | ರೂ. 2,67,26,516/- |
| 3 | ಬಿಡ್ದುದಾರರಾದ ಶ್ರೀ. ಮಜರ್ ಆಲಿಖಾನ್ ರವರು ನಮೂದಿಸಿರುವ ಟೆಂಡರ್ ಮೊತ್ತ | ರೂ. 2,96,92,132/- |
| 4 | ದರ ಸಂದಾನದ ನಂತರ ಶ್ರೀ. ಮಜರ್ ಆಲಿಖಾನ್ ರವರು ನಮೂದಿಸಿರುವ ಟೆಂಡರ್ ಮೊತ್ತ | ರೂ.2,95,78,740/- |
| 5 | ಟೆಂಡರ್ ಗಿಟ್ಟ ಮೊತ್ತದ ಮೇಲಿನ ಶೇಕಡವಾರು ಹೆಚ್ಚುವರಿ/ ಕಡಿಮೆ | ರೂ. 44.39 ಹೆಚ್ಚುವರಿ |
| 6 | ಪ್ರಸಕ್ತ ಸಾಲಿನ 2011-12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗೆ ಇಟ್ಟ ಮೊತ್ತದ ಮೇಲಿನ ಶೇಕಡವಾರು ಹೆಚ್ಚಳ/ ಕಡಿಮೆ | 10.67 ಹೆಚ್ಚುವರಿ |

ಮೆ: ಕೆ.ವಿ.ಆರ್.ಕನ್ಸ್ಟ್ರಕ್ಷನ್ಸ್ ರವರು ನಮೂದಿಸಿರುವ ಮೊತ್ತವು ಮಂಜೂರಾದ ಅಂದಾಜಿನಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 43.79 ರಷ್ಟು ಹೆಚ್ಚುವರಿ ಇದು ಪ್ರಸಕ್ತ ಸಾಲಿನ ಅಂದರೆ 2011-12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದ ಟೆಂಡರ್ ಮೊತ್ತಕ್ಕೆ ಹೋಲಿಸಿದಾಗ ಶೇಕಡ 10.67 ರಷ್ಟು ಹೆಚ್ಚುವರಿ ಆಗಿದ್ದು, ಸ್ಪರ್ಧಾತ್ಮಕವಾಗಿರುವುದು ಕಂಡುಬಂದಿರುತ್ತದೆ.

ಮೇಲಿನ ಹಿನ್ನೆಲೆಯಲ್ಲಿ, ಮೆ: ಕೆ.ವಿ.ಆರ್.ಕನ್ಸ್ಟ್ರಕ್ಷನ್ಸ್ ರವರು ಸದರಿ ಟೆಂಡರ್‌ನಲ್ಲಿ ಭಾಗವಹಿಸಿರುವ ಏಕೈಕ ಬಿಡ್ದುದಾರರಾಗಿದ್ದು, ಇವರು ದರ ಸಂಧಾನದ ನಂತರ ನಮೂದಿಸಿರುವ ಟೆಂಡರ್ ಮೊತ್ತ ರೂ. 2,95,78,740/-(ಮಂಜೂರಾದ ಅಂದಾಜು ಪಟ್ಟಿಯಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 44.39 ರಷ್ಟು ಹೆಚ್ಚುವರಿ ಹಾಗೂ ಪ್ರಸಕ್ತ ಸಾಲಿನ ಅಂದರೆ 2011-12ನೇ ಸಾಲಿನ ದರಪಟ್ಟಿಯ ದರಗಳಂತೆ ಪರಿಷ್ಕರಿಸಲಾದ ಟೆಂಡರಿಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 10.67 ರಷ್ಟು ಹೆಚ್ಚುವರಿ) ಗಳಿಗೆ ಅನುಮೋದನೆ ಕೋರಿ ಕಾಮಗಾರಿಗಳ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರವರ ಟಿಪ್ಪಣಿ.

**ಃ ಮುಂದೂಡಿದೆ ಃ**

## <u>07] ವಿಷಯ ಸಂಖ್ಯೆಃ15/2012-13</u>

ವಿಶೇಷ ಆಯುಕ್ತರವರು (ಯೋಜನೆ) ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಚಲ್ಲಘಟ್ಟ ಮುಖ್ಯ ಕಣಿವೆ C-100 ಶಿವಾಜಿನಗರ ರಸೆಲ್ ಮಾರುಕಟ್ಟೆಯ ಬಳಿ ಹರಿಯುತ್ತಿದ್ದು ಪ್ರತಿ ಮಳೆಗಾಲದಲ್ಲೂ ಸದರಿ ಮಾರುಕಟ್ಟೆ ಪ್ರದೇಶವು ನೀರು ತುಂಬಿ ಹರಿದು ಸಾರ್ವಜನಿಕರ ಆಸ್ತಿಗೆ ಹಾಗೂ ಸ್ಥಳೀಯ ಅಂಗಡಿ ಮಾಲೀಕರಿಗೆ ಕಷ್ಟ ನಷ್ಟ ಉಂಟಾಗುತ್ತಿದ್ದು, ಇದನ್ನು ತಪ್ಪಿಸಲು, ಕಣಿವೆಯನ್ನು ಅಗಲ ಹಾಗೂ ಆಳಗೊಳಿಸಲು ಅಂದಾಜನ್ನು

2009–11ನೇ ಸಾಲಿನ ಲೋಕೋಪಯೋಗಿ ಮತ್ತು ಒಳನಾಡು ಸಾರಿಗೆ ಇಲಾಖೆಯ, ಬೆಂಗಳೂರು ವೃತ್ತದ ದರಪಟ್ಟಿಯ ದರಗಳನ್ನು ಪರಿಗಣಿಸಿ ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು, ಟೆಂಡರ್ ಮುಖಾಂತರ ಕಡಿಮೆ ದರ ನಮೂದಿಸಿದ್ದ ಮೆಃ ಶ್ರೀ ರಾಮ್‌ಸಾಯಿ ಕನ್ಸ್ಟ್ರಕ್ಷನ್ಸ್, ಇವರಿಗೆ ವಹಿಸಿ ಕಾಮಗಾರಿಯನ್ನು (construction of RCC drain from Ch: 2250 to 2400m (Armstrong road) in Shivajinagar under Challagatta valley) ಪ್ರಾರಂಭಿಸಲಾಗಿತ್ತು. ಸದರಿ ಗುತ್ತಿಗೆದಾರರರು ನಿಗದಿತ ಕಾಲಾವಧಿಯಲ್ಲಿ ನಿರೀಕ್ಷಿತ ಪ್ರಗತಿ ತೋರಿಸದ ಕಾರಣ ಸದರಿ ಗುತ್ತಿಗೆಯನ್ನು ರಿಸ್ಕ್ ಅಂಡ್ ಕಾಸ್ಟ್ ಮೇಲೆ ರದ್ದುಗೊಳಿಸಿ ಮರು ಟೆಂಡರ್ ಕರೆಯಲಾಯಿತು.

ಈ ಕಾಮಗಾರಿಗೆ ದಿನಾಂಕಃ 24–02–2012ರಂದು 5ನೇ ಬಾರಿ ಟೆಂಡರ್ ಅಧಿಸೂಚನೆಯನ್ನು ಮೂಲಕ ಹೊರಡಿಸಲಾಯಿತು. ಟೆಂಡರ್ ಸಲ್ಲಿಸಲು ಕಡೆಯ ದಿನಾಂಕವಾಗಿದ್ದ 05–03–2012ರಂದು ಶ್ರೀ. ಮಾಜರ್ ಆಲಿಖಾನ್ ರವರು ಟೆಂಡರ್ ಸಲ್ಲಿಸಿರುವ ಏಕೈಕ ಬಿಡ್ಡುದಾರರಾಗಿರುತ್ತಾರೆ.

ಸದರಿ ಗುತ್ತಿಗೆದಾರರು ಸಲ್ಲಸಿದ್ದ ದಾಖಲೆಗಳನ್ನು ಪರಿಶೀಲಿಸಲಾಗಿ ತಾಂತ್ರಿಕವಾಗಿ ಗುತ್ತಿಗೆದಾರರರು ಅರ್ಹತೆಯನ್ನು ಹೊಂದಿರುವರೆಂದು ಘೋಷಿಸಿದ ನಂತರ ಇವರು ಸಲ್ಲಸಿದ್ದ ಆರ್ಥಿಕ ಬಿಡ್‌ಅನ್ನು ದಿನಾಂಕಃ 09–03–2012ರಂದು ತೆರೆಯಲಾಗಿದ್ದು ಕೆಳಕಂಡಂತೆ ಒಟ್ಟಾರೆ ಮೊತ್ತವನ್ನು ನಮೂದಿಸಿರುತ್ತಾರೆ.

| | | |
|---|---|---|
| 1 | ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ ( 2009–10ನೇ ಸಾಲಿನ ದರಪಟ್ಟಿಯಂತೆ) | ರೂ. 2,21,31,913/– |
| 2 | ಪ್ರಸಕ್ತ ಸಾಲಿನ ಅಂದರೆ 2011–12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗೆ ಇಟ್ಟ ಮೊತ್ತ | ರೂ. 2,85,10,072/– |
| 3 | ಬಿಡ್ಡುದಾರರಾದ ಶ್ರೀ. ಮಜರ್ ಆಲಿಖಾನ್ ರವರು ನಮೂದಿಸಿರುವ ಟೆಂಡರ್ ಮೊತ್ತ | ರೂ. 3,18,55,845/– |
| 4 | ದರ ಸಂದಾನದ ನಂತರ ಶ್ರೀ. ಮಜರ್ ಆಲಿಖಾನ್ ರವರು ನಮೂದಿಸಿರುವ ಟೆಂಡರ್ ಮೊತ್ತ | ರೂ.3,18,24,375/– |
| 5 | ಟೆಂಡರ್ ಗಿಟ್ಟ ಮೊತ್ತದ ಮೇಲಿನ ಶೇಕಡವಾರು ಹೆಚ್ಚುವರಿ/ ಕಡಿಮೆ | ರೂ. 43.79 ಹೆಚ್ಚುವರಿ |
| 6 | ಪ್ರಸಕ್ತ ಸಾಲಿನ 2011–12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗೆ ಇಟ್ಟ ಮೊತ್ತದ ಮೇಲಿನ ಶೇಕಡವಾರು ಹೆಚ್ಚಳ/ ಕಡಿಮೆ | 11.63 ಹೆಚ್ಚುವರಿ |

ಶ್ರೀ.ಮಾಜರ್ ಆಲಿಖಾನ್ ರವರು ನಮೂದಿಸಿರುವ ಮೊತ್ತವು ಮಂಜೂರಾದ ಅಂದಾಜಿನಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 43.79 ರಷ್ಟು ಹೆಚ್ಚುವರಿ ಇದು ಪ್ರಸಕ್ತ ಸಾಲಿನ ಅಂದರೆ 2011–12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದ ಟೆಂಡರ್ ಮೊತ್ತಕ್ಕೆ ಹೋಲಿಸಿದಾಗ ಶೇಕಡ 11.63 ರಷ್ಟು ಹೆಚ್ಚುವರಿ ಆಗಿದ್ದು, ಸ್ಪರ್ಧಾತ್ಮಕವಾಗಿರುವುದು ಕಂಡುಬಂದಿರುತ್ತದೆ.

ಮೇಲಿನ ಹಿನ್ನೆಲೆಯಲ್ಲಿ, ಶ್ರೀ.ಮಾಜರ್ ಆಲಿಖಾನ್ ರವರು ಸದರಿ ಟೆಂಡರ್‌ನಲ್ಲಿ ಭಾಗವಹಿಸಿರುವ ಏಕೈಕ ಬಿಡ್ಡುದಾರರಾಗಿದ್ದು, ಇವರು ದರ ಸಂಧಾನದ ನಂತರ ನಮೂದಿಸಿರುವ ಟೆಂಡರ್ ಮೊತ್ತ ರೂ. 3,18,24,375/–(ಮಂಜೂರಾದ ಅಂದಾಜು ಪಟ್ಟಿಯಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 43.79 ರಷ್ಟು ಹೆಚ್ಚುವರಿ ಹಾಗೂ ಪ್ರಸಕ್ತ ಸಾಲಿನ ಅಂದರೆ 2011–12ನೇ ಸಾಲಿನ ದರಪಟ್ಟಿಯ ದರಗಳಂತೆ ಪರಿಷ್ಕರಿಸಲಾದ ಟೆಂಡರಿಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 11.63 ರಷ್ಟು ಹೆಚ್ಚುವರಿ) ಗಳಿಗೆ ಅನುಮೋದನೆ ಕೋರಿ ಕಾಮಗಾರಿಗಳ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರವರ ಟಿಪ್ಪಣಿ.

**ಃ ಮುಂದೂಡಿದೆ ಃ**

## 08] ವಿಷಯ ಸಂಖ್ಯೆ:16/2012-13

ಅಪರ ಆಯುಕ್ತರವರು (ಯೋಜನೆ) ಟಿಪ್ಪಣಿಯಲ್ಲಿ ವಿವರಿಸಿರುವಂತೆ, ರಾಜಾಜಿನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯ ವಾರ್ಡ್ 97 ದಯಾನಂದನಗರದಲ್ಲಿ ಬಿ.ಬಿ.ಎಂ.ಪಿ ವಿವಿದೋದ್ದೇಶ ಕಟ್ಟಡವನ್ನು (Proposed construction of Multipurpose BBMP Office complex in ward-97 Dayanandangar Bangalore) ನಿರ್ಮಿಸುವ ಕಾಮಗಾರಿಗೆ ರೂ. 200.00 ಲಕ್ಷಗಳ ಅಂದಾಜು ಪ್ರಸ್ತಾವನೆಗಳಿಗೆ (ಪಿ-2251) ರಲ್ಲಿ ಜಾಬ್ ಸಂಖ್ಯೆ: 097-11-000035 ದೊರೆತಿರುತ್ತದೆ. ಹಾಗೂ ಈಗಾಗಲೇ ದಿನಾಂಕ: 24-01-2011ರ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಡವಳಿಗಳಲ್ಲಿ 2010-11ನೇ ಸಾಲಿನ ಆಯವ್ಯಯದಲ್ಲಿ ರೂ. 200.00 ಲಕ್ಷಗಳನ್ನು ಮೀಸಲಿರಿಸಿ, 2011-12ನೇ ಸಾಲಿನ ಆಯವ್ಯಯದಲ್ಲಿ ರೂ. 211.00 ಲಕ್ಷಗಳನ್ನು ಅಳವಡಿಸಿಕೊಳ್ಳಲಾಗಿದೆ. ಹಾಗೂ ಸಕ್ಷಮ ಪ್ರಾಧಿಕಾರದಿಂದ ಅಗತ್ಯ ಅನುಮೋದನೆಗಳನ್ನು ಪಡೆಯಲಾಗಿರುತ್ತದೆ. ತದನಂತರ ಮುಖ್ಯ ಅಭಿಯಂತರರು (ಜಾಗೃತ ಮತ್ತು ಪಿ.ಪಿ.ಇಡಿ) ರವರು ಕಡತವನ್ನು ಪರಿಶೀಲಿಸಿ ಅಂದಾಜು ಪಟ್ಟಿಯಲ್ಲಿ ಕೆಲವು ನ್ಯೂನ್ಯತೆಗಳನ್ನು ಗುರುತಿಸಿ, ಅವುಗಳನ್ನು ಸರಿಪಡಿಸಿಕೊಂಡು ಪರಿಷ್ಕೃತ ಟೆಂಡರ್ ದಾಖಲೆಗಳನ್ನು ತಯಾರಿಸುವಂತೆ ಹಾಗೂ ಪ್ರಸ್ತುತ ಟೆಂಡರ್ ಪ್ರಕ್ರಿಯೆಯನ್ನು ಸ್ಥಗಿತಗೊಳಿಸುವಂತೆ ಸೂಚಿಸಿದ್ದರ ಮೇರೆಗೆ ಕರೆಯಲಾಗಿದ್ದ ಟೆಂಡರ್ ಅನ್ನು ರದ್ದುಪಡಿಸುವ ಬಗ್ಗೆ ಅನುಮೋದನೆಯನ್ನು ಪಡೆದುಕೊಳ್ಳಲಾಗಿರುತ್ತದೆ. ಹಾಗೂ ಕಾರ್ಯಪಾಲಕ ಅಭಿಯಂತರರು (ಟಿವಿಸಿಸಿ) ರವರು ಸೂಚಿಸಿರುವಂತೆ ಸದರಿ ಕಾಮಗಾರಿಗೆ 2011-12ನೇ ದರಪಟ್ಟಿಗಳ ಅನ್ವಯ ರೂ. 411.00ಲಕ್ಷಗಳಿಗೆ ಅಂದಾಜುಪಟ್ಟಿಯನ್ನು ತಯಾರಿಸಲಾಗಿದೆ.

ಆದುದರಿಂದ ಸದರಿ ಕಾಮಗಾರಿಗೆ ಈಗಾಗಲೇ ನೀಡಲಾಗಿರುವ ಆಡಳಿತಾತ್ಮಕ ಅನುಮೋದನೆಯ ಸ್ಥಿರೀಕರಣದ ಬಗ್ಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ದಿನಾಂಕ: 20-04-12ರಂದರ ಅಪರ ಆಯುಕ್ತರು(ಯೋಜನೆ) ರವರ ಟಿಪ್ಪಣಿ

**ನಿರ್ಣಯ: ದಿನಾಂಕ: 20-04-2012ರ ಅಪರ ಆಯುಕ್ತರು (ಯೋಜನೆ) ಇವರ ಟಿಪ್ಪಣಿ ಒಪ್ಪುತ್ತಾ, ವಿಷಯವನ್ನು ಪಾಲಿಕೆ ಸಭೆ ಮುಂದೆ ಮಂಡಿಸಲು ತೀರ್ಮಾನಿಸಲಾಯಿತು.**

## 09] ವಿಷಯ ಸಂಖ್ಯೆ:17/2012-13

ಆಯುಕ್ತರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಸಿರ್ಸಿ ಮೇಲುಸೇತುವೆಯಲ್ಲಿನ ಎಕ್ಸ್‌ಪ್ಯಾನ್ಷನ್ ಜಾಯಿಂಟ್‌ಗಳನ್ನು ಬದಲಾಯಿಸುವ ಯೋಜನೆಗೆ ನಿಯೋಜಿಸಿದ್ದ ಯೋಜನಾ ಸಲಹೆಗಾರರಾದ ಸಿವಿಲ್ ಏಡ್ ರವು ಸೂಚಿಸಿದಂತೆ ಮಾಡ್ಯುಲರ್ ಎಕ್ಸ್‌ಪ್ಯಾನ್ಷನ್ ಜಾಯಿಂಟ್‌ಗಳನ್ನು ಅಳವಡಿಸಲು ಮೆ: ಸ್ಯಾನ್‌ಫೀಲ್ಡ್ ಇಂಡಿಯಾ ಗುತ್ತಿಗೆ ಸಂಸ್ಥೆಯವರಿಗೆ ವಹಿಸಿಕೊಟ್ಟಿದ್ದು ಕೆಲವು ಪ್ರಮುಖ ತಾಂತ್ರಿಕ ತೊಡಕುಗಳಿಂದ ಸದರಿ ಜಾಯಿಂಟ್‌ಅನ್ನು ಅಳವಡಿಸುವುದನ್ನು ಕೈಬಿಟ್ಟು ಬದಲಿ ವ್ಯವಸ್ಥೆಯಾಗಿ ಫಿಂಗರ್ ಟೈಪ್ ಎಕ್ಸ್‌ಪ್ಯಾನ್ಷನ್ ಜಾಯಿಂಟ್‌ಗಳನ್ನು ಅಳವಡಿಸುವ ಬಗ್ಗೆ ದಿನಾಂಕ: 16-04-2012ರಂದು ನಡೆದ ತಾಂತ್ರಿಕ ಪರಿಹಾರ ಸಮಿತಿಯಲ್ಲಿ ಪ್ರಸ್ತಾಪಿಸಿ ಅನುಮೋದನೆ ಪಡೆದಿದ್ದು ಅದರಂತೆ ಮೆ: ಸ್ಯಾನ್‌ಫೀಲ್ಡ್ ಇಂ. ಲಿ. ರವರಿಗೆ ಪತ್ರ ಬರೆದು ಅಗತ್ಯವಿರುವ ಫಿಂಗರ್ ಟೈಪ್ ಎಕ್ಸ್‌ಪ್ಯಾನ್ಷನ್ ಜಾಯಿಂಟ್‌ಗಳಿಗೆ ಸಂಬಂಧಿಸಿದಂತೆ ವಿನ್ಯಾಸ ಮತ್ತು ನಕ್ಷೆಯನ್ನು ತಯಾರಿಸಿ ಅನುಮೋದನೆಗಾಗಿ ಸಲ್ಲಿಸಲು ಸೂಚಿಸಲಾಗಿದೆ.

ಈ ಹಿನ್ನಲೆಯಲ್ಲಿ ಸದರಿ ಯೋಜನೆಗೆ ಪಾಲಿಕೆಯಿಂದ ನೇಮಕಗೊಂಡಿದ್ದ ಯೋಜನಾ ನಿರ್ವಹಣಾ ಸಮಾಲೋಚಕರಾದ ಮೆ: ಸಿವಿಲ್ ಏಡ್ ಟೆಕ್ನೋಕ್ಲಿನಿಕ್ ಪ್ರೈ.ಲಿ. ರವರು ದಿನಾಂಕ: 20-04-2012ರಂದು ಪ್ರಧಾನ ಅಭಿಯಂತರರಿಗೆ ಪತ್ರ ಬರೆದು ಸದರಿ ಯೋಜನೆಯ ನಿರ್ವಹಣಾ ಸೇವೆಯು ಜವಾಬ್ದಾರಿಯನ್ನು ಹಿಂಪಡೆದಿರುವುದಾಗಿ ತಿಳಿಸಿರುವ ಹಿನ್ನಲೆಯಲ್ಲಿ ಯೋಜನೆಯ ನಿರ್ವಹಣಾ ಜವಾಬ್ದಾರಿಯನ್ನು ನುರಿತ ಸಲಹೆಗಾರರಿಂದ ಪಡೆಯಲು ಅವಶ್ಯಕವಿದ್ದು, ಮೆ: ಸ್ಟುಪ್ ಸಲಹೆಗಾರರಿಂದ ಸಲಹೆಗಳನ್ನು ಪಡೆಯುವ ಬಗ್ಗೆ ಪ್ರಧಾನ ಅಭಿಯಂತರರೊಂದಿಗೆ ಸಮಾಲೋಚಿಸಿ ಐದು ತಿಂಗಳ ಕಾಲಾವಕಾಶದೊಂದಿಗೆ ಈ ಕೆಳಕಂಡ

ಅಂಶಗಳನ್ನೊಳಗೊಂಡ Scope of work ಅನ್ನು ನಿರ್ವಹಿಸುವ ಬಗ್ಗೆ ಅಗತ್ಯವಿರುವ ಆರ್ಥಿಕ ಬಿಡ್‌ಅನ್ನು ಸಲ್ಲಿಸಲು ದಿನಾಂಕಃ 21-04-2012ರಂದು ಪತ್ರವನ್ನು ಬರೆದು ಕೋರಲಾಗಿತ್ತು.

1. Scrutinizing and approving to technical proposal received from the selected turnkey contract.
2. Quality assurance services during the executing of work by deputing Engineers.

ಸದರಿ ವಿಷಯಕ್ಕೆ ಪ್ರತಿಕ್ರಿಯಿಸಿದ ಮೆಃ ಸ್ಟುಪ್ ಸಲಹೆಗಾರರರು ದಿನಾಂಕಃ 24-04-2012ರಂದು ಸಲ್ಲಿಸಿರುವ Financial offer ಪ್ರಸ್ತಾವನೆಯಲ್ಲಿ ಯೋಜನೆಗೆ ತಮ್ಮ ಸಲಹೆ, ಸೇವೆಯನ್ನು ಒದಗಿಸಲು ತಿಂಗಳಿಗೆ ರೂ. 95000.00 ಗಳಂತೆ ಒಟ್ಟಾರೆ 5 ತಿಂಗಳಿಗೆ ರೂ. 4.75 ಲಕ್ಷ (ಸೇವಾ ತೆರಿಗೆ ಹೊರತುಪಡಿಸಿ) ಗಳಿಗೆ ಸಲ್ಲಿಸಿರುತ್ತಾರೆ.

ಆದಕಾರಣ, ಈ ಯೋಜನೆಗೆ ತುರ್ತಾಗಿ ಸಲಹೆಗಾರರರ ಸೇವೆಯು ಅಗತ್ಯವಿರುವುದರಿಂದ ಸ್ಟುಪ್ ಸಲಹೆಗಾರರ ಸೇವೆಯನ್ನು ಕರ್ನಾಟಕ ಪಾರದರ್ಶಕ ಕಾಯ್ದೆ ಕಲಂ 28ಇ ಅನ್ವಯ ಪಡೆಯಲು ಹಾಗೂ ಸಲಹೆಗಾರರು ಕೋರಿರುವಂತೆ ಮಾಹೆಯಾನ ರೂ. 65000.00ಗಳಂತೆ 5 ತಿಂಗಳಿಗೆ ಒಟ್ಟು ಮೊತ್ತ ರೂ. 4.75 ಲಕ್ಷಗಳ (ಸೇವಾ ತೆರಿಗೆ ಹೊರತುಪಡಿಸಿ) ಮೊತ್ತಕ್ಕೆ ನೇಮಿಸಿಕೊಳ್ಳುವ ಬಗ್ಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಆಯುಕ್ತರವರ ಟಿಪ್ಪಣಿ.

**ನಿರ್ಣಯಃ ಆಯಕ್ತರ ಟಿಪ್ಪಣಿ ದಿನಾಂಕಃ 02-06-2012ರ ಅಂಶಗಳನ್ನು ಸಮಿತಿಯು ಒಪ್ಪಿದೆ.**

## 10] ವಿಷಯ ಸಂಖ್ಯೆಃ18/2012-13

ವಿಶೇಷ ಆಯುಕ್ತರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೊಮ್ಮನಹಳ್ಳಿ ವಲಯ ವ್ಯಾಪ್ತಿಯ ವಾರ್ಡ್ ಸಂಖ್ಯೆಃ 190ರಲ್ಲಿ ಮಂಗಮ್ಮನ ಪಾಳ್ಯದ ಹೊಸೂರು ರಸ್ತೆಯಲ್ಲಿನ K-203 ಹೊಸೂರು ಸೇತುವೆಯಿಂದ ಬಡಾವಣೆಯ ಬಾಕಿ ಉಳಿದಿರುವ ಕಾಮಗಾರಿಯ K-200 ರ ವರೆವಿಗೂ ಮಳೆ ಚರಂಡಿ ನಿರ್ಮಿಸುವುದು ಅವಶ್ಯಕವಿದ್ದು, ಇದಕ್ಕಾಗಿ ರೂ. 90.00 ಲಕ್ಷಗಳಿಗೆ ಅಂದಾಜು ಪಟ್ಟಿ ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು, ಕರ್ನಾಟಕ ಪಾರದರ್ಶಕ ನಿಯಮಾವಳಿಯಂತೆ ಟೆಂಡರ್‌ಅನ್ನು ದಿನಾಂಕಃ02-11-2011ರಂದು ಕರೆಯಲಾಗಿದ್ದು, ಇಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು, Tender evaluation ಮಾಡಿದಾಗ ಶ್ರೀ. ಜಿ.ಎಮ್.ರವೀಂದ್ರ ಇವರು ರೂ. 10511438/-ಅನ್ನು ನಮೂದಿಸಿದ್ದು, 2010-11ರ ದರಪಟ್ಟಿಗೆ ಹೋಲಿಸಿದಾಗ ಶೇಕಡ 19.93 ರಷ್ಟು ಹೆಚ್ಚುವರಿ ಇದ್ದು, ಮತ್ತು 2011-12ರ ದರಪಟ್ಟಿಗೆ ಹೋಲಿಸಿದಾಗ ಶೇಕಡ 6.08 ರಷ್ಟು ಹೆಚ್ಚುವರಿ ದರವನ್ನು ನಮೂದಿಸಿದ್ದು, ಇವರು L1 ಗುತ್ತಿಗೆದಾರರಾಗಿರುತ್ತಾರೆ. ಕೋಡಿಹಳ್ಳಿ ಸುಬ್ಬಾರೆಡ್ಡಿ ಇವರು ರೂ. 10668962.70 ಅನ್ನು ನಮೂದಿಸಿದ್ದು, ಇವರು L2 ಆಗಿರುತ್ತಾರೆ.

ಈ ಕಾಮಗಾರಿಯು ಅವಶ್ಯಕತೆ ಇರುವುದರಿಂದ ಶೇಕಡ 19.93 ರಷ್ಟು 2010-11ನೇ ಸಾಲಿನಲ್ಲಿ ಮತ್ತು ಶೇಕಡ 6.08 ರಷ್ಟು 2011-12ನೇ ಸಾಲಿನ ದರಗಳಿಗೆ ಹೆಚ್ಚುವರಿ ದರ ನಮೂದಿಸಿರುವ ಶ್ರೀ. ಎಮ್.ಜಿ.ರವೀಂದ್ರ ಇವರಿಗೆ ಟೆಂಡರ್ ರೂ. 10511438/-ಗಳಿಗೆ ಅನುಮೋದನೆ ನೀಡಲು ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರವರ ಟಿಪ್ಪಣಿ.

**ನಿರ್ಣಯಃ ದಿನಾಂಕಃ 21-06-2012ರ ವಿಶೇಷ ಆಯುಕ್ತರ ಟಿಪ್ಪಣಿಯನ್ನು ಒಪ್ಪಲಾಯಿತು.**

## 11] ವಿಷಯ ಸಂಖ್ಯೆ:19/2012-13

**ವಿಷಯ:** Improvements, Strengthening & Asphalting to Internal Roads & Construction of Underpass at Big Bazaar junction in EPIP zone, Whitefield, Bangalore under Phase-II ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ.

**ಉಲ್ಲೇಖ** 1) ಕೈಗಾರಿಕಾ ಅಭಿವೃದ್ಧಿ ಆಯುಕ್ತರು ಮತ್ತು ನಿರ್ದೇಶಕರು ಇವರ ಪತ್ರದ ಸಂಖ್ಯೆ: VITC/ASIDE/2010-11/957, ದಿನಾಂಕ: 06/12/2010.

2) ವ್ಯವಸ್ಥಾಪಕ ನಿರ್ದೇಶಕರು ವಿಶ್ವೇಶ್ವರಯ್ಯ ಕೈಗಾರಿಕಾ ಕೇಂದ್ರ, (VITC) ಬೆಂಗಳೂರು, ಇವರ ಪತ್ರ ಸಂಖ್ಯೆ: VITC/ASIDE/2010-11/1015, ದಿನಾಂಕ: 08/12/2010

3)ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:16(242)/2010-11 ದಿನಾಂಕ:24/02/2011.

*****

ಅಪರ ಆಯುಕ್ತರವರು(ಯೋಜನೆ) ರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೆಂಗಳೂರು ವೈಟ್‌ಫೀಲ್ಡ್‌ನ Export Promotion Industrial Park (EPIP) ನಲ್ಲಿ ಬರುವ ವಿವಿಧ ರಸ್ತೆಗಳ ಅಭಿವೃದ್ಧಿ, ಡಾಂಬರೀಕರಣ ಕಾಮಗಾರಿಗಳ ಹಾಗೂ ಅಂಡರ್‌ಪಾಸ್‌ನ್ನು ನಿರ್ಮಾಣ ಮಾಡಲು ರೂ.46.00 ಕೋಟಿಗಳ ಪ್ರಸ್ತಾವನೆಗೆ ಕೇಂದ್ರ ಸರ್ಕಾರದ ವಾಣಿಜ್ಯ ಇಲಾಖೆಯು ಅನುಮೋದನೆ ನೀಡಿರುತ್ತದೆ. ಈ ಯೋಜನೆಗೆ ರೂ.20.00 ಕೋಟಿಗಳನ್ನು ASIDE (Assistance to States for Infrastructure Development and Exports) ಯೋಜನೆಯಡಿ ವಿಶೇಷ ಅನುದಾನವನ್ನಾಗಿ ಒದಗಿಸಲಾಗಿದೆ. ಸದರಿ ಯೋಜನೆಯ Funding pattern ಈ ಕೆಳಕಂಡಂತಿರುತ್ತದೆ.

| | |
|---|---|
| ASIDE Scheme | ರೂ.20.00 ಕೋಟಿಗಳು |
| BBMP Share | ರೂ.26.00 ಕೋಟಿಗಳು |
| ಒಟ್ಟು | ರೂ.46.00 ಕೋಟಿಗಳು |

ಈ ಯೋಜನೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ರೂ.26.00 ಕೋಟಿಗಳ ಅನುದಾನವನ್ನು ಕಲ್ಪಿಸಬೇಕಾಗಿರುತ್ತದೆ. ಉಲ್ಲೇಖ (3) ರಲ್ಲಿ ಬೆಂಗಳೂರು ವೈಟ್‌ಫೀಲ್ಡ್‌ನ ವಿಶೇಷವಿತ್ತ ವಲಯದ Export Promotion Industrial Park (EPIP) ವಲಯದಲ್ಲಿ 2ನೇ ಹಂತದಲ್ಲಿ ಬರುವ ರಸ್ತೆಗಳ ಅಭಿವೃದ್ಧಿ ಮತ್ತು ಡಾಂಬರೀಕರಣ ಕಾಮಗಾರಿ ಹಾಗೂ ಅಂಡರ್‌ಪಾಸ್ ನಿರ್ಮಾಣದ ವಿವರವಾದ ಯೋಜನಾ ವರದಿಯನ್ನು 2009-10 ನೇ ಸಾಲಿನ ದರಗಳನ್ವಯ ಹಾಗೂ ಅನುಮೋದಿತ ಡೇಟಾ ದರಗಳ ಪ್ರಕಾರ ರೂ.46.00 ಕೋಟಿಗಳ ಅಂದಾಜನ್ನು ತಯಾರಿಸಲಾಗಿದ್ದು, ಅಂದಾಜಿಗೆ ಮುಖ್ಯ ಇಂಜಿನಿಯರ್, ರಸ್ತೆ ಮೂಲಭೂತ ಸೌಕರ್ಯ, ಇವರ ದಾಖಲು ಪಟ್ಟಿ ಸಂಖ್ಯೆ: CE/MR/TS/30/2011-12 ದಿನಾಂಕ:02/07/2011 ರಂದು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ. ಸದರಿ ಕಾಮಗಾರಿಗೆ ಘನ ಸರ್ಕಾರದ ಆಡಳಿತಾತ್ಮಕ ಅನುಮೋದನೆಯನ್ನು ನಿರೀಕ್ಷಿಸಿ ಟೆಂಡರ್ ಕರೆದು ತದನಂತರ ಟೆಂಡರ್ ಮತ್ತು ಆಡಳಿತಾತ್ಮಕ ಅನುಮೋದನೆಗಾಗಿ ಘನ ಸರ್ಕಾರಕ್ಕೆ ಸಲ್ಲಿಸುವ ಪ್ರಸ್ತಾವನೆಗೆ ಪಾಲಿಕೆಯು ವಿಷಯದ ಸಂಖ್ಯೆ: 16(242)/2010-11ದಿನಾಂಕ:24/02/2011 ಅನುಮೋದನೆ ನೀಡಿರುತ್ತದೆ.

ಸದರಿ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ ವಿಶೇಷ ವಿಭಾಗ-1 ರವರು ದಿನಾಂಕ:08/07/2011 ರಂದು E-Procurement ಮೂಲಕ ಟೆಂಡರ್ ಆಹ್ವಾನಿಸಿರುತ್ತಾರೆ. ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ ಏಕೈಕ ಗುತ್ತಿಗೆದಾರರು ಭಾಗವಹಿಸಿದ್ದ ಕಾರಣ ಟೆಂಡರ್‌ನ್ನು ರದ್ದುಪಡಿಸಿ, ದಿನಾಂಕ:09/11/2011 ರಂದು ಪುನಃ 2ನೇ ಭಾರಿಗೆ ಟೆಂಡರ್ ಆಹ್ವಾನಿಸಿರುತ್ತಾರೆ.

2ನೇ ಟೆಂಡರ್ ಕರೆಗೆ ಮೆ// ಜಿ.ವಿ.ಆರ್ ಇನ್ಫ್ರಾ ಪ್ರಾಜೆಕ್ಟ್ ಲಿ. ಮತ್ತು ಮೆ// ಇಂಜಿನಿಯರಿಂಗ್ ಪ್ರಾಜೆಕ್ಟ್ಸ್ ಇಂಡಿಯಾ ಲಿ. ಇವರು ಟೆಂಡರ್ ಸಲ್ಲಿಸಿದ್ದು, ಇಬ್ಬರೂ ಯಶಸ್ವಿ ಬಿಡ್ಡುದಾರರಾಗಿದ್ದು, ಸದರಿ

ಬಿಡ್ಡನ್ನು ಮೌಲ್ಯಮಾಪನ ಮಾಡಲಾಗಿದ್ದು, ಮೆ// ಜಿ.ವಿ.ಆರ್ ಇನ್ಫ್ರಾ ಪ್ರಾಜೆಕ್ಟ್ ಲಿ. ರವರು ತಾಂತ್ರಿಕ ಮೌಲ್ಯ ಮಾಪನದಲ್ಲಿ ಅರ್ಹರಾಗಿರುತ್ತಾರೆ.

ತಾಂತ್ರಿಕ ಮೌಲ್ಯ ಮಾಪನದಲ್ಲಿ ಅರ್ಹರಾದ ಮೆ// ಜಿ.ವಿ.ಆರ್ ಇನ್ಫ್ರಾ ಪ್ರಾಜೆಕ್ಟ್ ಲಿಮಿಟೆಡ್ ರವರ ಆರ್ಥಿಕ ಬಿಡ್ಡನ್ನು ತೆರೆಯಲಾಗಿ ವಿವರ ಈ ಕೆಳಕಂಡಂತಿರುತ್ತದೆ.

| ಕ್ರ. ಸ | ತಾಂತ್ರಿಕ ಮೌಲ್ಯ ಮಾಪನದಲ್ಲಿ ಅರ್ಹರಾದ ಗುತ್ತಿಗೆದಾರರ ವಿವರ | ಟೆಂಡರ್‌ಗಿಟ್ಟ ಮೊತ್ತ ರೂ. | ಗುತ್ತಿಗೆದಾರರು ನಮೂದಿಸಿರುವ ಮೊತ್ತ ರೂ. | ಶೇಕಡವಾರು ಹೆಚ್ಚು/ಕಡಿಮೆ (2010–11 ನೇ ಸಾಲಿನ ದರಪಟ್ಟಿಗೆ ಹೋಲಿಸಿದಾಗ) | ಶೇಕಡವಾರು ಹೆಚ್ಚು/ಕಡಿಮೆ (2011–12 ನೇ ಸಾಲಿನ ದರಪಟ್ಟಿಗೆ ಹೋಲಿಸಿದಾಗ) |
|---|---|---|---|---|---|
| 1 | ಮೆ// ಜಿ.ವಿ.ಆರ್ ಇನ್ಫ್ರಾ ಪ್ರಾಜೆಕ್ಟ್ ಲಿಮಿಟೆಡ್ | 41,15,15,142.00 | 47,25,24,867.00 | 14.83% ಹೆಚ್ಚು | 9.47% ಹೆಚ್ಚು |

ಸದರಿ ಗುತ್ತಿಗೆದಾರರು ನಮೂದಿಸಿರುವ ಟೆಂಡರ್ ದರಗಳನ್ನು ಚಾಲ್ತಿಯಲ್ಲಿರುವ 2011–12ನೇ ಸಾಲಿನ ದರಪಟ್ಟಿಗೆ ಹೋಲಿಸಿದಾಗ ಟೆಂಡರ್ ದರವು ಶೇ 9.47 ರಷ್ಟು ಹೆಚ್ಚಾಗಿರುತ್ತದೆ. ಈ ದರಗಳು ಹೆಚ್ಚಾಗಿರುವುದು ಕಂಡು ಬಂದಿರುವುದರಿಂದ ಸದರಿ ಗುತ್ತಿಗೆದಾರರೊಡನೆ ಸಂಧಾನ ನಡೆಸಲಾಗಿ, ಅಂತಿಮವಾಗಿ ರೂ.47,06,28,912/– ಗಳಿಗೆ ಒಪ್ಪಿರುತ್ತಾರೆ. (2011–12ನೇ ಸಾಲಿನ ದರಪಟ್ಟಿಗೆ ಹೋಲಿಸಿದಾಗ ಟೆಂಡರ್ ದರವು ಶೇ 9.15 ರಷ್ಟು ಹೆಚ್ಚಾಗಿರುತ್ತದೆ) ವಿವರಗಳು ಈ ಕೆಳಕಂಡಂತಿರುತ್ತದೆ.

| ಕ್ರ. ಸ | ತಾಂತ್ರಿಕ ಮೌಲ್ಯ ಮಾಪನದಲ್ಲಿ ಅರ್ಹರಾದ ಗುತ್ತಿಗೆದಾರರ ವಿವರ | ಟೆಂಡರ್‌ಗಿಟ್ಟ ಮೊತ್ತ ರೂ. | ಗುತ್ತಿಗೆದಾರರು ನಮೂದಿಸಿರುವ ಮೂಲ ಟೆಂಡರ್ ಮೊತ್ತ ರೂ. | ಸಂಧಾನದ ನಂತರ ಗುತ್ತಿಗೆದಾರರು ನಮೂದಿಸಿರುವ ಮೊತ್ತ ರೂ. | ಸಂಧಾನದ ನಂತರ 2010–11 ನೇ ಸಾಲಿನ ದರಪಟ್ಟಿಗೆ ಹೋಲಿಸಿದಾಗ ಟೆಂಡರ್ ದರ | ಸಂಧಾನದ ನಂತರ 2011–12 ನೇ ಸಾಲಿನ ದರಪಟ್ಟಿಗೆ ಹೋಲಿಸಿದಾಗ ಟೆಂಡರ್ ದರ |
|---|---|---|---|---|---|---|
| 1 | ಮೆ// ಜಿ.ವಿ.ಆರ್ ಇನ್ಫ್ರಾ ಪ್ರಾಜೆಕ್ಟ್ ಲಿಮಿಟೆಡ್ | 41,15,15,142.00 | 47,25,24,867.00 | 47,06,28,912.40 | 14.36% ಹೆಚ್ಚು | 9.15% ಹೆಚ್ಚು |

ಸದರಿ ಕಾಮಗಾರಿಯ ಟೆಂಡರ್‌ನಲ್ಲಿ ಭಾಗವಹಿಸಿದ ಯಶಸ್ವಿ ಬಿಡ್ಡುದಾರರಾದ ಮೆ// ಜಿ.ವಿ.ಆರ್ ಇನ್ಫ್ರಾ ಪ್ರಾಜೆಕ್ಟ್ ಲಿಮಿಟೆಡ್ ರವರು ಸಂಧಾನದ ನಂತರ 2011–12 ನೇ ಸಾಲಿನ ದರಪಟ್ಟಿಗೆ ಹೋಲಿಸಿದಾಗ ನಮೂದಿಸಿರುವ ಟೆಂಡರ್ ದರವು ಶೇ. 9.15 ರಷ್ಟು ಹೆಚ್ಚುವರಿಯಾಗಿದ್ದು, ಸದರಿ ನಮೂದಿಸಿರುವ ದರವು ಸಮಂಜಸವಾಗಿರುವ ಹಿನ್ನಲೆಯಲ್ಲಿ, ಸದರಿ ಟೆಂಡರ್ ಮೊತ್ತ ರೂ. 47,06,28,912.40/– ಗಳ ಮೆ// ಜಿ.ವಿ.ಆರ್ ಇನ್ಫ್ರಾ ಪ್ರಾಜೆಕ್ಟ್ ಲಿಮಿಟೆಡ್ ರವರ ಗುತ್ತಿಗೆಯ ಅನುಮೋದನೆಗಾಗಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಅಪರ ಆಯುಕ್ತರು(ಯೋಜನೆ) ರವರ ಟಿಪ್ಪಣಿ.

**: ಮುಂದೂಡಿದೆ :**

## 12] ವಿಷಯ ಸಂಖ್ಯೆಃ20/2012–13

ವಿಶೇಷ ಆಯುಕ್ತರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಸಿರ್ಸಿ ವೃತ್ತದ ಮೇಲು ಸೇತುವೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯವತಿಯಿಂದ 1999–2000ನೇ ಇಸವಿಯಲ್ಲಿ ನಿರ್ಮಾಣ ಮಾಡಲಾಗಿರುತ್ತದೆ. ಈ ಮೇಲು ಸೇತುವೆಗೆ ಈವರೆಗೆ ಯಾವುದೇ ರೀತಿಯ ನಿರ್ವಹಣಾ ಕಾಮಗಾರಿಗಳನ್ನು ಕೈಗೆತ್ತಕೊಂಡಿರುವುದಿಲ್ಲ ಮೇಲು ಸೇತುವೆಯಲ್ಲಿ ಅಳವಡಿಸಿರುವ ಎಕ್ಸ್‌ಪ್ಯಾನ್ಷನ್ ಜಾಯಿಂಟ್‌ಗಳು ಶಿಥಿಲಗೊಂಡಿದ್ದು ರಸ್ತೆಯ ಮೇಲ್ಪದರು ಕಿತ್ತುಹೋಗಿ ದುರಸ್ತಿಯಲ್ಲಿದ್ದು ಮರು ಡಾಂಬರು ಮಾಡುವ ಅವಶ್ಯಕವಿರುವುದರಿಂದ ಹಾಗೂ ಇನ್ನಿತರ ಸಿವಿಲ್ ಕಾಮಗಾರಿಗಳನ್ನು ನಿರ್ವಹಿಸುವ ಅಗತ್ಯವಿದ್ದು ಈ ಎಲ್ಲಾ ಅಗತ್ಯ ದುರಸ್ತಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಫಿಂಗರ್ ಜಾಯಿಂಟ್ ಅಳವಡಿಸಲು ಹಾಗೂ ದುರಸ್ತಿ ಕಾಮಗಾರಿಗಳಿಗೆ ಮೇಲುಸೇತುವೆಯ ಒಟ್ಟು 2007–08ನೇ ಸಾಲಿನ ಆಧಾರದ ಮೇಲೆ ಅಂದಾಜುಪಟ್ಟಿಯನ್ನು ತಯಾರಿಸಲಾಗಿರುತ್ತದೆ ವಿವರಗಳು ಈ ಕೆಳಕಂಡಂತಿರುತ್ತದೆ.

| | | |
|---|---|---|
| 1. Finger type Expansion joints | - | 2,67,03,070.00 |
| 2. Civil works | - | 1,68,16,930.00 |
| Total | - | 4,35,20,000.00 |

ಸದರಿ ಮೇಲುಸೇತುವೆ ದುರಸ್ತಿ ಯೋಜನೆಗೆ ಒಟ್ಟು ಅಂದಾಜುಮೊತ್ತ ರೂ. 4,35,20,000.00ಗಳಿಗೆ ದಿನಾಂಕಃ 03–03–2012ರಂದು ನಡೆದ ಪಾಲಿಕೆಯ ಸಭೆಯಲ್ಲಿ ವಿಷಯದ ಸಂಖ್ಯೆಃ 63(303)/2011–12ರಲ್ಲಿ ಈ ವಿಷಯದಲ್ಲಿ ಪ್ರಸ್ತಾಪಗೊಂಡಿದ್ದು ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುತ್ತದೆ. ಹಾಲಿ ಮೇಲುಸೇತುವೆಯಲ್ಲಿ ಅಳವಡಿಸಿರುವ ಎಕ್ಸ್‌ಪ್ಯಾನ್ಷನ್ ಜಾಯಿಂಟ್‌ಗಳನ್ನು ಬದಲಾಯಿಸುವ ಕಾಮಗಾರಿಗೆ ಈಗಾಗಲೇ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಸಿವಿಲ್ ಮತ್ತು ಬಿಟುಮಿನ್ ಕಾಮಗಾರಿಗೆ ಸಂಬಂಧಿಸಿದಂತೆ 8ನೇ ಕರೆಯನ್ನು ಮುಖ್ಯ ಅಭಿಯಂತರರು(ಪಶ್ಚಿಮ) ರವರಿಂದ ಆಹ್ವಾನಿಸಲಾಗಿತ್ತು ಆದರೆ ಗುತ್ತಿಗೆದಾರರರು ಟೆಂಡರ್ ಕಾಲಾವಧಿಯನ್ನು ವಿಸ್ತರಿಸದೇ ಇದ್ದುದರಿಂದ ಆಯುಕ್ತರ ಆದೇಶ ರೀತ್ಯಾ ಸಿವಿಲ್ ಮತ್ತು ಬಿಟುವಿನ್ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು (ಯೋಜನೆ ಕೇಂದ್ರ–1)ರ ವಿಭಾಗದಿಂದ 9ನೇ ಕರೆಯ ಟೆಂಡರ್‌ಅನ್ನು ಇ–ಪೋರ್ಟಲ್ ಮುಖೇನ ದಿನಾಂಕಃ 14–03–2012ರಂದು ಆಹ್ವಾನಿಸಲಾಗಿರುತ್ತದೆ. 9ನೇ ಕರೆಯ ಟೆಂಡರಿನಲ್ಲಿ ಭಾಗವಹಿಸಿದ್ದ ಏಕಮಾತ್ರ ಟೆಂಡರ್‌ದಾರರಾದ ಶ್ರೀ. ಎಂ.ಡಿ. ನಜ್ಮುದ್ದೀನ್( ಮೆಃ ಆರ್ಟರಿ ಇನ್‌ಫ್ರಾ ಪ್ರೈ.ಲಿ) ರವರು ಭಾಗವಹಿಸಿದ್ದು ಸದರಿಯವರು ಸಲ್ಲಿಸಿದ್ದ ತಾಂತ್ರಿಕ ಬಿಡ್‌ಅನ್ನು ದಿನಾಂಕಃ 11–04–2012ರಂದು ತೆರೆಯಲಾಗಿ ಗುತ್ತಿಗೆದಾರರು ತಾಂತ್ರಿಕವಾಗಿ ಅರ್ಹರಾಗಿರುವ ಹಿನ್ನೆಲೆಯಲ್ಲಿ ದಿನಾಂಕಃ 26–04–2012ರಂದು ಆಥಿಕ ಬಿಡ್‌ಅನ್ನು ತೆರೆಯಲಾಗಿ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದ ಏಕಮಾತ್ರ ಬಿಡ್‌ದಾರರಾದ ಶ್ರೀ. ನಜ್ಮುದ್ದೀನ್ (ಮೆಃ ಆರ್ಟರಿ ಇನ್‌ಫ್ರಾ ಪ್ರೈ.ಲಿ) ರವರು ರೂ. 2,22,61,135–00ಗಳ ಮೊತ್ತದ ಆರ್ಥಿಕ ಬಿಡ್‌ಅನ್ನು ಸಲ್ಲಿಸಿರುತ್ತಾರೆ. ಸದರಿ ಟೆಂಡರ್‌ಅನ್ನು P.W.D ಎಸ್.ಆರ್ 2007–08 ಹಾಗೂ ರಾಷ್ಟ್ರೀಯ ಹೆದ್ದಾರಿ ಎಸ್.ಆರ್. 2007–08ರ ಅಂದಾಜುಪಟ್ಟಿಯ ಪ್ರಕಾರ ಒಟ್ಟು ಮೊತ್ತ ರೂ. 1,68,20,000.00 ಗಳಿಗೆ ಹೋಲಿಸಿದಾಗ ಮೊತ್ತವು ಶೇಕಡ 39.88ರಷ್ಟು ಹೆಚ್ಚಾಗಿರುತ್ತದೆ. ಹಾಗೂ ಟೆಂಡರ್ ಮೊತ್ತವನ್ನು ಪ್ರಸ್ತುತ P.W.D 2010–11ರ ದರಪಟ್ಟಿ ಮತ್ತು ರಾಷ್ಟ್ರೀಯ ಹೆದ್ದಾರಿ ಇಲಾಖೆಯ ದರಪಟ್ಟಿ 2010–11 ಹಾಗೂ ಬಿಟುಮಿನ್ ಮತ್ತು ಸಿಮೆಂಟಿನ ಇಷ್ಯೂ ರೇಟ್‌ಗಳ ದರಪಟ್ಟಿಗೆ ಹೋಲಿಸಿದಾಗ ಸದರಿ ಟೆಂಡರ್‌ಗೆ ಶ್ರೀ. ನಜ್ಮುದ್ದೀನ್(ಮೆಃ ಆರ್ಟರಿ ಇನ್‌ಫ್ರಾ ಪ್ರೈ. ಲಿ )ರವರು ನಮೂದಿಸಿರುವ ಮೊತ್ತವು ಶೇಕಡ 6.6 ರಷ್ಟು ಕಡಿಮೆ ಇರುತ್ತದೆ.

ಈಗಾಗಲೇ ಸಿರ್ಸಿ ವೃತ್ತದ ಮೇಲುಸೇತುವೆಯ ದುರಸ್ತಿ ಕಾರ್ಯಗಳಲ್ಲಿ ಒಂದಾದ ಎಕ್ಸ್‌ಪ್ಯಾನ್ಷನ್ ಜಾಯಿಂಟ್‌ಗಳ ಬದಲಾಣೆಯ ಕಾಮಗಾರಿಯು ಪ್ರಾರಂಭಿಕ ಹಂತದಲ್ಲಿದ್ದು ದುರಸ್ಥಿ ಕಾಮಗಾರಿಯನ್ನೂ ಸಹ ಏಕಕಾಲದಲ್ಲಿ ನಿರ್ವಹಿಸುವ ಅವಶ್ಯಕತೆ ಇರುವುದರಿಂದ 9ನೇ ಟೆಂಡರ್ ಕರೆಯಲ್ಲಿ ಭಾಗವಹಿಸಿರುವ ಏಕಮಾತ್ರ ಬಿಡ್ಡುದಾರರಾದ ಮೆಃ ಆರ್ಟರಿ ಇನ್‌ಫ್ರಾ ಪ್ರೈ.ಲಿ. ರವರು 2007–08ನೇ ಸಾಲಿನ ದರ ಪಟ್ಟಿಯ

ದರಗಳ ಮೇಲೆ ಸಲ್ಲಿಸಲಾಗಿರುವ ಶೇಕಡ 39.88ರಷ್ಟು ಹೆಚ್ಚುವರಿ ಹಾಗೂ 2010–11ನೇ ಸಾಲಿನ ದರಪಟ್ಟಿಯ ದರಗಳ ಮೇಲೆ ಸಲ್ಲಿಸಿರುವ ಶೇಕಡ 6.60 ರಷ್ಟು ಕಡಿಮೆ ದರದ ಮೊತ್ತ ರೂ. 2,22,61,135–00ಗಳಿಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯಃ ದಿನಾಂಕಃ 23–05–2012ರ ವಿಶೇಷ ಆಯುಕ್ತರು(ಯೋಜನೆ) ರವರ ಟಿಪ್ಪಣಿಯನ್ನು ಒಪ್ಪಿದೆ.**

## 13] ವಿಷಯ ಸಂಖ್ಯೆಃ21/2012–13

ವಿಶೇಷ ಆಯುಕ್ತರವರು (ಯೋಜನೆ) ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಬೃಹತ್ ಮಳೆ ನೀರುಗಾಲುವೆಯ ಸರಹದ್ದು ಮತ್ತು ಒತ್ತುವರಿಗಳನ್ನು ಗುರುತಿಸಲು ಸರ್ವೆಕ್ಷಣೆ ಕಾರ್ಯ ಮಾಡಲು Conducting revenue survey to fix boundary to identify encroachments and digitization of SWD in BBMP area ಕಾಮಗಾರಿಯನ್ನು ರೂ. 113.12 ಲಕ್ಷಗಳಿಗೆ ಅಂದಾಜಿಸಿ ಅಗತ್ಯವಿರುವ ಆಡಳಿತಾತ್ಮಕ ಅನುಮೋದನೆಯನ್ನು ಬೃಹತ್ ಕಾಮಗಾರಿ ಸ್ಥಾಯಿ ಸಮಿತಿ ಸಭೆಯ ದಿನಾಂಕಃ 22–03–2012ರಂದು ನಡೆದ ಸಭೆಯ ವಿಷಯದ ಸಂಖ್ಯೆಃ 207/2011–12ರ ನಡವಳಿಯಂತೆ ಪಡೆಯಲಾಗಿದೆ.

ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ಬೃಹತ್ ಮಳೆ ನೀರುಗಾಲುವೆಗಳ ಒತ್ತುವರಿ ತೆರವುಗೊಳಿಸಬೇಕಾಗಿರುವ ಜರೂರತೆಯ ಹಿನ್ನಲೆಯಲ್ಲಿ ಸ್ಥಾಯಿ ಸಮಿತಿಯ ಅನುಮೋದನೆ ನಿರೀಕ್ಷಿಸಿ ಟೆಂಡರ್ ಪ್ರಕ್ರಿಯೆ ಕೈಗೊಳ್ಳಲಾಗಿದೆ. ಇದರಂತೆ ದಿನಾಂಕಃ 30–03–2012ರಂದು ಮೊದಲನೇ ಬಾರಿ ಟೆಂಡರ್ ಅಧಿಸೂಚನೆಯನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಹೊರಡಿಸಲಾಯಿತು. ಟೆಂಡರ್ ಸಲ್ಲಿಸಲು ಕಡೆಯ ದಿನಾಂಕವಾಗಿದ್ದ 11–04–2012ರಂದು ಕೆಳಕಂಡಂತೆ ಇಬ್ಬರು ಬಿಡ್ಡುದಾರರು ಟೆಂಡರ್ ಸಲ್ಲಿಸಿರುತ್ತಾರೆ.

1. M/s. Ceva consultants, Nanded, Maharastra.
2. M/s. Alcon consulting Engineers and architects, Bangalore.

ಮೇಲ್ಕಂಡ ಸಲಹೆಗಾರರು ಸಲ್ಲಿಸಿದ್ದ ದಾಖಲೆಗಳನ್ನು ಪರಿಶೀಲಿಸಲಾಗಿ ತಾಂತ್ರಿಕವಾಗಿ ಸಲಹೆಗಾರರನ್ನು ಅರ್ಹರೆಂದು ಘೋಷಿಸಿದ ನಂತರ, ಇವರು ಸಲ್ಲಿಸಿದ್ದ ಆರ್ಥಿಕ ಬಿಡ್‌ಗಳನ್ನು ದಿನಾಂಕಃ 18–04–2012ರಂದು ತೆರೆಯಲಾಗಿ ಕೆಳಕಂಡಂತೆ ಒಟ್ಟಾರೆ ಮೊತ್ತವನ್ನು ನಮೂದಿಸಿರುತ್ತಾರೆ.

| | | |
|---|---|---|
| 1 | M/s. Ceva consultants, ರವರು ನಮೂದಿಸಿರುವ ಮೊತ್ತ ರೂ. | 2,45,10,500/- |
| 2 | M/s. Alcon consulting Engineers and architects ರವರು ನಮೂದಿಸಿರುವ ಮೊತ್ತ ರೂ. | 8,66,63,268/- |

ರೂ. 2,45,10,500/– ಗಳನ್ನು ನಮೂದಿಸಿರುವ M/s. Ceva consultants ರವರು ಕಡಿಮೆ ಬಿಡ್ಡುದಾರರಾಗಿರುತ್ತಾರೆ. ಇವರು ನಮೂದಿಸಿರುವ ದರವು ಹೆಚ್ಚೆಂದು ಭಾವಿಸಿ, ಇವರೊಂದಿಗೆ, ದಿನಾಂಕಃ 28–04–2012ರಂದು ದರ ಸಂಧಾನ ನಡೆಸಿ ದರವನ್ನು ಕಡಿಮೆಗೊಳಿಸಲಾಗಿದೆ. ಸಂಧಾನದ ನಂತರ ಇವರು ನಮೂದಿಸಿರುವ ದರವು ರೂ. 2,32,84,500/–ಗಳು ಆಗಿರುತ್ತದೆ.

ಮೇಲಿನ ಹಿನ್ನೆಲೆಯಲ್ಲಿ ಸದರಿ ಟೆಂಡರ್‌ನಲ್ಲಿ ಭಾಗವಹಿಸಿರುವ ಹಾಗೂ ಕಡಿಮೆ ಮೊತ್ತ ನಮೂದಿಸಿರುವ M/s. Ceva consultants ರವರ ಸಂಧಾನಿತ ಟೆಂಡರ್ ಮೊತ್ತ ರೂ. 2,32,84,500/–ಗಳಿಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರು(ಯೋಜನೆ) ರವರ ಟಿಪ್ಪಣಿ.

**ನಿರ್ಣಯಃ ದಿನಾಂಕಃ 24–05–2012ರ ವಿಶೇಷ ಆಯುಕ್ತರು (ಯೋ) ಇವರ ಟಿಪ್ಪಣಿಯನ್ನು ಒಪ್ಪಲಾಯಿತು.**

## 14] ವಿಷಯ ಸಂಖ್ಯೆ:22/2012–13

ವಿಶೇಷ ಆಯುಕ್ತರವರು (ಯೋಜನೆ) ಟಿಪ್ಪಣಿಯಲ್ಲಿ ವಿವರಿಸಿರುವಂತೆ, C-100 ಛಲಗಟ್ಟ ಮುಖ್ಯ ಕಣಿವೆಗೆ ವಾರ್ಡ್ ಸಂಖ್ಯೆ 114 ರಲ್ಲಿನ ಗೌತಮ್‌ಪುರ ಫುಟ್‌ಬಾಲ್ ಸ್ಟೇಡಿಯಂ ಬಳಿ ಹರಿಯುತ್ತಿರುವ ಸೆಕೆಂಡರಿ ಕಣಿವೆಯಾದ 'N4' New drain ISRO Layout ಬಳಿ ಬಂದು ಸೇರುತ್ತದೆ. ಗೌತಮ್‌ಪುರ ಫುಟ್‌ಬಾಲ್ ಸ್ಟೇಡಿಯಂ ಹಾಗೂ ದೀನಬಂಧು ನಗರ ಬಳಿ ಹರಿಯುತ್ತಿರುವ 'N4' ಚರಂಡಿಯಲ್ಲಿ ಕಲ್ಲು ಕಟ್ಟಡದ ತಡೆಗೋಡೆ ಬಿದ್ದುಹೋಗಿದ್ದು, ಸಾರ್ವಜನಿಕ ಓಡಾಟಕ್ಕೆ ಅಪಾಯಕಾರಿಯಾಗಿ ಪರಿಣಮಿಸಿದೆ. ಆದ್ದರಿಂದ ತುರ್ತಾಗಿ ಕಾಮಗಾರಿಯನ್ನು (Construction of RCC box and "U" shape drain to New drain "N4" at Gowthampura near football stadium, Bangalore in C.V.P-II) ಕೈಗೆತ್ತಿಕೊಳ್ಳಬೇಕಾಗಿದೆ. ಫುಟ್‌ಬಾಲ್ ಸ್ಟೇಡಿಯಂ ಬಳಿ ಶಾಶ್ವತ ಸ್ಟೇಡಿಯಂ ನಿರ್ಮಿಸಲು ಉದ್ದೇಶಿಸಿರುವುದರಿಂದ ಸದರಿ ಪ್ರದೇಶದಲ್ಲಿ ಬಾಕ್ಸ್ ಡ್ರೈನ್ ನಿರ್ಮಿಸಲು ಹಾಗೂ ಕೆಳ ಭಾಗದಲ್ಲಿನ ಗೌತಮಪುರದಲ್ಲಿ ಕಣಿವೆಯ ಅಗಲೀಕರಣ ಹಾಗೂ ಆಳ ಮಾಡಿ "U" Shape ಡ್ರೈನ್ ನಿರ್ಮಿಸಲು ಉದ್ದೇಶಿಸಲಾಗಿದೆ. ಮೇಲ್ಕಂಡ ಕಾಮಗಾರಿಗೆ KPWD 2010-11 ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ರೂ. 90.00 ಲಕ್ಷಗಳಿಗೆ ಅಂದಾಜನ್ನು ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಅನುಮೋದನೆ ಹಾಗೂ ಕಾಮಗಾರಿ ಸಂಕೇತ ಪಡೆಯಲಾಗಿದೆ.

ಈ ಕಾಮಗಾರಿಗೆ ದಿನಾಂಕಃ 27–01–2012ರಂದು ಟೆಂಡರ್ ಅಧಿಸೂಚನೆಯನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಹೊರಡಿಸಲಾಯಿತು. ಟೆಂಡರ್ ಸಲ್ಲಿಸಲು ಕಡೆಯ ದಿನಾಂಕವಾಗಿದ್ದ 0 9–02–2012ರಂದು ಕೆಳಕಂಡಂತೆ ಇಬ್ಬರು ಬಿಡ್ಡುದಾರರು ಟೆಂಡರ್ ಸಲ್ಲಿಸಿದ್ದು, ಇದರಲ್ಲಿ ಮೆ: ಕೆ.ವಿ.ಆರ್.ಕನ್ಸ್‌ಟ್ರಕ್ಷನ್ಸ್, ಪ್ರಥಮ ದರ್ಜೆ ಗುತ್ತಿಗೆದಾರರು, ದಾವಣಗೆರೆ ರವರು ಇ.ಎಂ.ಡಿ. ಯನ್ನು ಸಲ್ಲಿಸದೇ ಇದ್ದ ಕಾರಣ ಗುತ್ತಿಗೆಯು ರದ್ದಾಗಿದ್ದು, ಮತ್ತೊಬ್ಬ ಗುತ್ತಿಗೆದಾರರಾದ ಶ್ರೀ. ಕುಮಾರ್, ಪ್ರಥಮ ದರ್ಜೆ ಗುತ್ತಿಗೆದಾರರು, ಚನ್ನರಾಯಪಟ್ಟಣ, ಹಾಸನ ಜಿಲ್ಲೆ ಸಿಂಧುತ್ವವನ್ನು ಪಡೆದಿರುತ್ತಾರೆ.

ಶ್ರೀ.ಕುಮಾರ್, ಪ್ರಥಮ ದರ್ಜೆ ಗುತ್ತಿಗೆದಾರರು ಸಲ್ಲಸಿದ್ದ ದಾಖಲೆಗಳನ್ನು ಪರಿಶೀಲಿಸಲಾಗಿ ತಾಂತ್ರಿಕವಾಗಿ ಅರ್ಹರೆಂದು ಘೋಷಿಸಿದ ನಂತರ ಇವರುಗಳು ಸಲ್ಲಿಸಿದ್ದ ಆರ್ಥಿಕ ಬಿಡ್‌ಗಳನ್ನು ದಿನಾಂಕಃ 24–02–2012ರಂದು ತೆರೆಯಲಾಗಿದ್ದು ಕೆಳಕಂಡಂತೆ ಒಟ್ಟಾರೆ ಮೊತ್ತವನ್ನು ನಮೂದಿಸಿರುತ್ತಾರೆ.

| | | |
|---|---|---|
| 1 | ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ (2010–11ನೇ ಸಾಲಿನ ದರಪಟ್ಟಿಯಂತೆ) | ರೂ.77,04,879.00 |
| 2 | ಪ್ರಸಕ್ತ ಸಾಲಿನ ಅಂದರೆ 2011–12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗೆ ಇಟ್ಟ ಮೊತ್ತ | ರೂ.81,91,731.00 |
| 3 | ಬಿಡ್ಡುದಾರರಾದ ಶ್ರೀ. ಕುಮಾರ್ ರವರು ನಮೂದಿಸಿರುವ ಟೆಂಡರ್ ಮೊತ್ತ | ರೂ.88,56,450.00 |
| 4 | ಸಂಧಾನದ ನಂತರ ಶ್ರೀ.ಕುಮಾರ್ ರವರು ನಮೂದಿಸಿರುವ ಟೆಂಡರ್ ಮೊತ್ತ | ರೂ.87,56,635.00 |
| 5 | ಮಂಜೂರಾದ ಅಂದಾಜಿನಂತೆ ಟೆಂಡರಿಗಿಟ್ಟ ಮೊತ್ತದ ಮೇಲಿನ ಶೇಕಡವಾರು ಹೆಚ್ಚಳ/ ಕಡಿಮೆ | ಶೇಕಡ 13.65 ಹೆಚ್ಚುವರಿ |
| 6 | ಪ್ರಸಕ್ತ ಸಾಲಿನ ಅಂದರೆ 2011–12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಟೆಂಡರಿಗೆ ಇಟ್ಟ ಮೊತ್ತಕ್ಕೆ ಹೋಲಿಸಿದಾಗ (ಶೇಕಡವಾಗು ಹೆಚ್ಚಳ/ಕಡಿಮೆ) | ಶೇಕಡ 6.90 ಹೆಚ್ಚು |

ಸಂಧಾನ ನಂತರ ಏಕೈಕ ಬಿಡ್ಡುದಾರರಾಗಿರುವ ಶ್ರೀ.ಕುಮಾರ್‌ರವರು ನಮೂದಿಸಿರುವ ಮೊತ್ತವು ಮಂಜೂರಾದ ಅಂದಾಜಿನಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 13.65 ರಷ್ಟು ಹೆಚ್ಚುವರಿ ಇದ್ದು ಹಾಗೂ ಪ್ರಸಕ್ತ ಸಾಲಿನ ಅಂದರೆ 2011–12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಟೆಂಡರಿಗೆ ಇಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 6.90 ರಷ್ಟು ಹೆಚ್ಚು ಆಗಿದ್ದು ದರವು ಸ್ಪರ್ಧಾತ್ಮಕವಾಗಿರುವುದು ಕಂಡುಬಂದಿರುತ್ತದೆ.

ಮೇಲಿನ ಹಿನ್ನೆಲೆಯಲ್ಲಿ ಸದರಿ ಟೆಂಡರ್‌ನಲ್ಲಿ ಭಾಗವಹಿಸಿರುವ ಏಕೈಕ ಬಿಡ್ಡುದಾರರಾಗಿರುವ ಶ್ರೀ.ಕುಮಾರ್, ಪ್ರಥಮ ದರ್ಜೆ ಗುತ್ತಿಗೆದಾರರ ಟೆಂಡರ್ ಮೊತ್ತ ರೂ. 87,56,635/–(ಪ್ರಸಕ್ತ ಸಾಲಿನ ಅಂದರೆ 2011–12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಟೆಂಡರಿಗೆ ಇಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 6.9ರಷ್ಟು ಹೆಚ್ಚು) ಗಳಿಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ವಿಶೇಷ ಆಯುಕ್ತರವರ ಟಿಪ್ಪಣಿ.

**ನಿರ್ಣಯಃ ದಿನಾಂಕಃ 24–05–2012ರ ವಿಶೇಷ ಆಯುಕ್ತರು(ಯೋಜನೆ) ಇವರ ಟಿಪ್ಪಣಿಯನ್ನು ಒಪ್ಪಿದೆ**

## 15] ವಿಷಯ ಸಂಖ್ಯೆಃ23/2012–13

ವಿಶೇಷ ಆಯುಕ್ತರವರು (ಯೋಜನೆ) ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಚಲ್ಲಘಟ್ಟ ಮುಖ್ಯ ಕಣಿವೆ C-100 ಶಿವಾಜಿನಗರ ರಸೆಲ್ ಮಾರುಕಟ್ಟೆಯ ಬಳಿ ಹರಿಯುತ್ತಿದ್ದು ಪ್ರತಿ ಮಳೆಗಾಲದಲ್ಲೂ ಸದರಿ ಮಾರುಕಟ್ಟೆ ಪ್ರದೇಶವು ನೀರು ತುಂಬಿ ಹರಿದು ಸಾರ್ವಜನಿಕರ ಆಸ್ತಿಗೆ ಹಾಗೂ ಸ್ಥಳೀಯ ಅಂಗಡಿ ಮಾಲೀಕರಿಗೆ ಕಷ್ಟ ನಷ್ಟ ಉಂಟಾಗುತ್ತಿದ್ದು, ಇದನ್ನು ತಪ್ಪಿಸಲು, ಕಣಿವೆಯನ್ನು ಅಗಲ ಹಾಗೂ ಆಳಗೊಳಿಸಲು ಅಂದಾಜನ್ನು 2009–11ನೇ ಸಾಲಿನ ಲೋಕೋಪಯೋಗಿ ಮತ್ತು ಒಳನಾಡು ಸಾರಿಗೆ ಇಲಾಖೆಯ, ಬೆಂಗಳೂರು ವೃತ್ತದ ದರಪಟ್ಟಿಯ ದರಗಳನ್ನು ಪರಿಗಣಿಸಿ ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು, ಟೆಂಡರ್ ಮುಖಾಂತರ ಕಡಿಮೆ ದರ ನಮೂದಿಸಿದ್ದ ಮೆಃ ಶ್ರೀ ರಾಮ್‌ಸಾಯಿ ಕನ್ಸ್ಟ್ರಕ್ಷನ್ಸ್, ಇವರಿಗೆ ವಹಿಸಿ ಕಾಮಗಾರಿಯನ್ನು (construction of RCC drain from Ch: 2000 to 2110m (from Jumma Masjip road to Seppings road) in Shivajinagar under Challagatta Valley) ಪ್ರಾರಂಭಿಸಲಾಗಿತ್ತು. ಸದರಿ ಗುತ್ತಿಗೆದಾರರರು ನಿಗದಿತ ಕಾಲಾವಧಿಯಲ್ಲಿ ನಿರೀಕ್ಷಿತ ಪ್ರಗತಿ ತೋರಿಸದ ಕಾರಣ ಸದರಿ ಗುತ್ತಿಗೆಯನ್ನು ರಿಸ್ಕ್ ಅಂಡ್ ಕಾಸ್ಟ್ ಮೇಲೆ ರದ್ದುಗೊಳಿಸಿ ಮರು ಟೆಂಡರ್ ಕರೆಯಲಾಯಿತು.

ಈ ಕಾಮಗಾರಿಗೆ ದಿನಾಂಕಃ 24–02–2012ರಂದು 5ನೇ ಬಾರಿ ಟೆಂಡರ್ ಅಧಿಸೂಚನೆಯನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಹೊರಡಿಸಲಾಯಿತು. ಟೆಂಡರ್ ಸಲ್ಲಿಸಲು ಕಡೆಯ ದಿನಾಂಕವಾಗಿದ್ದ 05–03–2012ರಂದು ಮೆ: ಕೆ.ವಿ.ಆರ್. ಕನ್ಸ್ಟ್ರಕ್ಷನ್ಸ್ ರವರು ಟೆಂಡರ್ ಸಲ್ಲಿಸಿರುವ ಏಕೈಕ ಬಿಡ್ಡುದಾರರಾಗಿರುತ್ತಾರೆ.

ಸದರಿ ಗುತ್ತಿಗೆದಾರರು ಸಲ್ಲಸಿದ್ದ ದಾಖಲೆಗಳನ್ನು ಪರಿಶೀಲಿಸಲಾಗಿ ತಾಂತ್ರಿಕವಾಗಿ ಗುತ್ತಿಗೆದಾರರರು ಅರ್ಹತೆಯನ್ನು ಹೊಂದಿರುವರೆಂದು ಘೋಷಿಸಿದ ನಂತರ ಇವರು ಸಲ್ಲಿಸಿದ್ದ ಆರ್ಥಿಕ ಬಿಡ್‌ಅನ್ನು ದಿನಾಂಕಃ 09–03–2012ರಂದು ತೆರೆಯಲಾಗಿದ್ದು ಕೆಳಕಂಡಂತೆ ಒಟ್ಟಾರೆ ಮೊತ್ತವನ್ನು ನಮೂದಿಸಿರುತ್ತಾರೆ.

| | | |
|---|---|---|
| 1 | ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ ( 2009–10ನೇ ಸಾಲಿನ ದರಪಟ್ಟಿಯಂತೆ) | ರೂ. 2,03,44,982/– |
| 2 | ಪ್ರಸಕ್ತ ಸಾಲಿನ ಅಂದರೆ 2011–12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗೆ ಇಟ್ಟ ಮೊತ್ತ | ರೂ. 2,58,13,384/– |
| 3 | ಬಿಡ್ಡುದಾರರಾದ ಮೆ: ಕೆ.ವಿ.ಆರ್. ಕನ್ಸ್ಟ್ರಕ್ಷನ್ಸ್ ರವರು ನಮೂದಿಸಿರುವ ಟೆಂಡರ್ ಮೊತ್ತ | ರೂ. 2,94,84,776/– |
| 4 | ದರ ಸಂಧಾನದ ನಂತರ ಕೆ.ವಿ.ಆರ್. ಕನ್ಸ್ಟ್ರಕ್ಷನ್ಸ್ ರವರು ನಮೂದಿಸಿರುವ ಟೆಂಡರ್ ಮೊತ್ತ | ರೂ.2,93,33,90/– |
| 5 | ಟೆಂಡರ್ ಗಿಟ್ಟ ಮೊತ್ತದ ಮೇಲಿನ ಶೇಕಡವಾರು ಹೆಚ್ಚುವರಿ/ ಕಡಿಮೆ | ರೂ. 44.18 ಹೆಚ್ಚುವರಿ |
| 6 | ಪ್ರಸಕ್ತ ಸಾಲಿನ 2011–12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗೆ ಇಟ್ಟ ಮೊತ್ತದ ಮೇಲಿನ ಶೇಕಡವಾರು ಹೆಚ್ಚಳ/ ಕಡಿಮೆ | 13.64 ಹೆಚ್ಚುವರಿ |

ಮೆ: ಕೆ.ವಿ.ಆರ್. ಕನ್ಸ್ಟ್ರಕ್ಷನ್ಸ್ ರವರು ನಮೂದಿಸಿರುವ ಮೊತ್ತವು ಮಂಜೂರಾದ ಅಂದಾಜಿನಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 44.18 ರಷ್ಟು ಹೆಚ್ಚುವರಿ ಇದು ಪ್ರಸಕ್ತ ಸಾಲಿನ ಅಂದರೆ

2011–12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದ ಟೆಂಡರ್ ಮೊತ್ತಕ್ಕೆ ಹೋಲಿಸಿದಾಗ ಶೇಕಡ 13.64 ರಷ್ಟು ಹೆಚ್ಚುವರಿ ಆಗಿದ್ದು, ಸ್ಪರ್ಧಾತ್ಮಕವಾಗಿರುವುದು ಕಂಡುಬಂದಿರುತ್ತದೆ.

ಮೇಲಿನ ಹಿನ್ನೆಲೆಯಲ್ಲಿ, ಸದರಿ ಟೆಂಡರ್‌ನಲ್ಲಿ ಭಾಗವಹಿಸಿರುವ ಏಕೈಕ ಬಿಡ್ಡುದಾರರಾದ ಮೆ: ಕೆ.ವಿ.ಆರ್. ಕನ್ಸ್ಟ್ರಕ್ಷನ್ಸ್ ರವರು ಸಂಧಾನದ ನಂತರ ನಮೂದಿಸಿರುವ ಟೆಂಡರ್ ಮೊತ್ತ ರೂ. 2,93,33,900/–(ಮಂಜೂರಾದ ಅಂದಾಜು ಪಟ್ಟಿಯಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗಸ ಶೇಕಡ 44.18 ರಷ್ಟು ಹೆಚ್ಚವರಿ ಹಾಗೂ ಪ್ರಸಕ್ತ ಸಾಲಿನ ಅಂದರೆ 201–12ನೇ ಸಾಲಿನ ದರಪಟ್ಟಿಯ ದರಗಳಂತೆ ಪರಿಷ್ಕರಿಸಲಾದ ಟೆಂಡರಿಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 13.64 ರಷ್ಟು ಹೆಚ್ಚುವರಿ) ಗಳಿಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರು(ಯೋಜನೆ) ರವರ ಟಿಪ್ಪಣಿ.

**ಃ ಮುಂದೂಡಿದೆ ಃ**

## 16] ವಿಷಯ ಸಂಖ್ಯೆಃ24/2012–13

ವಿಶೇಷ ಆಯುಕ್ತರವರು (ಯೋಜನೆ) ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆಃ 48ರಲ್ಲಿನ ಮುನೇಶ್ವರ ನಗರ ಪ್ರದೇಶದ ಅಯೋತಿದಾಸ್‌ಸ ನಗರದಲ್ಲಿ ಬೃಹತ್ ಮಳೆ ನೀರುಗಾಲುವೆಯು ಹಾದು ಹೋಗುತ್ತಿದ್ದು, ಸದರಿ ಕಾಲುವೆಯು ಕಿರಿದಾಗಿದ್ದು, ಮಳೆಗಾಲದಲ್ಲಿ ನೀರು ಸರಾಗವಾಗಿ ಹರಿಯದೇ ತಗ್ಗು ಪ್ರದೇಶದಲ್ಲಿ ನಿಂತು ನಿಧಾನವಾಗಿ ಮುಂದೆ ಹರಿಯುತ್ತದೆ. ಸದರಿ ಪ್ರದೇಶದಲ್ಲಿ ಜನಸಂಖ್ಯೆ ದಟ್ಟಣೆಯಿಂದ ಕೂಡಿದ್ದು, ಮಳೆಗಾಲದಲ್ಲಿ ನೀರು ಸರಾಗವಾಗಿ ಹರಿಯದೇ ಇರುವುದರಿಂದ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿರುವುದರಿಂದ ತುರ್ತಾಗಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಬೇಕಾಗಿದೆ. ಸದರಿ ಪ್ರದೇಶದ ಮಳೆನೀರುಗಾಲುವೆಯನ್ನು ಅಗಲ ಹಾಗೂ ಆಳಗೊಳಿಸಿ "U" Shape ಡ್ರೈನ್ ನಿರ್ಮಿಸಲು ಉದ್ದೇಶಿಸಲಾಗಿದೆ. ಮೇಲ್ಕಂಡ ಕಾಮಗಾರಿಗೆ KPWD 2010-11ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ರೂ. 65.00 ಲಕ್ಷಗಳಿಗೆ ಅಂದಾಜನ್ನು ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಅನುಮೋದನೆ ಹಾಗೂ ಕಾಮಗಾರಿ ಸಂಕೇತ ಪಡೆಯಲಾಗಿದೆ.

ಈ ಕಾಮಗಾರಿಗೆ ದಿನಾಂಕಃ 16–04–2012ರಂದು 6ನೇ ಬಾರಿ ಟೆಂಡರ್ ಅಧಿಸೂಚನೆಯನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಹೊರಡಿಸಲಾಯಿತು. ಟೆಂಡರ್ ಸಲ್ಲಿಸಲು ಕಡೆಯ ದಿನಾಂಕವಾಗಿದ್ದ 25–04–2012ರಂದು ಕೆಳಕಂಡಂತೆ ಇಬ್ಬರು ಬಿಡ್ಡುದಾರರು ಟೆಂಡರ್ ಸಲ್ಲಿಸಿರುತ್ತಾರೆ.

1. ಶ್ರೀ.ಎನ್.ಎಂ. ಕೃಷ್ಣಮೂತಿ, ಪ್ರಥಮ ದರ್ಜೆ ಗುತ್ತಿಗೆದಾರರರು, ಬೆಂಗಳೂರು.
2. ಶ್ರೀ. ಜಿ.ಚಂದ್ರಶೇಖರ್, ಪ್ರಥಮ ದರ್ಜೆ ಗುತ್ತಿಗೆದಾರರು, ಬೆಂಗಳೂರು.

ಮೇಲ್ಕಂಡ ಗುತ್ತಿಗೆದಾರರರು ಸಲ್ಲಿಸಿದ್ದ ದಾಖಲೆಗಳನ್ನು ಪರಿಶೀಲಿಸಲಾಗಿ ತಾಂತ್ರಿಕವಾಗಿ ಗುತ್ತಿಗೆದಾರರನ್ನು ಅರ್ಹರೆಂದು ಘೋಷಿಸಿದ ನಂತರ ಇವರು ಸಲ್ಲಸಿದ್ದ ಆರ್ಥಿಕ ಬಿಡ್‌ಗಳನ್ನು ದಿನಾಂಕಃ 03–05–2012ರಂದು ತೆರೆಯಲಾಗಿ ಕೆಳಕಂಡಂತೆ ಒಟ್ಟಾರೆ ಮೊತ್ತವನ್ನು ನಮೂದಿಸಿರುತ್ತಾರೆ.

| | | |
|---|---|---|
| 1 | ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ (2010–11ನೇ ಸಾಲಿನ ದರಪಟ್ಟಿಯಂತೆ) | ರೂ.64,44,037.00 |
| 2 | ಪ್ರಸಕ್ತ ಸಾಲಿನ ಅಂದರೆ 2011–12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗೆ ಇಟ್ಟ ಮೊತ್ತ | ರೂ.73,82,448.00 |
| 3 | ಬಿಡ್ಡುದಾರರಾದ ಶ್ರೀ. ಎನ್.ಎಂ.ಕೃಷ್ಣಮೂರ್ತಿ ರವರು ನಮೂದಿಸಿರುವ ಟೆಂಡರ್ ಮೊತ್ತ | ರೂ.82,48,349.00 |
| 4 | ಮಂಜೂರಾದ ಅಂದಾಜಿನಂತೆ ಟೆಂಡರಿಗಿಟ್ಟ ಮೊತ್ತದ ಮೇಲಿನ ಶೇಕಡವಾರು ಹೆಚ್ಚಳ/ ಕಡಿಮೆ | ಶೇಕಡ 13.65 ಹೆಚ್ಚುವರಿ |

| | | |
|---|---|---|
| 5 | ಟೆಂಡರಿಗೆ ಇಟ್ಟ ಮೊತ್ತದ ಮೇಲೆ ಶೇಕಡವಾರು ಹೆಚ್ಚುವರಿ/ ಕಡಿಮೆ | 28.00 |
| 6 | ಪ್ರಸಕ್ತ ಸಾಲಿನ 2011-12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗೆ ಇಟ್ಟ ಮೊತ್ತ ಶೇಕಡವಾರು ಹೆಚ್ಚುವರಿ/ಕಡಿಮೆ | 11.73 |

ಕಡಿಮೆ ಮೊತ್ತ ನಮೂದಿಸಿರುವ ಶ್ರೀ. ಎನ್.ಎಂ. ಕೃಷ್ಣಮೂರ್ತಿ , ಪ್ರಥಮ ದರ್ಜೆಗುತ್ತಿಗೆದಾರರಾದ ಇವರು ನಮೂದಿಸಿರುವ ಮೊತ್ತವು 2010-11ನೇ ಸಾಲಿನ ಲೋಕೋಪಯೋಗಿ ಇಲಾಖೆಯ ದರಪಟ್ಟಿಯ ದರಗಳಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 28.00 ರಷ್ಟು ಹೆಚ್ಚಿಗೆ ಇರುತ್ತದೆ ಹಾಗೂ 2011-12ನೇಸಾಲಿನ ಲೋಕೋಪಯೋಗಿ ಇಲಾಖೆಯ ದರಪಟ್ಟಿಯ ದರಗಳಂತೆ ಪರಿಷ್ಕರಿಸಿ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 11.73 ರಷ್ಟು ಹೆಚ್ಚಿಗೆ ಇರುವುದು ಕಂಡುಬಂದಿರುತ್ತದೆ.

ಮೇಲಿನ ಹಿನ್ನಲೆಯಲ್ಲಿ ಸದರಿ ಟೆಂಡರ್‌ನಲ್ಲಿ ಭಾಗವಹಿಸಿರುವ ಹಾಗೂ ಕಡಿಮೆ ಮೊತ್ತ ನಮೂದಿಸಿರುವ ಶ್ರೀ. ಎನ್.ಎಂ. ಕೃಷ್ಣಮೂರ್ತಿ ರವರ ಟೆಂಡರ್ ಮೊತ್ತ ರೂ. 82,48,349/- (2011-12ನೇ ಸಾಲಿನ ದರಗಳಂತೆ ಪರಿಷ್ಕರಿಸಿ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 11.73ರಷ್ಟು ಹೆಚ್ಚಿಗೆ ಇದ್ದು) ಗಳಿಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರು(ಯೋಜನೆ) ರವರ ಟಿಪ್ಪಣಿ.

**ನಿರ್ಣಯಃ ದಿನಾಂಕಃ 24-05-2012ರ ವಿಶೇಷ ಆಯುಕ್ತರು (ಯೋಜನೆ) ಇವರ ಟಿಪ್ಪಣಿ ಒಪ್ಪಲಾಯಿತು.**

## 17] ವಿಷಯ ಸಂಖ್ಯೆಃ25/2012-13

ಅಪರ ಆಯುಕ್ತರವರು (ಯೋಜನೆ) ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪದ್ಮನಾಭನಗರ ವಿಧಾನ ಸಭಾ ಕ್ಷೇತ್ರದ ಕೆ.ಎಸ್.ಆರ್.ಟಿ.ಸಿ. ಲೇಔಟ್‌ನಲ್ಲಿರುವ ಆಟದ ಮೈದಾನವನ್ನು ಅಭಿವೃದ್ಧಿಪಡಿಸಲು ಮಾನ್ಯ ಗೃಹ ಹಾಗೂ ಸಾರಿಗೆ ಸಚಿವರು, ಸ್ಥಳೀಯ ಶಾಸಕರು ಮತ್ತು ನಗರ ಪಾಲಿಕೆಯ ಸದಸ್ಯರು ಸೂಚಿಸಿರುವ ಮೇರೆಗೆ ಸದರಿ ಆಟದ ಮೈದಾನವನ್ನು ಅಭಿವೃದ್ಧಿಪಡಿಸಲು ರೂ. 80.00 ಲಕ್ಷಗಳ ಅಂದಾಜುಪಟ್ಟಿಯನ್ನು 200-11ನೇ ಸಾಲಿನ ದರಪಟ್ಟಿಯ ಆಧಾರದ ಮೇಲೆ ತಯಾರಿಸಿ ಅನುಮೋದನೆ ಪಡೆಯಲಾಗಿರುತ್ತದೆ. ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ದಿನಾಂಕಃ 25-02-2012ರಂದು ಎರಡನೇ ಬಾರಿಗೆ ಟೆಂಡರ್ ಕರೆಯಲಾಗಿರುತ್ತದೆ. ಸದರಿ ಟೆಂಡರ್‌ನಲ್ಲಿ 3 ಜನ ಗುತ್ತಿಗೆದಾರರಾದ (1)ಶ್ರೀ.ಡಿ.ಜಿ.ಜಗದೀಶ್ (2) ಶ್ರೀ.ಜಿ.ಎನ್.ಪ್ರಸನ್ನ (3) ಶ್ರೀಜಿ.ಎಲ್‌ಯದುಗಿರಿ ರವರು ಭಾಗವಹಿಸಿದ್ದು ಸದರಿಯವರ ತಾಂತ್ರಿಕ ಬಿಡ್ಡನ್ನು ದಿನಾಂಕಃ 28-03-2012ರಂದು ತೆರೆಯಲಾಗಿತ್ತು ಸದರಿ ಟೆಂಡರ್‌ನ ತಾಂತ್ರಿಕ ಬಿಡ್ಡಿನಲ್ಲಿ (1)ಡಿ.ಜಿ.ಜಗದೀಶ್ (2)ಶ್ರೀ.ಜಿ.ಎನ್.ಪ್ರಸನ್ನ ರವರು ಅರ್ಹರಾಗಿರುತ್ತಾರೆ. ಮುಖ್ಯ ಅಭಿಯಂತರರು (ದಕ್ಷಿಣ) ರವರಿಂದ ಅನುಮೋದನೆ ಪಡೆದು ಆರ್ಥಿಕ ಬಿಡ್ಡನ್ನು ದಿನಾಂಕಃ 17-04-2012ರಂದು ತೆರೆಯಲಾಯಿತು. ಸದರಿ ಆರ್ಥಿಕ ಬಿಡ್ಡಿನ ವಿವರಗಳು ಕೆಳಕಂಡಂತಿವೆ.

| ಕ್ರ.ಸ | ಗುತ್ತಿಗೆದಾರರ ಹೆಸರು | ಟೆಂಡರ್‌ಗಿಟ್ಟ ಮೊತ್ತ | ನಮೂದಿಸಿರುವ ದರ | ಪ್ರಸಕ್ತಸಾಲಿನ ದರದಂತೆ ಹೋಲಿಸಿದಾಗ (ಎಸ್.ಆರ್ 2010-11) & SE PWD Cor. dt:18-03-11& 29-02-12) | ಸಂಧಾನಿತ ದರ ಪ್ರಸಕ್ತಸಾಲಿನ ದರದಂತೆ ಹೋಲಿಸಿದಾದ (ಎಸ್.ಆರ್ 2010-11) & SE PWD Cor. dt:18-03-11& 29-02-12) |
|---|---|---|---|---|---|
| 1 | ಶ್ರೀ.ಡಿ.ಜಿ.ಜಗದೀಶ್ | 7942246.41 | 98,36,113.25 | 19.73% ಹೆಚ್ಚು | 14.98% ಹೆಚ್ಚು ರೂ.94,46,266.00 |
| 2 | ಶ್ರೀ.ಜಿ.ಎನ್.ಪ್ರಸನ್ನ | | 1,03,16,673.75 | 25.58 %ಹೆಚ್ಚು | --- |

ಶ್ರೀ.ಡಿ.ಜಿ.ಜಗದೀಶ ರವರು ರೂ. 98,36,113.25 ಶೇಕಡ 19.73 ಹೆಚ್ಚುವರಿ ಮೊತ್ತವನ್ನು ನಮೂದಿಸಿ ಅತೀ ಕಡಿಮೆ ದರ ನಮೂದಿಸಿರುವ ಅರ್ಹ L1 ಗುತ್ತಿಗೆದಾರರಾಗಿರುತ್ತಾರೆ. ಕಡಿಮೆ ದರ ನಮೂದಿಸಿರುವ ಗುತ್ತಿಗೆದಾರರಾಗಿರುವ ಶ್ರೀ. ಡಿ.ಜಿ.ಜಗದೀಶ ರವರೊಡನೆ ಸಂಧಾನ ನಡೆಸಲಾಗಿ ಸಂಧಾನದ ನಂತರ ರೂ. 94,46,266/–ಗಳನ್ನು ನಮೂದಿಸಿರುತ್ತಾರೆ. ಪ್ರಸಕ್ತ ಸಾಲಿನ 2010–11ನೇ ಸಾಲಿನ ದರಪಟ್ಟಿಗೆ ಹೋಲಿಸಿದಾಗ 14.98% ಹೆಚ್ಚುವರಿಯಾಗಿದ್ದು ಕಾಮಗಾರಿಯನ್ನು ನಿರ್ವಹಿಸಲು ಒಪ್ಪಿ ಪತ್ರವನ್ನು ನೀಡಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಪ್ರಸ್ತಾಪಿತ ಕಾಮಗಾರಿಗೆ ಶ್ರೀ.ಡಿ.ಜಿ.ಜಗದೀಶ ರವರು ದರ ಸಂಧಾನದ ನಂತರ ನಮೂದಿಸಿರುವ ಮೊತ್ತ ರೂ. 94,46,266/– ಪ್ರಸಕ್ತ ಸಾಲಿನ 2010–11ನೇ ಸಾಲಿನ ದರಪಟ್ಟಿಗೆ ಹೋಲಿಸಿದಾಗ ಶೇಕಡ 14.98ರಷ್ಟು ಹೆಚ್ಚಿನದರವಾಗಿದ್ದು ಕಡಿಮೆ ದರ ನಮೂದಿಸಿರುವ ಗುತ್ತಿಗೆದಾರರ ಟೆಂಡರ್‌ಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿ.

**ನಿರ್ಣಯಃ ದಿನಾಂಕಃ 23–05–2012ರ ಅಪರ ಆಯುಕ್ತರು (ಯೋಜನೆ) ಇವರ ಟಿಪ್ಪಣಿ ಒಪ್ಪಲಾಯಿತು.**

**(ಎನ್.ಆರ್.ಶ್ರೀಧರ ರೆಡ್ಡಿ)**
ಅಧ್ಯಕ್ಷರು
ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ

**<u>ಪ್ರತಿಯನ್ನುಃ</u>**

1. ಪೂಜ್ಯ ಮಹಾಪೌರವರ ಅವಗಾಹನೆಗೆ ಸಲ್ಲಿಸಿದೆ.
2. ಉಪ ಮಹಾಪೌರವರ ಅವಗಾಹನೆಗೆ ಸಲ್ಲಿಸಿದೆ.
3. ಆಡಳಿತ ಪಕ್ಷ ನಾಯಕರು/ ವಿರೋಧ ಪಕ್ಷ ನಾಯಕರು/ ಜೆ.ಡಿ.ಎಸ್.ಪಕ್ಷ ನಾಯಕರಿಗೆ ಕಳುಹಿಸಿದೆ.
4. ಸಮಿತಿಯ ಎಲ್ಲಾ ಸದಸ್ಯರಿಗೆ ಕಳುಹಿಸಿದೆ.
5. ಆಯುಕ್ತರವರಿಗೆ ಕಳುಹಿಸಿದೆ.
6. ವಿಶೇಷ/ ಅಪರ ಆಯುಕ್ತರು (ಯೋಜನೆ) ರವರಿಗೆ ಕಳಹಿಸಿದೆ.
7. ಪ್ರಧಾನ ಅಭಿಯಂತರರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
8. ಮುಖ್ಯ ಲೆಕ್ಕಾಧಿಕಾರಿಯವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
9. ಮುಖ್ಯ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ, ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
10. ಮುಖ್ಯ ಅಭಿಯಂತರರು, ಬೃಹತ್ ನೀರು ಗಾಲುವೆ ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
11. ಕೌನ್ಸಿಲ್ ಕಾರ್ಯದರ್ಶಿಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯು ದಿನಾಂಕಃ 21-06-2012 ರಂದು ನಡೆಸಲಾದ ವಿಷಯಗಳ ಸಭೆಯ ನಡವಳಿಗಳು

| ಕ್ರ. ಸಂ. | ಹಾಜರಿದ್ದ ಸಮಿತಿಯ ಪದಾಧಿಕಾರಿಗಳು ಶ್ರೀಯುತರಾದ | | ಕ್ರ. ಸಂ. | ಹಾಜರಿದ್ದ ಅಧಿಕಾರಿಗಳು |
|---|---|---|---|---|
| 1 | **ಶ್ರೀ.ಎನ್.ಆರ್.ಶ್ರೀಧರ ರೆಡ್ಡಿ** | ಅಧ್ಯಕ್ಷರು | 1 | ಕೌನ್ಸಿಲ್ ಕಾರ್ಯದರ್ಶಿಗಳು |
| 2 | ಶ್ರೀಮತಿ.ಸುಮಿತ್ರ | ಸದಸ್ಯರು | 2 | ಮುಖ್ಯ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ |
| 3 | ಶ್ರೀ.ಎಂ.ವೆಂಕಟೇಶ್ | ಸದಸ್ಯರು | | |
| 4 | ಶ್ರೀ.ಎಸ್.ಎಸ್.ಪ್ರಸಾದ್ | ಸದಸ್ಯರು | 3 | ಕಾರ್ಯಪಾಲಕ ಅಭಿಯಂತರರು( ರ.ಮೂ.ಸೌ/ ಯೋಜನೆ/ ಬೃ.ಮ.ನೀ.ಗಾ) |
| 5 | ಶ್ರೀ.ಆರ್.ಚಂದ್ರಶೇಖರಯ್ಯ | ಸದಸ್ಯರು | | |
| 6 | ಶ್ರೀಮತಿ.ಸರಸ್ವತಮ್ಮ | ಸದಸ್ಯರು | | |
| 7 | ಶ್ರೀ.ಎಸ್.ಕೇಶವಮೂರ್ತಿ | ಸದಸ್ಯರು | | |
| 8 | ಶ್ರೀ.ಎನ್.ಪಿಳ್ಳಪ್ಪ | ಸದಸ್ಯರು | | |
| 9 | ಶ್ರೀಮತಿ.ಯಶೋದಮ್ಮ.ಕೆ.ಆರ್ | ಸದಸ್ಯರು | | |
| 10 | ಶ್ರೀ.ಕೆ.ಎಲ್.ತಿಮ್ಮನಂಜಯ್ಯ | ಸದಸ್ಯರು | | |
| 11 | ಶ್ರೀ.ಆರ್.ಪ್ರಕಾಶ್ | ಸದಸ್ಯರು | | |

**(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲಿಸಲಾಯಿತು)**

## 01] ವಿಷಯ ಸಂಖ್ಯೆಃ10 /2012-13

ವಿಶೇಷ ಆಯುಕ್ತರವರು (ಯೋಜನೆ) ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಕ್ಷಿಣ ವಲಯದ ಪದ್ಮನಾಭನಗರ ವಿಧಾನ ಸಭಾ ಕ್ಷೇತ್ರದ ವಾರ್ಡ್ ನಂಃ 181, ಕುಮಾರಸ್ವಾಮಿ ಲೇಔಟ್ Pipeline road ನಿಂದ BMTC Bus stop ವರೆಗೆ ಹರಿಯುತ್ತಿರುವ ಬೃಹತ್ ಮಳೆನೀರು ಕಾಲುವೆಯ ಕಾಮಗಾರಿಯನ್ನು (providing bed protection, jacketing and cover slab to storm water drain from Ch:2225 to 2775mts from Kumarswamy layout BMTC bus stop to 50 feet road, in ward No:181) e-procurement ಮುಖಾಂತರ ಟಂಡರ್‌ಅನ್ನು ಆಹ್ವಾನಿಸಲಾಗಿರುತ್ತದೆ. ಸದರಿ ಕಾಮಗಾರಿಗೆ ಶ್ರೀ. ಸುಧಾಕರ ಪರಿಟಿಯಾಲ ಗುತ್ತಿಗೆದಾರರರು, ಕಡಿಮೆ ದರಗಳನ್ನು ನಮೂದಿಸಿರುವುದರಿಂದ L1 ಆಗಿರುತ್ತಾರೆ. ಇವರು ನಮೂದಿಸಿರುವ ದರಗಳು ಅಂದಾಜು ಪಟ್ಟಿಗೆ (2011-12ನೇ ಸಾಲಿನ ದರಪಟ್ಟಿ) ಹೋಲಿಸಿದಾಗ ಹೆಚ್ಚುವರಿಯಾಗಿರುತ್ತದೆ (3.62% above) ಮತ್ತು Ist quarter issue rates of steel ಗೆ ಹೋಲಿಸಿದಾಗ 3.46% ಕಡಿಮೆಯಾಗಿರುತ್ತದೆ. ಈ ದರಗಳು ಸ್ಪರ್ಧಾತ್ಮಕವಾಗಿರುತ್ತದೆ ಹಾಗೂ ಒಪ್ಪಬಹುದಾಗಿದೆ.

ಆದುದರಿಂದ, ಶ್ರೀ.ಸುಧಾಕರ ಪರಿಟಿಯಾಲ ಗುತ್ತಿಗೆದಾರರು ನಮೂದಿಸಿರುವ ದರಗಳನ್ನು 3.62% ಹೆಚ್ಚುವರಿ ಅಂದರೆ ರೂ. 2,20,36,893.00 ಲಕ್ಷಗಳಿಗೆ ಟೆಂಡರ್ ಅನುಮೋದನೆ ನೀಡಲು ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರವರ ಟಿಪ್ಪಣಿ.

**ನಿರ್ಣಯಃ ವಿಶೇಷ ಆಯುಕ್ತರವರ ದಿನಾಂಕಃ 14-05-12ರ ಟಿಪ್ಪಣಿಯನ್ನು ಒಪ್ಪಲಾಯಿತು.**

## 02] ವಿಷಯ ಸಂಖ್ಯೆ:11/2012-13

ವಿಶೇಷ ಆಯುಕ್ತರವರು (ಯೋಜನೆ) ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಚಲ್ಲಘಟ್ಟ ಮುಖ್ಯ ಕಣಿವೆ C-100 ಶಿವಾಜಿನಗರ ರಸೆಲ್ ಮಾರುಕಟ್ಟೆಯ ಬಳಿ ಹರಿಯುತ್ತಿದ್ದು ಪ್ರತಿ ಮಳೆಗಾಲದಲ್ಲೂ ಸದರಿ ಮಾರುಕಟ್ಟೆ ಪ್ರದೇಶವು ನೀರು ತುಂಬಿ ಹರಿದು ಸಾರ್ವಜನಿಕರ ಆಸ್ತಿಗೆ ಹಾಗೂ ಸ್ಥಳೀಯ ಅಂಗಡಿ ಮಾಲೀಕರಿಗೆ ಕಷ್ಟ ನಷ್ಟ ಉಂಟಾಗುತ್ತಿದ್ದು, ಇದನ್ನು ತಪ್ಪಿಸಲು, ಕಣಿವೆಯನ್ನು ಅಗಲ ಹಾಗೂ ಆಳಗೊಳಿಸಲು ಅಂದಾಜನ್ನು 2009-11ನೇ ಸಾಲಿನ ಲೋಕೋಪಯೋಗಿ ಮತ್ತು ಒಳನಾಡು ಸಾರಿಗೆ ಇಲಾಖೆಯ, ಬೆಂಗಳೂರು ವೃತ್ತದ ದರಪಟ್ಟಿಯ ದರಗಳನ್ನು ಪರಿಗಣಿಸಿ ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು, ಟೆಂಡರ್ ಮುಖಾಂತರ ಕಡಿಮೆ ದರ ನಮೂದಿಸಿದ್ದ ಮೆಃ ಶ್ರೀ ರಾಮ್‌ಸಾಯಿ ಕನ್ಸ್ಟ್ರಕ್ಷನ್ಸ್, ಇವರಿಗೆ ವಹಿಸಿ ಕಾಮಗಾರಿಯನ್ನು (construction of RCC drain from Ch: 1890 to 2000m (from Charminar road to Jumma Masjid road) in Shivajinagar under Challagatta valley) ಪ್ರಾರಂಭಿಸಲಾಗಿತ್ತು. ಸದರಿ ಗುತ್ತಿಗೆದಾರರರು ನಿಗದಿತ ಕಾಲಾವಧಿಯಲ್ಲಿ ನಿರೀಕ್ಷಿತ ಪ್ರಗತಿ ತೋರಿಸದ ಕಾರಣ ಸದರಿ ಗುತ್ತಿಗೆಯನ್ನು ರಿಸ್ಕ್ ಅಂಡ್ ಕಾಸ್ಟ್ ಮೇಲೆ ರದ್ದುಗೊಳಿಸಿ ಮರು ಟೆಂಡರ್ ಕರೆಯಲಾಯಿತು.

ಈ ಕಾಮಗಾರಿಗೆ ದಿನಾಂಕಃ 1-01-2012ರಂದು 5ನೇ ಬಾರಿ ಟೆಂಡರ್ ಅಧಿಸೂಚನೆಯನ್ನು ಹೊರಡಿಸಲಾಯಿತು. ಟೆಂಡರ್ ಸಲ್ಲಿಸಲು ಕಡೆಯ ದಿನಾಂಕವಾಗಿದ್ದ 20-01-2012ರಂದು ಶ್ರೀ. ಮಾಜರ್ ಆಲಿಖಾನ್ ರವರು ಟೆಂಡರ್ ಸಲ್ಲಿಸಿರುವ ಏಕೈಕ ಬಿಡ್ಡುದಾರರಾಗಿರುತ್ತಾರೆ.

ಸದರಿ ಗುತ್ತಿಗೆದಾರರು ಸಲ್ಲಸಿದ್ದ ದಾಖಲೆಗಳನ್ನು ಪರಿಶೀಲಿಸಲಾಗಿ ತಾಂತ್ರಿಕವಾಗಿ ಗುತ್ತಿಗೆದಾರರರು ಅರ್ಹತೆಯನ್ನು ಹೊಂದಿರುವರೆಂದು ಘೋಷಿಸಿದ ನಂತರ ಇವರು ಸಲ್ಲಸಿದ್ದ ಆರ್ಥಿಕ ಬಿಡ್‌ಅನ್ನು ದಿನಾಂಕಃ 27-01-2012ರಂದು ತೆರೆಯಲಾಗಿದ್ದು ಕೆಳಕಂಡಂತೆ ಒಟ್ಟಾರೆ ಮೊತ್ತವನ್ನು ನಮೂದಿಸಿರುತ್ತಾರೆ.

| | | |
|---|---|---|
| 1 | ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ ( 2009-10ನೇ ಸಾಲಿನ ದರಪಟ್ಟಿಯಂತೆ) | ರೂ. 2,06,01,634/- |
| 2 | ಪ್ರಸಕ್ತ ಸಾಲಿನ ಅಂದರೆ 2011-12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗೆ ಇಟ್ಟ ಮೊತ್ತ | ರೂ. 2,41,191,151/- |
| 3 | ಬಿಡ್ಡುದಾರರಾದ ಶ್ರೀ. ಮಜರ್ ಆಲಿಖಾನ್ ರವರು ನಮೂದಿಸಿರುವ ಟೆಂಡರ್ ಮೊತ್ತ | ರೂ. 2,54,42,688/- |
| 4 | ದರ ಸಂದಾನದ ನಂತರ ಶ್ರೀ. ಮಜರ್ ಆಲಿಖಾನ್ ರವರು ನಮೂದಿಸಿರುವ ಟೆಂಡರ್ ಮೊತ್ತ | ರೂ.2,54,42,688/- |
| 5 | ಟೆಂಡರ್ ಗಿಟ್ಟ ಮೊತ್ತದ ಮೇಲಿನ ಶೇಕಡವಾರು ಹೆಚ್ಚುವರಿ/ ಕಡಿಮೆ | ರೂ. 23.50 ಹೆಚ್ಚುವರಿ |
| 6 | ಪ್ರಸಕ್ತ ಸಾಲಿನ 2011-12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗೆ ಇಟ್ಟ ಮೊತ್ತದ ಮೇಲಿನ ಶೇಕಡವಾರು ಹೆಚ್ಚಳ/ ಕಡಿಮೆ | 5.17 ಹೆಚ್ಚುವರಿ |

ಶ್ರೀ. ಮಹರ್ ಆಲಿಖಾನ್ ರವರು ನಮೂದಿಸಿರುವ ಮೊತ್ತವು ಮಂಜೂರಾದ ಅಂದಾಜಿನಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 23.50 ರಷ್ಟು ಹೆಚ್ಚುವರಿ ಇದು ಪ್ರಸಕ್ತ ಸಾಲಿನ ಅಂದರೆ 2011-12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದ ಟೆಂಡರ್ ಮೊತ್ತಕ್ಕೆ ಹೋಲಿಸಿದಾಗ ಶೇಕಡ 5.17 ರಷ್ಟು ಹೆಚ್ಚುವರಿ ಆಗಿದ್ದು, ಸ್ಪರ್ಧಾತ್ಮಕವಾಗಿರುವುದು ಕಂಡುಬಂದಿರುತ್ತದೆ.

ಸಾರ್ವಜನಿಕ ಹಿತದೃಷ್ಟಿಯಿಂದ ಕಾಮಗಾರಿಯ ಜರೂರತೆಯ ಹಿನ್ನೆಲೆಯಲ್ಲಿ, ಬೃಹತ್ ಕಾಮಗಾರಿ ಸಾರ್ವಜನಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಅನುಮೋದನೆ ನಿರೀಕ್ಷಿಸಿ ಕಾಮಗಾರಿಯನ್ನು ತುರ್ತಾಗಿ ಕೈಗೊಳ್ಳಲು ಅನುವಾಗುವಂತೆ ಗುತ್ತಿಗೆದಾರರಿಗೆ ಲೆಟರ್ ಆಫ್ ಇಂಟೆಂಡ್ ನೀಡಿ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆ.

ಮೇಲಿನ ಹಿನ್ನೆಲೆಯಲ್ಲಿ, ಸದರಿ ಟೆಂಡರ್‌ನಲ್ಲಿ ಭಾಗವಹಿಸಿರುವ ಏಕೈಕ ಬಿಡ್ಡುದಾರರಾದ ಶ್ರೀ. ಮಾಜರ್ ಆಲಿಖಾನ್, ರವರಿಗೆ ಬೃಹತ್ ಕಾಮಗಾರಿ ಸಾರ್ವಜನಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಅನುಮೋದನೆ ನಿರೀಕ್ಷಿಸಿ ಕಾಮಗಾರಿಯನ್ನು ತುರ್ತಾಗಿ ಕೈಗೊಳ್ಳಲು ಅನುವಾಗುವಂತೆ ಗುತ್ತಿಗೆದಾರರಿಗೆ ಲೆಟರ್ ಆಫ್ ಇಂಟೆಂಟ್ ನೀಡಿರುವ ಕ್ರಮವನ್ನು ಸ್ಥಿರೀಕರಿಸಿ ಇವರ ಸಂಧಾನಿತ ಟೆಂಡರ್ ಮೊತ್ತ ರೂ. 2,54,42,688/-(ಮಂಜೂರಾದ ಅಂದಾಜು ಪಟ್ಟಿಯಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 23.50 ರಷ್ಟು ಹೆಚ್ಚುವರಿ ಹಾಗೂ ಪ್ರಸಕ್ತ ಸಾಲಿನ ಅಂದರೆ 2011-12ನೇ ಸಾಲಿನ ದರಪಟ್ಟಿಯ ದರಗಳಂತೆ ಪರಿಷ್ಕರಿಸಲಾದ ಟೆಂಡರಿಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 5.17 ರಷ್ಟು ಹೆಚ್ಚುವರಿ) ಗಳಿಗೆ ಅನುಮೋದನೆ ಕೋರಿ ಕಾಮಗಾರಿಗಳ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರವರ ಟಿಪ್ಪಣಿ.

**ನಿರ್ಣಯಃ ದಿನಾಂಕಃ 11-05-2012ರ ವಿಶೇಷ ಆಯುಕ್ತರು (ಯೋಜನೆ) ಇವರ ಟಿಪ್ಪಣಿ ಒಪ್ಪಿದೆ.**

## 03] ವಿಷಯ ಸಂಖ್ಯೆಃ14/2012-13

ವಿಶೇಷ ಆಯುಕ್ತರವರು (ಯೋಜನೆ) ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಚಲ್ಲಘಟ್ಟ ಮುಖ್ಯ ಕಣಿವೆ C-100 ಶಿವಾಜಿನಗರ ರಸೆಲ್ ಮಾರುಕಟ್ಟೆಯ ಬಳಿ ಹರಿಯುತ್ತಿದ್ದು ಪ್ರತಿ ಮಳೆಗಾಲದಲ್ಲೂ ಸದರಿ ಮಾರುಕಟ್ಟೆ ಪ್ರದೇಶವು ನೀರು ತುಂಬಿ ಹರಿದು ಸಾರ್ವಜನಿಕರ ಆಸ್ತಿಗೆ ಹಾಗೂ ಸ್ಥಳೀಯ ಅಂಗಡಿ ಮಾಲೀಕರಿಗೆ ಕಷ್ಟ ನಷ್ಟ ಉಂಟಾಗುತ್ತಿದ್ದು, ಇದನ್ನು ತಪ್ಪಿಸಲು, ಕಣಿವೆಯನ್ನು ಅಗಲ ಹಾಗೂ ಆಳಗೊಳಿಸಲು ಅಂದಾಜನ್ನು 2009-11ನೇ ಸಾಲಿನ ಲೋಕೋಪಯೋಗಿ ಮತ್ತು ಒಳನಾಡು ಸಾರಿಗೆ ಇಲಾಖೆಯ, ಬೆಂಗಳೂರು ವೃತ್ತದ ದರಪಟ್ಟಿಯ ದರಗಳನ್ನು ಪರಿಗಣಿಸಿ ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು, ಟೆಂಡರ್ ಮುಖಾಂತರ ಕಡಿಮೆ ದರ ನಮೂದಿಸಿದ್ದ ಮೆಃ ಶ್ರೀ ರಾಮ್‌ಸಾಯಿ ಕನ್ಸ್ಟ್ರಕ್ಷನ್ಸ್, ಇವರಿಗೆ ವಹಿಸಿ ಕಾಮಗಾರಿಯನ್ನು (construction of RCC drain from Ch: 2110 to 2250m (from Seppings road) in Shivajinagar under Challagatta valley) ಪ್ರಾರಂಭಿಸಲಾಗಿತ್ತು. ಸದರಿ ಗುತ್ತಿಗೆದಾರರರು ನಿಗದಿತ ಕಾಲಾವಧಿಯಲ್ಲಿ ನಿರೀಕ್ಷಿತ ಪ್ರಗತಿ ತೋರಿಸದ ಕಾರಣ ಸದರಿ ಗುತ್ತಿಗೆಯನ್ನು ರಿಸ್ಕ್ ಅಂಡ್ ಕಾಸ್ಟ್ ಮೇಲೆ ರದ್ದುಗೊಳಿಸಿ ಮರು ಟೆಂಡರ್ ಕರೆಯಲಾಯಿತು.

ಈ ಕಾಮಗಾರಿಗೆ ದಿನಾಂಕಃ 24-02-2012ರಂದು 5ನೇ ಬಾರಿ ಟೆಂಡರ್ ಅಧಿಸೂಚನೆಯನ್ನು e-procrurement ಮೂಲಕ ಹೊರಡಿಸಲಾಯಿತು. ಟೆಂಡರ್ ಸಲ್ಲಿಸಲು ಕಡೆಯ ದಿನಾಂಕವಾಗಿದ್ದ 05-03-2012ರಂದು ಶ್ರೀ. ಕೆ.ವಿ.ಆರ್. ಕನ್ಸ್ಟ್ರಕ್ಷನ್ ರವರು ಟೆಂಡರ್ ಸಲ್ಲಿಸಿರುವ ಏಕೈಕ ಬಿಡ್ಡುದಾರರಾಗಿರುತ್ತಾರೆ.

ಸದರಿ ಗುತ್ತಿಗೆದಾರರು ಸಲ್ಲಸಿದ್ದ ದಾಖಲೆಗಳನ್ನು ಪರಿಶೀಲಿಸಲಾಗಿ ತಾಂತ್ರಿಕವಾಗಿ ಗುತ್ತಿಗೆದಾರರರು ಅರ್ಹತೆಯನ್ನು ಹೊಂದಿರುವರೆಂದು ಘೋಷಿಸಿದ ನಂತರ ಇವರು ಸಲ್ಲಸಿದ್ದ ಆರ್ಥಿಕ ಬಿಡ್‌ಅನ್ನು ದಿನಾಂಕಃ 09-03-2012ರಂದು ತೆರೆಯಲಾಗಿದ್ದು ಕೆಳಕಂಡಂತೆ ಒಟ್ಟಾರೆ ಮೊತ್ತವನ್ನು ನಮೂದಿಸಿರುತ್ತಾರೆ.

| | | |
|---|---|---|
| 1 | ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ ( 2009-10ನೇ ಸಾಲಿನ ದರಪಟ್ಟಿಯಂತೆ) | ರೂ. 2,04,85,070/- |
| 2 | ಪ್ರಸಕ್ತ ಸಾಲಿನ ಅಂದರೆ 2011-12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗೆ ಇಟ್ಟ ಮೊತ್ತ | ರೂ. 2,67,26,516/- |
| 3 | ಬಿಡ್ಡುದಾರರಾದ ಶ್ರೀ. ಮಜರ್ ಆಲಿಖಾನ್ ರವರು ನಮೂದಿಸಿರುವ ಟೆಂಡರ್ ಮೊತ್ತ | ರೂ. 2,96,92,132/- |
| 4 | ದರ ಸಂದಾನದ ನಂತರ ಶ್ರೀ. ಮಜರ್ ಆಲಿಖಾನ್ ರವರು ನಮೂದಿಸಿರುವ ಟೆಂಡರ್ ಮೊತ್ತ | ರೂ.2,95,78,740/- |
| 5 | ಟೆಂಡರ್ ಗಿಟ್ಟ ಮೊತ್ತದ ಮೇಲಿನ ಶೇಕಡವಾರು ಹೆಚ್ಚುವರಿ/ ಕಡಿಮೆ | ರೂ. 44.39 ಹೆಚ್ಚುವರಿ |
| 6 | ಪ್ರಸಕ್ತ ಸಾಲಿನ 2011-12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗೆ ಇಟ್ಟ ಮೊತ್ತದ ಮೇಲಿನ ಶೇಕಡವಾರು ಹೆಚ್ಚಳ/ | 10.67 ಹೆಚ್ಚುವರಿ |

| | | |
|---|---|---|
| | ಕಡಿಮೆ | |

ಮೆ: ಕೆ.ವಿ.ಆರ್.ಕನ್ಸ್‌ಟ್ರಕ್ಷನ್ಸ್ ರವರು ನಮೂದಿಸಿರುವ ಮೊತ್ತವು ಮಂಜೂರಾದ ಅಂದಾಜಿನಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 43.79 ರಷ್ಟು ಹೆಚ್ಚುವರಿ ಇದು ಪ್ರಸಕ್ತ ಸಾಲಿನ ಅಂದರೆ 2011–12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದ ಟೆಂಡರ್ ಮೊತ್ತಕ್ಕೆ ಹೋಲಿಸಿದಾಗ ಶೇಕಡ 10.67 ರಷ್ಟು ಹೆಚ್ಚುವರಿ ಆಗಿದ್ದು, ಸ್ಪರ್ಧಾತ್ಮಕವಾಗಿರುವುದು ಕಂಡುಬಂದಿರುತ್ತದೆ.

ಮೇಲಿನ ಹಿನ್ನೆಲೆಯಲ್ಲಿ, ಮೆ: ಕೆ.ವಿ.ಆರ್.ಕನ್ಸ್‌ಟ್ರಕ್ಷನ್ಸ್ ರವರು ಸದರಿ ಟೆಂಡರ್‌ನಲ್ಲಿ ಭಾಗವಹಿಸಿರುವ ಏಕೈಕ ಬಿಡ್ಡುದಾರರಾಗಿದ್ದು, ಇವರು ದರ ಸಂಧಾನದ ನಂತರ ನಮೂದಿಸಿರುವ ಟೆಂಡರ್ ಮೊತ್ತ ರೂ. 2,95,78,740/–(ಮಂಜೂರಾದ ಅಂದಾಜು ಪಟ್ಟಿಯಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 44.39 ರಷ್ಟು ಹೆಚ್ಚುವರಿ ಹಾಗೂ ಪ್ರಸಕ್ತ ಸಾಲಿನ ಅಂದರೆ 2011–12ನೇ ಸಾಲಿನ ದರಪಟ್ಟಿಯ ದರಗಳಂತೆ ಪರಿಷ್ಕರಿಸಲಾದ ಟೆಂಡರಿಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 10.67 ರಷ್ಟು ಹೆಚ್ಚುವರಿ) ಗಳಿಗೆ ಅನುಮೋದನೆ ಕೋರಿ ಕಾಮಗಾರಿಗಳ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರವರ ಟಿಪ್ಪಣಿ.

**: ಮುಂದೂಡಿದೆ :**

## 04] ವಿಷಯ ಸಂಖ್ಯೆ:15/2012–13

ವಿಶೇಷ ಆಯುಕ್ತರವರು (ಯೋಜನೆ) ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಚಲ್ಲಘಟ್ಟ ಮುಖ್ಯ ಕಣಿವೆ C-100 ಶಿವಾಜಿನಗರ ರಸೆಲ್ ಮಾರುಕಟ್ಟೆಯ ಬಳಿ ಹರಿಯುತ್ತಿದ್ದು ಪ್ರತಿ ಮಳೆಗಾಲದಲ್ಲೂ ಸದರಿ ಮಾರುಕಟ್ಟೆ ಪ್ರದೇಶವು ನೀರು ತುಂಬಿ ಹರಿದು ಸಾರ್ವಜನಿಕರ ಆಸ್ತಿಗೆ ಹಾಗೂ ಸ್ಥಳೀಯ ಅಂಗಡಿ ಮಾಲೀಕರಿಗೆ ಕಷ್ಟ ನಷ್ಟ ಉಂಟಾಗುತ್ತಿದ್ದು, ಇದನ್ನು ತಪ್ಪಿಸಲು, ಕಣಿವೆಯನ್ನು ಅಗಲ ಹಾಗೂ ಆಳಗೊಳಿಸಲು ಅಂದಾಜನ್ನು 2009–11ನೇ ಸಾಲಿನ ಲೋಕೋಪಯೋಗಿ ಮತ್ತು ಒಳನಾಡು ಸಾರಿಗೆ ಇಲಾಖೆಯ, ಬೆಂಗಳೂರು ವೃತ್ತದ ದರಪಟ್ಟಿಯ ದರಗಳನ್ನು ಪರಿಗಣಿಸಿ ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು, ಟೆಂಡರ್ ಮುಖಾಂತರ ಕಡಿಮೆ ದರ ನಮೂದಿಸಿದ್ದ ಮೆಃ ಶ್ರೀ ರಾಮ್‌ಸಾಯಿ ಕನ್ಸ್ಟ್ರಕ್ಷನ್ಸ್, ಇವರಿಗೆ ವಹಿಸಿ ಕಾಮಗಾರಿಯನ್ನು (construction of RCC drain from Ch: 2250 to 2400m (Armstrong road) in Shivajinagar under Challagatta valley) ಪ್ರಾರಂಭಿಸಲಾಗಿತ್ತು. ಸದರಿ ಗುತ್ತಿಗೆದಾರರರು ನಿಗದಿತ ಕಾಲಾವಧಿಯಲ್ಲಿ ನಿರೀಕ್ಷಿತ ಪ್ರಗತಿ ತೋರಿಸದ ಕಾರಣ ಸದರಿ ಗುತ್ತಿಗೆಯನ್ನು ರಿಸ್ಕ್ ಅಂಡ್ ಕಾಸ್ಟ್ ಮೇಲೆ ರದ್ದುಗೊಳಿಸಿ ಮರು ಟೆಂಡರ್ ಕರೆಯಲಾಯಿತು.

ಈ ಕಾಮಗಾರಿಗೆ ದಿನಾಂಕಃ 24–02–2012ರಂದು 5ನೇ ಬಾರಿ ಟೆಂಡರ್ ಅಧಿಸೂಚನೆಯನ್ನು ಮೂಲಕ ಹೊರಡಿಸಲಾಯಿತು. ಟೆಂಡರ್ ಸಲ್ಲಿಸಲು ಕಡೆಯ ದಿನಾಂಕವಾಗಿದ್ದ 05–03–2012ರಂದು ಶ್ರೀ. ಮಾಜರ್ ಆಲಿಖಾನ್ ರವರು ಟೆಂಡರ್ ಸಲ್ಲಿಸಿರುವ ಏಕೈಕ ಬಿಡ್ಡುದಾರರಾಗಿರುತ್ತಾರೆ.

ಸದರಿ ಗುತ್ತಿಗೆದಾರರು ಸಲ್ಲಸಿದ್ದ ದಾಖಲೆಗಳನ್ನು ಪರಿಶೀಲಿಸಲಾಗಿ ತಾಂತ್ರಿಕವಾಗಿ ಗುತ್ತಿಗೆದಾರರರು ಅರ್ಹತೆಯನ್ನು ಹೊಂದಿರುವರೆಂದು ಘೋಷಿಸಿದ ನಂತರ ಇವರು ಸಲ್ಲಸಿದ್ದ ಆರ್ಥಿಕ ಬಿಡ್‌ಅನ್ನು ದಿನಾಂಕಃ 09–03–2012ರಂದು ತೆರೆಯಲಾಗಿದ್ದು ಕೆಳಕಂಡಂತೆ ಒಟ್ಟಾರೆ ಮೊತ್ತವನ್ನು ನಮೂದಿಸಿರುತ್ತಾರೆ.

| | | |
|---|---|---|
| 1 | ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ ( 2009–10ನೇ ಸಾಲಿನ ದರಪಟ್ಟಿಯಂತೆ) | ರೂ. 2,21,31,913/– |
| 2 | ಪ್ರಸಕ್ತ ಸಾಲಿನ ಅಂದರೆ 2011–12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗೆ ಇಟ್ಟ ಮೊತ್ತ | ರೂ. 2,85,10,072/– |
| 3 | ಬಿಡ್ಡುದಾರರಾದ ಶ್ರೀ. ಮಜರ್ ಆಲಿಖಾನ್ ರವರು ನಮೂದಿಸಿರುವ ಟೆಂಡರ್ ಮೊತ್ತ | ರೂ. 3,18,55,845/– |
| 4 | ದರ ಸಂದಾನದ ನಂತರ ಶ್ರೀ. ಮಜರ್ ಆಲಿಖಾನ್ ರವರು ನಮೂದಿಸಿರುವ ಟೆಂಡರ್ ಮೊತ್ತ | ರೂ.3,18,24,375/– |

| | | |
|---|---|---|
| 5 | ಟೆಂಡರ್ ಗಿಟ್ಟ ಮೊತ್ತದ ಮೇಲಿನ ಶೇಕಡವಾರು ಹೆಚ್ಚುವರಿ/ ಕಡಿಮೆ | ರೂ. 43.79 ಹೆಚ್ಚುವರಿ |
| 6 | ಪ್ರಸಕ್ತ ಸಾಲಿನ 2011–12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗೆ ಇಟ್ಟ ಮೊತ್ತದ ಮೇಲಿನ ಶೇಕಡವಾರು ಹೆಚ್ಚಳ/ ಕಡಿಮೆ | 11.63 ಹೆಚ್ಚುವರಿ |

ಶ್ರೀ.ಮಾಜರ್ ಆಲಿಖಾನ್ ರವರು ನಮೂದಿಸಿರುವ ಮೊತ್ತವು ಮಂಜೂರಾದ ಅಂದಾಜಿನಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 43.79 ರಷ್ಟು ಹೆಚ್ಚುವರಿ ಇದು ಪ್ರಸಕ್ತ ಸಾಲಿನ ಅಂದರೆ 2011–12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದ ಟೆಂಡರ್ ಮೊತ್ತಕ್ಕೆ ಹೋಲಿಸಿದಾಗ ಶೇಕಡ 11.63 ರಷ್ಟು ಹೆಚ್ಚುವರಿ ಆಗಿದ್ದು, ಸ್ವರ್ಧಾತ್ಮಕವಾಗಿರುವುದು ಕಂಡುಬಂದಿರುತ್ತದೆ.

ಮೇಲಿನ ಹಿನ್ನೆಲೆಯಲ್ಲಿ, ಶ್ರೀ.ಮಾಜರ್ ಆಲಿಖಾನ್ ರವರು ಸದರಿ ಟೆಂಡರ್‌ನಲ್ಲಿ ಭಾಗವಹಿಸಿರುವ ಏಕೈಕ ಬಿಡ್ಡುದಾರರಾಗಿದ್ದು, ಇವರು ದರ ಸಂಧಾನದ ನಂತರ ನಮೂದಿಸಿರುವ ಟೆಂಡರ್ ಮೊತ್ತ ರೂ. 3,18,24,375/–(ಮಂಜೂರಾದ ಅಂದಾಜು ಪಟ್ಟಿಯಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 43.79 ರಷ್ಟು ಹೆಚ್ಚುವರಿ ಹಾಗೂ ಪ್ರಸಕ್ತ ಸಾಲಿನ ಅಂದರೆ 2011–12ನೇ ಸಾಲಿನ ದರಪಟ್ಟಿಯ ದರಗಳಂತೆ ಪರಿಷ್ಕರಿಸಲಾದ ಟೆಂಡರಿಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 11.63 ರಷ್ಟು ಹೆಚ್ಚುವರಿ) ಗಳಿಗೆ ಅನುಮೋದನೆ ಕೋರಿ ಕಾಮಗಾರಿಗಳ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರವರ ಟಿಪ್ಪಣಿ.

**ನಿರ್ಣಯಃ ದಿನಾಂಕಃ 11–05–2012ರ ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಒಪ್ಪಿದೆ.**

## 05] ವಿಷಯ ಸಂಖ್ಯೆಃ19/2012–13

**ವಿಷಯ:** Improvements, Strengthening & Asphalting to Internal Roads & Construction of Underpass at Big Bazaar junction in EPIP zone, Whitefield, Bangalore under Phase-II ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ.

**ಉಲ್ಲೇಖ** 1) ಕೈಗಾರಿಕಾ ಅಭಿವೃದ್ದಿ ಆಯುಕ್ತರು ಮತ್ತು ನಿರ್ದೇಶಕರು ಇವರ ಪತ್ರದ ಸಂಖ್ಯೆ: VITC/ASIDE/2010-11/957, ದಿನಾಂಕ: 06/12/2010.

2) ವ್ಯವಸ್ಥಾಪಕ ನಿರ್ದೇಶಕರು ವಿಶ್ವೇಶ್ವರಯ್ಯ ಕೈಗಾರಿಕಾ ಕೇಂದ್ರ, (VITC) ಬೆಂಗಳೂರು, ಇವರ ಪತ್ರ ಸಂಖ್ಯೆ: VITC/ASIDE/2010-11/1015, ದಿನಾಂಕ: 08/12/2010

3)ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:16(242)/2010–11 ದಿನಾಂಕ:24/02/2011.

*****

ಅಪರ ಆಯುಕ್ತರವರು(ಯೋಜನೆ) ರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೆಂಗಳೂರು ವೈಟ್‌ಫೀಲ್ಡ್‌ನ Export Promotion Industrial Park (EPIP) ನಲ್ಲಿ ಬರುವ ವಿವಿಧ ರಸ್ತೆಗಳ ಅಭಿವೃದ್ಧಿ, ಡಾಂಬರೀಕರಣ ಕಾಮಗಾರಿಗಳ ಹಾಗೂ ಅಂಡರ್‌ಪಾಸ್‌ನ್ನು ನಿರ್ಮಾಣ ಮಾಡಲು ರೂ.46.00 ಕೋಟಿಗಳ ಪ್ರಸ್ತಾವನೆಗೆ ಕೇಂದ್ರ ಸರ್ಕಾರದ ವಾಣಿಜ್ಯ ಇಲಾಖೆಯು ಅನುಮೋದನೆ ನೀಡಿರುತ್ತದೆ. ಈ ಯೋಜನೆಗೆ ರೂ.20.00 ಕೋಟಿಗಳನ್ನು ASIDE (Assistance to States for Infrastructure Development and Exports) ಯೋಜನೆಯಡಿ ವಿಶೇಷ ಅನುದಾನವನ್ನಾಗಿ ಒದಗಿಸಲಾಗಿದೆ. ಸದರಿ ಯೋಜನೆಯ Funding pattern ಈ ಕೆಳಕಂಡಂತಿರುತ್ತದೆ.

| | |
|---|---|
| ASIDE Scheme | ರೂ.20.00 ಕೋಟಿಗಳು |
| BBMP Share | ರೂ.26.00 ಕೋಟಿಗಳು |
| ಒಟ್ಟು | ರೂ.46.00 ಕೋಟಿಗಳು |

ಈ ಯೋಜನೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ರೂ.26.00 ಕೋಟಿಗಳ ಅನುದಾನವನ್ನು ಕಲ್ಪಿಸಬೇಕಾಗಿರುತ್ತದೆ. ಉಲ್ಲೇಖ (3) ರಲ್ಲಿ ಬೆಂಗಳೂರು ವೈಟ್‌ಫೀಲ್ಡ್‌ನ ವಿಶೇಷವಿತ್ತ ವಲಯದ Export Promotion Industrial Park (EPIP) ವಲಯದಲ್ಲಿ 2ನೇ ಹಂತದಲ್ಲಿ ಬರುವ ರಸ್ತೆಗಳ ಅಭಿವೃದ್ಧಿ ಮತ್ತು ಡಾಂಬರೀಕರಣ ಕಾಮಗಾರಿ ಹಾಗೂ ಅಂಡರ್‌ಪಾಸ್ ನಿರ್ಮಾಣದ ವಿವರವಾದ ಯೋಜನಾ ವರದಿಯನ್ನು 2009–10 ನೇ ಸಾಲಿನ ದರಗಳನ್ವಯ ಹಾಗೂ ಅನುಮೋದಿತ ಡೇಟಾ ದರಗಳ ಪ್ರಕಾರ ರೂ.46.00 ಕೋಟಿಗಳ ಅಂದಾಜನ್ನು ತಯಾರಿಸಲಾಗಿದ್ದು, ಅಂದಾಜಿಗೆ ಮುಖ್ಯ ಇಂಜಿನಿಯರ್, ರಸ್ತೆ ಮೂಲಭೂತ ಸೌಕರ್ಯ, ಇವರ ದಾಖಲು ಪಟ್ಟಿ ಸಂಖ್ಯೆ: CE/MR/TS/30/2011-12 ದಿನಾಂಕ:02/07/2011 ರಂದು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ. ಸದರಿ ಕಾಮಗಾರಿಗೆ ಘನ ಸರ್ಕಾರದ ಆಡಳಿತಾತ್ಮಕ ಅನುಮೋದನೆಯನ್ನು ನಿರೀಕ್ಷಿಸಿ ಟೆಂಡರ್ ಕರೆದು ತದನಂತರ ಟೆಂಡರ್ ಮತ್ತು ಆಡಳಿತಾತ್ಮಕ ಅನುಮೋದನೆಗಾಗಿ ಘನ ಸರ್ಕಾರಕ್ಕೆ ಸಲ್ಲಿಸುವ ಪ್ರಸ್ತಾವನೆಗೆ ಪಾಲಿಕೆಯು ವಿಷಯದ ಸಂಖ್ಯೆ: 16(242)/2010–11ದಿನಾಂಕ:24/02/2011 ಅನುಮೋದನೆ ನೀಡಿರುತ್ತದೆ.

ಸದರಿ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ ವಿಶೇಷ ವಿಭಾಗ–1 ರವರು ದಿನಾಂಕ:08/07/2011 ರಂದು E-Procurement ಮೂಲಕ ಟೆಂಡರ್ ಆಹ್ವಾನಿಸಿರುತ್ತಾರೆ. ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ ಏಕೈಕ ಗುತ್ತಿಗೆದಾರರು ಭಾಗವಹಿಸಿದ್ದ ಕಾರಣ ಟೆಂಡರ್‌ನ್ನು ರದ್ದುಪಡಿಸಿ, ದಿನಾಂಕ:09/11/2011 ರಂದು ಪುನಃ 2ನೇ ಭಾರಿಗೆ ಟೆಂಡರ್ ಆಹ್ವಾನಿಸಿರುತ್ತಾರೆ.

2ನೇ ಟೆಂಡರ್ ಕರೆಗೆ ಮೆ// ಜಿ.ವಿ.ಆರ್ ಇನ್ಫ್ರಾ ಪ್ರಾಜೆಕ್ಟ್ ಲಿ. ಮತ್ತು ಮೆ// ಇಂಜಿನಿಯರಿಂಗ್ ಪ್ರಾಜೆಕ್ಟ್ಸ್ ಇಂಡಿಯಾ ಲಿ. ಇವರು ಟೆಂಡರ್ ಸಲ್ಲಿಸಿದ್ದು, ಇಬ್ಬರೂ ಯಶಸ್ವಿ ಬಿಡ್ಡುದಾರರಾಗಿದ್ದು, ಸದರಿ ಬಿಡ್ಡನ್ನು ಮೌಲ್ಯಮಾಪನ ಮಾಡಲಾಗಿದ್ದು, ಮೆ// ಜಿ.ವಿ.ಆರ್ ಇನ್ಫ್ರಾ ಪ್ರಾಜೆಕ್ಟ್ ಲಿ. ರವರು ತಾಂತ್ರಿಕ ಮೌಲ್ಯ ಮಾಪನದಲ್ಲಿ ಅರ್ಹರಾಗಿರುತ್ತಾರೆ.

ತಾಂತ್ರಿಕ ಮೌಲ್ಯ ಮಾಪನದಲ್ಲಿ ಅರ್ಹರಾದ ಮೆ// ಜಿ.ವಿ.ಆರ್ ಇನ್ಫ್ರಾ ಪ್ರಾಜೆಕ್ಟ್ ಲಿಮಿಟೆಡ್ ರವರ ಆರ್ಥಿಕ ಬಿಡ್ಡನ್ನು ತೆರೆಯಲಾಗಿ ವಿವರ ಈ ಕೆಳಕಂಡಂತಿರುತ್ತದೆ.

| ಕ್ರ.ಸ | ತಾಂತ್ರಿಕ ಮೌಲ್ಯ ಮಾಪನದಲ್ಲಿ ಅರ್ಹರಾದ ಗುತ್ತಿಗೆದಾರರ ವಿವರ | ಟೆಂಡರ್‌ಗಿಟ್ಟ ಮೊತ್ತ ರೂ. | ಗುತ್ತಿಗೆದಾರರು ನಮೂದಿಸಿರುವ ಮೊತ್ತ ರೂ. | ಶೇಕಡವಾರು ಹೆಚ್ಚು/ಕಡಿಮೆ (2010–11 ನೇ ಸಾಲಿನ ದರಪಟ್ಟಿಗೆ ಹೋಲಿಸಿದಾಗ) | ಶೇಕಡವಾರು ಹೆಚ್ಚು/ಕಡಿಮೆ (2011–12 ನೇ ಸಾಲಿನ ದರಪಟ್ಟಿಗೆ ಹೋಲಿಸಿದಾಗ) |
|---|---|---|---|---|---|
| 1 | ಮೆ// ಜಿ.ವಿ.ಆರ್ ಇನ್ಫ್ರಾ ಪ್ರಾಜೆಕ್ಟ್ ಲಿಮಿಟೆಡ್ | 41,15,15,142.00 | 47,25,24,867.00 | 14.83% ಹೆಚ್ಚು | 9.47% ಹೆಚ್ಚು |

ಸದರಿ ಗುತ್ತಿಗೆದಾರರು ನಮೂದಿಸಿರುವ ಟೆಂಡರ್ ದರಗಳನ್ನು ಚಾಲ್ತಿಯಲ್ಲಿರುವ 2011–12ನೇ ಸಾಲಿನ ದರಪಟ್ಟಿಗೆ ಹೋಲಿಸಿದಾಗ ಟೆಂಡರ್ ದರವು ಶೇ 9.47 ರಷ್ಟು ಹೆಚ್ಚಾಗಿರುತ್ತದೆ. ಈ ದರಗಳು ಹೆಚ್ಚಾಗಿರುವುದು ಕಂಡು ಬಂದಿರುವುದರಿಂದ ಸದರಿ ಗುತ್ತಿಗೆದಾರರೊಡನೆ ಸಂಧಾನ ನಡೆಸಲಾಗಿ, ಅಂತಿಮವಾಗಿ ರೂ.47,06,28,912/– ಗಳಿಗೆ ಒಪ್ಪಿರುತ್ತಾರೆ. (2011–12ನೇ ಸಾಲಿನ ದರಪಟ್ಟಿಗೆ ಹೋಲಿಸಿದಾಗ ಟೆಂಡರ್ ದರವು ಶೇ 9.15 ರಷ್ಟು ಹೆಚ್ಚಾಗಿರುತ್ತದೆ) ವಿವರಗಳು ಈ ಕೆಳಕಂಡಂತಿರುತ್ತದೆ.

| ಕ್ರ.ಸ | ತಾಂತ್ರಿಕ ಮೌಲ್ಯ ಮಾಪನದಲ್ಲಿ ಅರ್ಹರಾದ ಗುತ್ತಿಗೆದಾರರ ವಿವರ | ಟೆಂಡರ್‌ಗಿಟ್ಟ ಮೊತ್ತ ರೂ. | ಗುತ್ತಿಗೆದಾರರು ನಮೂದಿಸಿರುವ ಮೂಲ ಟೆಂಡರ್ ಮೊತ್ತ ರೂ. | ಸಂಧಾನದ ನಂತರ ಗುತ್ತಿಗೆದಾರರು ನಮೂದಿಸಿರುವ ಮೊತ್ತ ರೂ. | ಸಂಧಾನದ ನಂತರ 2010-11 ನೇ ಸಾಲಿನ ದರಪಟ್ಟಿಗೆ ಹೋಲಿಸಿದಾಗ ಟೆಂಡರ್ ದರ | ಸಂಧಾನದ ನಂತರ 2011-12 ನೇ ಸಾಲಿನ ದರಪಟ್ಟಿಗೆ ಹೋಲಿಸಿದಾಗ ಟೆಂಡರ್ ದರ |
|---|---|---|---|---|---|---|
| 1 | ಮೆ// ಜಿ.ವಿ.ಆರ್ ಇನ್ಫ್ರಾ ಪ್ರಾಜೆಕ್ಟ್ ಲಿಮಿಟೆಡ್ | 41,15,15,142.00 | 47,25,24,867.00 | 47,06,28,912.40 | 14.36% ಹೆಚ್ಚು | 9.15% ಹೆಚ್ಚು |

ಸದರಿ ಕಾಮಗಾರಿಯ ಟೆಂಡರ್‌ನಲ್ಲಿ ಭಾಗವಹಿಸಿದ ಯಶಸ್ವಿ ಬಿಡ್ಡುದಾರರಾದ ಮೆ// ಜಿ.ವಿ.ಆರ್ ಇನ್ಫ್ರಾ ಪ್ರಾಜೆಕ್ಟ್ ಲಿಮಿಟೆಡ್ ರವರು ಸಂಧಾನದ ನಂತರ 2011-12 ನೇ ಸಾಲಿನ ದರಪಟ್ಟಿಗೆ ಹೋಲಿಸಿದಾಗ ನಮೂದಿಸಿರುವ ಟೆಂಡರ್ ದರವು ಶೇ. 9.15 ರಷ್ಟು ಹೆಚ್ಚುವರಿಯಾಗಿದ್ದು, ಸದರಿ ನಮೂದಿಸಿರುವ ದರವು ಸಮಂಜಸವಾಗಿರುವ ಹಿನ್ನಲೆಯಲ್ಲಿ, ಸದರಿ ಟೆಂಡರ್ ಮೊತ್ತ ರೂ. 47,06,28,912.40/- ಗಳ ಮೆ// ಜಿ.ವಿ.ಆರ್ ಇನ್ಫ್ರಾ ಪ್ರಾಜೆಕ್ಟ್ ಲಿಮಿಟೆಡ್ ರವರ ಗುತ್ತಿಗೆಯ ಅನುಮೋದನೆಗಾಗಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಅಪರ ಆಯುಕ್ತರು(ಯೋಜನೆ) ರವರ ಟಿಪ್ಪಣಿ.

**ನಿರ್ಣಯಃ ದಿನಾಂಕಃ 21-05-2012ರ ಅಪರ ಆಯುಕ್ತರು(ಯೋ) ಇವರ ಟಿಪ್ಪಣಿ ಒಪ್ಪಿದೆ.**

## 06] ವಿಷಯ ಸಂಖ್ಯೆಃ23/2012-13

ವಿಶೇಷ ಆಯುಕ್ತರವರು (ಯೋಜನೆ) ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಚಲ್ಲಘಟ್ಟ ಮುಖ್ಯ ಕಣಿವೆ C-100 ಶಿವಾಜಿನಗರ ರಸೆಲ್ ಮಾರುಕಟ್ಟೆಯ ಬಳಿ ಹರಿಯುತ್ತಿದ್ದು ಪ್ರತಿ ಮಳೆಗಾಲದಲ್ಲೂ ಸದರಿ ಮಾರುಕಟ್ಟೆ ಪ್ರದೇಶವು ನೀರು ತುಂಬಿ ಹರಿದು ಸಾರ್ವಜನಿಕರ ಆಸ್ತಿಗೆ ಹಾಗೂ ಸ್ಥಳೀಯ ಅಂಗಡಿ ಮಾಲೀಕರಿಗೆ ಕಷ್ಟ ನಷ್ಟ ಉಂಟಾಗುತ್ತಿದ್ದು, ಇದನ್ನು ತಪ್ಪಿಸಲು, ಕಣಿವೆಯನ್ನು ಅಗಲ ಹಾಗೂ ಆಳಗೊಳಿಸಲು ಅಂದಾಜನ್ನು 2009-11ನೇ ಸಾಲಿನ ಲೋಕೋಪಯೋಗಿ ಮತ್ತು ಒಳನಾಡು ಸಾರಿಗೆ ಇಲಾಖೆಯ, ಬೆಂಗಳೂರು ವೃತ್ತದ ದರಪಟ್ಟಿಯ ದರಗಳನ್ನು ಪರಿಗಣಿಸಿ ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು, ಟೆಂಡರ್ ಮುಖಾಂತರ ಕಡಿಮೆ ದರ ನಮೂದಿಸಿದ್ದ ಮೆಃ ಶ್ರೀ ರಾಮ್‌ಸಾಯಿ ಕನ್ಸ್ಟ್ರಕ್ಷನ್ಸ್, ಇವರಿಗೆ ವಹಿಸಿ ಕಾಮಗಾರಿಯನ್ನು (construction of RCC drain from Ch: 2000 to 2110m (from Jumma Masjip road to Seppings road) in Shivajinagar under Challagatta Valley) ಪ್ರಾರಂಭಿಸಲಾಗಿತ್ತು. ಸದರಿ ಗುತ್ತಿಗೆದಾರರರು ನಿಗದಿತ ಕಾಲಾವಧಿಯಲ್ಲಿ ನಿರೀಕ್ಷಿತ ಪ್ರಗತಿ ತೋರಿಸದ ಕಾರಣ ಸದರಿ ಗುತ್ತಿಗೆಯನ್ನು ರಿಸ್ಕ್ ಅಂಡ್ ಕಾಸ್ಟ್ ಮೇಲೆ ರದ್ದುಗೊಳಿಸಿ ಮರು ಟೆಂಡರ್ ಕರೆಯಲಾಯಿತು.

ಈ ಕಾಮಗಾರಿಗೆ ದಿನಾಂಕಃ 24-02-2012ರಂದು 5ನೇ ಬಾರಿ ಟೆಂಡರ್ ಅಧಿಸೂಚನೆಯನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಹೊರಡಿಸಲಾಯಿತು. ಟೆಂಡರ್ ಸಲ್ಲಿಸಲು ಕಡೆಯ ದಿನಾಂಕವಾಗಿದ್ದ 05-03-2012ರಂದು ಮೆ: ಕೆ.ವಿ.ಆರ್. ಕನ್ಸ್ಟ್ರಕ್ಷನ್ಸ್ ರವರು ಟೆಂಡರ್ ಸಲ್ಲಿಸಿರುವ ಏಕೈಕ ಬಿಡ್ಡುದಾರರಾಗಿರುತ್ತಾರೆ.

ಸದರಿ ಗುತ್ತಿಗೆದಾರರು ಸಲ್ಲಸಿದ್ದ ದಾಖಲೆಗಳನ್ನು ಪರಿಶೀಲಿಸಲಾಗಿ ತಾಂತ್ರಿಕವಾಗಿ ಗುತ್ತಿಗೆದಾರರರು ಅರ್ಹತೆಯನ್ನು ಹೊಂದಿರುವರೆಂದು ಘೋಷಿಸಿದ ನಂತರ ಇವರು ಸಲ್ಲಿಸಿದ್ದ ಆರ್ಥಿಕ ಬಿಡ್‌ಅನ್ನು ದಿನಾಂಕಃ 09-03-2012ರಂದು ತೆರೆಯಲಾಗಿದ್ದು ಕೆಳಕಂಡಂತೆ ಒಟ್ಟಾರೆ ಮೊತ್ತವನ್ನು ನಮೂದಿಸಿರುತ್ತಾರೆ.

| | | |
|---|---|---|
| 1 | ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ ( 2009-10ನೇ ಸಾಲಿನ ದರಪಟ್ಟಿಯಂತೆ) | ರೂ. 2,03,44,982/- |

| | | |
|---|---|---|
| 2 | ಪ್ರಸಕ್ತ ಸಾಲಿನ ಅಂದರೆ 2011–12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗೆ ಇಟ್ಟ ಮೊತ್ತ | ರೂ. 2,58,13,384/– |
| 3 | ಬಿಡ್ಡುದಾರರಾದ ಮೆ: ಕೆ.ವಿ.ಆರ್. ಕನ್ಸ್ಟ್ರಕ್ಷನ್ಸ್ ರವರು ನಮೂದಿಸಿರುವ ಟೆಂಡರ್ ಮೊತ್ತ | ರೂ. 2,94,84,776/– |
| 4 | ದರ ಸಂಧಾನದ ನಂತರ ಕೆ.ವಿ.ಆರ್. ಕನ್ಸ್ಟ್ರಕ್ಷನ್ಸ್ ರವರು ನಮೂದಿಸಿರುವ ಟೆಂಡರ್ ಮೊತ್ತ | ರೂ.2,93,33,90/– |
| 5 | ಟೆಂಡರ್ ಗಿಟ್ಟ ಮೊತ್ತದ ಮೇಲಿನ ಶೇಕಡವಾರು ಹೆಚ್ಚುವರಿ/ ಕಡಿಮೆ | ರೂ. 44.18 ಹೆಚ್ಚುವರಿ |
| 6 | ಪ್ರಸಕ್ತ ಸಾಲಿನ 2011–12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗೆ ಇಟ್ಟ ಮೊತ್ತದ ಮೇಲಿನ ಶೇಕಡವಾರು ಹೆಚ್ಚಳ/ ಕಡಿಮೆ | 13.64 ಹೆಚ್ಚುವರಿ |

ಮೆ: ಕೆ.ವಿ.ಆರ್. ಕನ್ಸ್ಟ್ರಕ್ಷನ್ಸ್ ರವರು ನಮೂದಿಸಿರುವ ಮೊತ್ತವು ಮಂಜೂರಾದ ಅಂದಾಜಿನಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 44.18 ರಷ್ಟು ಹೆಚ್ಚುವರಿ ಇದು ಪ್ರಸಕ್ತ ಸಾಲಿನ ಅಂದರೆ 2011–12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದ ಟೆಂಡರ್ ಮೊತ್ತಕ್ಕೆ ಹೋಲಿಸಿದಾಗ ಶೇಕಡ 13.64 ರಷ್ಟು ಹೆಚ್ಚುವರಿ ಆಗಿದ್ದು, ಸ್ಪರ್ಧಾತ್ಮಕವಾಗಿರುವುದು ಕಂಡುಬಂದಿರುತ್ತದೆ.

ಮೇಲಿನ ಹಿನ್ನೆಲೆಯಲ್ಲಿ, ಸದರಿ ಟೆಂಡರ್‌ನಲ್ಲಿ ಭಾಗವಹಿಸಿರುವ ಏಕೈಕ ಬಿಡ್ಡುದಾರರಾದ ಮೆ: ಕೆ.ವಿ.ಆರ್. ಕನ್ಸ್ಟ್ರಕ್ಷನ್ಸ್ ರವರು ಸಂಧಾನದ ನಂತರ ನಮೂದಿಸಿರುವ ಟೆಂಡರ್ ಮೊತ್ತ ರೂ. 2,93,33,900/–(ಮಂಜೂರಾದ ಅಂದಾಜು ಪಟ್ಟಿಯಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗಸ ಶೇಕಡ 44.18 ರಷ್ಟು ಹೆಚ್ಚವರಿ ಹಾಗೂ ಪ್ರಸಕ್ತ ಸಾಲಿನ ಅಂದರೆ 201–12ನೇ ಸಾಲಿನ ದರಪಟ್ಟಿಯ ದರಗಳಂತೆ ಪರಿಷ್ಕರಿಸಲಾದ ಟೆಂಡರಿಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 13.64 ರಷ್ಟು ಹೆಚ್ಚುವರಿ) ಗಳಿಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರು(ಯೋಜನೆ) ರವರ ಟಿಪ್ಪಣಿ.

**: ಮುಂದೂಡಿದೆ :**

07] ವಿಷಯ ಸಂಖ್ಯೆ:26 /2012–13

ವಿಶೇಷ ಆಯುಕ್ತರವರು (ಯೋಜನೆ) ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬಿ.ಬಿ.ಎಂ.ಪಿ ಯಲಹಂಕ ವಲಯ ವ್ಯಾಪ್ತಿಯ ಜಕ್ಕೂರು ವಾರ್ಡ್ ನಂ: 05 ಜಕ್ಕೂರು ಕೆರೆಯಿಂದ ರಾಚೇನಹಳ್ಳಿ ಕೆರೆಗೆ ಸಂಪರ್ಕಿಸುವ BP 171A ರಾಜಕಾಲುವೆಯಲ್ಲಿ ಇದೇ ವಾರ್ಡಿನ ಜವಹರ್‌ಲಾಲ್ ನೆಹರು ಉನ್ನತ ವಿಜ್ಞಾನ ಸಂಶೋಧನಾ ಕೇಂದ್ರದ ಆವರಣ ಬಿ.ಪಿ 171ಎ ನೀರುಕಾಲುವೆ ಸರಪಳಿ 1500 ರೀಲೊಕೇಟೆಡ್ ಸರಪಳಿ 1400ರಲ್ಲಿ ಕಾಲುವೆಗೆ ಅಡ್ಡಲಾಗಿ ಸೇತುವೆ ನಿರ್ಮಿಸುವುದು ಅಗತ್ಯವಿದ್ದುದರಿಂದ ರೂ. 92.53 ಲಕ್ಷ ರೂಗಳಿಗೆ ಅಂದಾಜನ್ನು ತಯಾರಿಸಿ ಸಲ್ಲಿಸಲಾಗಿತ್ತು. ಈ ಅಂದಾಜಿಗೆ ಆಡಳಿತಾತ್ಮಕ ಮತ್ತು ತಾಂತ್ರಿಕ ಅನುಮೋದನೆ ದೊರೆತಿದ್ದು ನಂತರ ಸದರಿ ಕಾಮಗಾರಿಗಾಗಿ ನಿಯಮಾನುಸಾರ ಅಲ್ಪಾವಧಿ ಟೆಂಡರ್ ಕರೆಯಲಾಗಿತ್ತು.

ಸದರಿ ಟೆಂಡರಿನಲ್ಲಿ ಇಬ್ಬರು ಗುತ್ತಿಗೆದಾರರಾದ (1) ಎನ್.ಶಿವಕುಮಾರ್ (2) ಪ್ರಶಾಂತ್ ಕೆ.ಸಿ. ರವರು ಭಾಗವಹಿಸಿದ್ದು, ಇವರು ನಮೂದಿಸಿರುವ ಟೆಂಡರನ್ನು ಎವಾಲ್ಯೂಯೇಷನ್ ಮಾಡಿದಾಗ **ಎನ್.ಶಿವಕುಮಾರ್ ರವರು ರೂ. 93,92,348.27 ಅನ್ನು ನಮೂದಿಸಿದ್ದು, ಇದು 2010–11ನೇ ಸಾಲಿನ ದರ ಪಟ್ಟಿಗೆ ಹೋಲಿಸಿದಾಗ ಶೇಕಡ 3.36 ರಷ್ಟು ಹೆಚ್ಚಿಗೆ ಇದ್ದು ಹಾಗೂ 2011–12ರ ದರಪಟ್ಟಿಗೆ ಹೋಲಿಸಿದಾಗ ಶೇಕಡ 3.05 ರಷ್ಟು ಹೆಚ್ಚಿಗೆ ಇದ್ದು ಇವರು L1 ಗುತ್ತಿಗೆದಾರರಾಗಿರುತ್ತಾರೆ.** ಶ್ರೀ. ಪ್ರಶಾಂತ್ ಕೆ.ಸಿ. ರವರು ರೂ. 1,11,04,955.27ಗಳನ್ನು ನಮೂದಿಸಿ ಇವರು L2 ಗುತ್ತಿಗೆದಾರರಾಗಿರುತ್ತಾರೆ.

ಈ ಕಾಮಗಾರಿಯನ್ನು ಅವಶ್ಯವಾಗಿ ಕೈಗೊಳ್ಳಬೇಕಿರುವುದರಿಂದ ಶೇಕಡ 3.36ರಷ್ಟು 210–11ನೇ ಸಾಲಿನಲ್ಲಿ ಮತ್ತು ಶೇಕಡ 3.05 ರಷ್ಟು 2011–12ನೇ ಸಾಲಿನ ದರಗಳಿಗೆ ಹೆಚ್ಚಿಗೆಸ ದರ ನಮೂದಿಸಿರುವ

ಶ್ರೀ.ಎನ್.ಶಿವಕುಮಾರ್ ಇವರು ಬಿಡ್ಡುಮಾಡಿರುವ ಟೆಂಡರ್‌ಮೊತ್ತ ರೂ. 9392348.27 ಗಳಿಗೆ ಅನುಮೋದನೆ ನೀಡಲು ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರವರ ಟಿಪ್ಪಣಿ.

**ನಿರ್ಣಯಃ ದಿನಾಂಕಃ 28–05–2012ರ ವಿಶೇಷ ಆಯುಕ್ತರು (ಯೋ) ಇವರ ಟಿಪ್ಪಣಿಯನ್ನು ಒಪ್ಪಿದೆ.**

## 08] ವಿಷಯ ಸಂಖ್ಯೆ:27 /2012–13

ಆಯುಕ್ತರವರು ರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ನಾಡ ಪ್ರಭು ಕೆಂಪೇಗೌಡ ವಸ್ತು ಸಂಗ್ರಹಾಲಯವು ಮೇಯೋಹಾಲ್ ರೆಸಿಡೆನ್ಸಿ ರಸ್ತೆಯಲ್ಲಿ ಈಗಾಗಲೇ ಪ್ರಾರಂಭಿಸಲಾಗಿರುತ್ತದೆ. ಸದರಿ ವಸ್ತು ಸಂಗ್ರಹಾಲಯದ ಸುತ್ತಮುತ್ತಲಿನ ಕಾಂಪೌಂಡ್ ಮತ್ತು ಗ್ರಿಲ್‌ಗಳು ಶಿಥಿಲಾವಸ್ಥೆಯಲ್ಲಿದ್ದು, ವಸ್ತು ಸಂಗ್ರಹಾಲಯದ ವೀಕ್ಷಣೆಗೆ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಭೇಟಿ ನೀಡುತ್ತಿದ್ದು, ಸುರಕ್ಷತೆಯ ದೃಷ್ಟಿಯಿಂದ ವಸ್ತು ಸಂಗ್ರಹಾಲಯದ ಸುತ್ತಲೂ ಮೇಯೋಹಾಲ್ ನ್ಯಾಯಾಲಯಕ್ಕೆ ಹೊಂದಿಕೊಂಡಿರುವ ಜಾಗದಲ್ಲಿ ಮತ್ತು ರೆಸಿಡೆನ್ಸ್ ರಸ್ತೆಯ ಕಡೆಗೆ ಕಾಂಪೌಂಡ್ ಗ್ರಿಲ್‌ಗಳನ್ನು ಅಳವಡಿಸಿ ಭದ್ರತೆಯನ್ನು ಕಲ್ಪಿಸುವುದು ಸಾರ್ವಜನಿಕರ ಹಿತದೃಷ್ಟಿಯಿಂದ ಅತ್ಯಗತ್ಯವಾಗಿರುತ್ತದೆ.

ಆದಕಾರಣ, ಕೆಂಪೇಗೌಡ ವಸ್ತು ಸಂಗ್ರಹಾಲಯದ ಸುತ್ತಲೂ ಗ್ರಿಲ್‌ಗಳನ್ನು ಅಳವಡಿಸುವ ಕಾಮಗಾರಿಗೆ 2011–12ನೇ ಸಾಲಿನ ದರಪಟ್ಟಿ ಮತ್ತು ಮಂಜೂರಾದ ಡೇಟಾರೇಟ್‌ಗೆ ಅನುಗುಣವಾಗಿ ರೂ.65,00,000/– ಲಕ್ಷಗಳಿಗೆ ಅಂದಾಜುಪಟ್ಟಿಯನ್ನು ಸಿದ್ಧಪಡಿಸಲಾಗಿದ್ದು, ತತ್ಸಂಬಂಧ ಅಗತ್ಯ ಅನುಮೋದನೆಗಳೊಂದಿಗೆ 2011–12ರ ಆಯವ್ಯದ ಲೆಕ್ಕ ಶೀರ್ಷಿಕೆ ಪಿ–1661 ಅಡಿಯಲ್ಲಿ ಸಂಖ್ಯೆ: 111–12–000021 ಜಾಬ್ ಸಂಕೇತ ಲಭ್ಯವಾಗಿರುತ್ತದೆ.

ಡಾ: ಅಶ್ವಥನಾರಾಯಣ ಸಿ.ಎನ್. ವಿಧಾನ ಸಭಾ ಸದಸ್ಯರು ಮತ್ತು ಕೆಂಪೇಗೌಡ ಸ್ಮಾರಕ ವಸ್ತು ಸಂಗ್ರಹಾಲಯದ ಗೌರವ ಸಲಹಾ ಸಮಿತಿಯ ಸದಸ್ಯರು ದಿನಾಂಕಃ 20–03–2012ರಂದು ಆಯುಕ್ತರವರಿಗೆ ಪತ್ರ ನೀಡಿ, ಸದರಿ ಕಾಮಗಾರಿಯನ್ನು ತುರ್ತಾಗಿ ನಿರ್ವಹಿಸಬೇಕಾಗಿದ್ದು, ಟೆಂಡರ್ ಪ್ರಕ್ರಿಯೆಗಳನ್ನು ನಡೆಸಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಕಾಲ ವಿಳಂಭವಾಗುವುದರಿಂದ ಸೂಚಿತ ಕಾಮಗಾರಿಯನ್ನು ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ವಹಿಸಿ ಶೀಘ್ರವಾಗಿ ಅನುಷ್ಠಾನಗೊಳಿಸುವಂತೆ ಕೋರಿರುತ್ತಾರೆ.

ಆದಕಾರಣ, ಸದರಿ ಕಾಮಗಾರಿಯ ಮೊತ್ತು ರೂ. 65,00,000/–ಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿ, ಕೆ.ಆರ್.ಐ.ಡಿ.ಎಲ್ ಸಂಸ್ಥೆ ಮುಖಾಂತರ ಕಾಮಗಾರಿಯನ್ನು ಕೈಗೆತ್ತಿಕೊಂಡು ನಿರ್ವಹಿಸಲು ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮತಿಯ ಮುಂದೆ ಮಂಡಿಸಲಾದ ಆಯುಕ್ತರವರ ಟಿಪ್ಪಣಿ.

**ನಿರ್ಣಯಃ ದಿನಾಂಕಃ 16–04–2012ರ ಆಯುಕ್ತರ ಟಿಪ್ಪಣಿ ಒಪ್ಪಿದೆ.**

## 09] ವಿಷಯ ಸಂಖ್ಯೆ:/28/2012–13

ವಿಶೇಷ ಆಯುಕ್ತರು (ಯೋಜನೆ) ರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಕ್ಷಿಣ ವಲಯದ ಚಿಕ್ಕಪೇಟೆ ವಿಧಾನ ಸಭಾ ಕ್ಷೇತ್ರದ ವಾರ್ಡ್ ನಂಃ 142, ಪುಟ್ಟಣ್ಣ ರಸ್ತೆಯಿಂದ ಗಾಂಧಿಬಜಾರ್ ಮುಖ್ಯ ರಸ್ತೆಯವರೆಗೆ ಹರಿಯುತ್ತಿರುವ ಬೃಹತ್ ನೀರುಗಾಲುವೆಯ ಕಾಮಗಾರಿಯನ್ನು (Construction of RCC culvert across storm water drain in Gandhi Bazar main road using RCC cellular segments) ನಿರ್ಮಾಣ ಮಾಡಲು ಅಂದಾಜು ಪಟ್ಟಿ ರೂ. 62.00 ಲಕ್ಷಗಳಿಗೆ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿಯಾಗಿರುತ್ತದೆ. ಈ ಕಾಮಗಾರಿಯನ್ನು ದಿನಾಂಕಃ 07–02–2012ರಂದು ಇ–

ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ಅನ್ನು ಆಹ್ವಾನಿಸಲಾಗಿರುತ್ತದೆ. ಈ ಟೆಂಡರ್ ಏಕೈಕ ಗುತ್ತಿಗೆದಾರರು ಭಾಗವಹಿಸಿದ್ದುದ್ದರಿಂದ ಟೆಂಡರ್ ರದ್ದಾಗಿರುತ್ತದೆ.

ಸದರಿ ಕಾಮಗಾರಿಯನ್ನು ಟೆಂಡರ್‌ಅನ್ನು ಪುನಃ ದಿನಾಂಕಃ 20-03-2012ರಂದು ಆಹ್ವಾನಿಸಲಾಗಿರುತ್ತದೆ. ಎರಡನೇ ಬಾರಿಯೂ ಸಹ ಏಕೈಕ ಗುತ್ತಿಗೆದಾರರು ಭಾಗವಹಿಸಿರುತ್ತಾರೆ. ಇವರು ಮಂಜೂರಾದ ಅಂದಾಜುಪಟ್ಟಿಗೆ ಅಂದರೆ 2011-12ನೇ ಸಾಲಿನ ದರಪಟ್ಟಿಗೆ ಶೇಕಡ 13.55ರಷ್ಟು ಹೆಚ್ಚಿಗೆ ದರಗಳನ್ನು ನಮೂಸಿರುತ್ತಾರೆ. ಸದರಿ ಗುತ್ತಿಗೆದಾರರು ನಮೂದಿಸಿರುವ ದರಗಳನ್ನು Ist quarter issue rates of steel ಗೆ ಹೋಲಿಸಿದಾಗ 6.02% ಹೆಚ್ಚುವರಿಯಾಗಿರುತ್ತದೆ. ಈ ದರಗಳು ಸ್ಪರ್ಧಾತ್ಮಕವಾಗಿದ್ದು ಒಪ್ಪಬಹುದಾಗಿರುತ್ತದೆ.

ಸದರಿ ಕಾಮಗಾರಿಗೆ ಗುತ್ತಿಗೆದಾರರಾದ ಶ್ರೀ. ಪ್ರಶಾಂತ .ಕೆ.ಸಿ. ರವರು ನಮೂದಿಸಿರುವ ದರಗಳನ್ನು ದರ ರೂ. 70,39,042.14 ಲಕ್ಷಗಳಿಗೆ ಟೆಂಡರ್ ಅನುಮೋದನೆ ನೀಡಲು ಕೋರಿ ಬೃಹತ್ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರು(ಯೋಜನೆ) ರವರ ಟಿಪ್ಪಣಿ.

**ನಿರ್ಣಯಃ ದಿನಾಂಕಃ 06-06-2012ರ ವಿಶೇಷ ಆಯುಕ್ತರು (ಯೋ) ಇವರ ಟಿಪ್ಪಣಿ ಒಪ್ಪಿದೆ.**

## 10] ವಿಷಯ ಸಂಖ್ಯೆಃ/29/2012-13

ಅಪರ ಆಯುಕ್ತರು (ಯೋಜನೆ) ರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೆಂಗಳೂರು ನಗರದಲ್ಲಿ ವಿವಿಧ ರಸ್ತೆಗಳು ವಾಹನ ದಟ್ಟಣೆಯಿಂದ ಕೂಡಿದ್ದು, ಇಂತಹ ರಸ್ತೆಗಳಲ್ಲಿ ಹಾಗೂ ಕೂಡು ರಸ್ತೆಗಳಲ್ಲಿ ಪಾದಚಾರಿಗಳು ಸುರಕ್ಷಿತವಾಗಿ ರಸ್ತೆ ದಾಟಲು ಪಾದಚಾರಿ ಮೇಲುಸೇತುವೆ ನಿರ್ಮಿಸುವುದು ಅವಶ್ಯಕವಾಗಿರುತ್ತದೆ. ಈ ಸಂಬಂಧ ಮಾನ್ಯ ಶಾಸಕರು/ಪಾಲಿಕೆಯ ಸದಸ್ಯರು ಸೂಚಿಸುವ ಸ್ಥಳಗಳಲ್ಲಿ ಪಾದಚಾರಿ ಮೇಲು ಸೇತುವೆಗಳನ್ನು ನಿರ್ಮಿಸಲು ಕ್ರಮ ವಹಿಸುವಂತೆ ಪಾಲಿಕೆ ಸಭೆಯ ವಿಷಯ ಸಂಖ್ಯೆ: 13(208)/10-11 ರಲ್ಲಿ ದಿನಾಂಕ: 01-02-2011 ರಂದು ಅನುಮೋದನೆಯಾಗಿರುತ್ತದೆ.

ನಗರದ ವಿವಿಧ ಸ್ಥಳಗಳಲ್ಲಿ ಪಾದಚಾರಿ ಮೇಲುಸೇತುವೆ ನಿರ್ಮಿಸುವ ಸಾಧ್ಯ ಸಾಧ್ಯತೆಗಳನ್ನು ಅಧ್ಯಯನ ಮಾಡಿ Feasibility Report ನ್ನು ತಯಾರಿಸಲು ಯೋಜನಾ ಸಮಾಲೋಚಕರಾದ ಮೆ॥ ಇನ್‌ಫ್ರ ಸಪೋರ್ಟ್ ಇಂಜಿನಿಯರಿಂಗ್ ಕನ್ಸಲ್‌ಟೆಂಟ್ಸ್ ಪ್ರೈವೇಟ್ ಲಿಮಿಟೆಡ್ ರವರನ್ನು ನೇಮಿಸಿಕೊಂಡು ಈ ಕೆಳಕಂಡ 14 ಸ್ಥಳಗಳಲ್ಲಿ ಪಾದಚಾರಿ ಮೇಲುಸೇತುವೆ ನಿರ್ಮಿಸಲು ವರದಿ ಪಡೆಯಲಾಗಿರುತ್ತದೆ.

1. ಗಾಂಧಿ ಬಜಾರ್ ಮುಖ್ಯ ರಸ್ತೆ, ಡಿ.ವಿ.ಜಿ ರಸ್ತೆ ಜಂಕ್ಷನ್ ಹತ್ತಿರ
2. ಹಳೆ ವಿಮಾನ ನಿಲ್ದಾಣ ರಸ್ತೆ, ಮಾರತ್‌ಹಳ್ಳಿ ಹತ್ತಿರ
3. ಮಿಲ್ಲರ್ ರಸ್ತೆ ಭಗವಾನ್ ಮಹಾವಿರ್ ಆಸ್ಪತ್ರೆ ಹತ್ತಿರ
4. ಮಡಿವಾಳ ವಾಣಿಜ್ಯ ಸಂಕೀರ್ಣ ಹತ್ತಿರ, ಹೊಸೂರು ರಸ್ತೆ
5. ಹೊರವರ್ತುಲ ರಸ್ತೆ, ಹೊಸಕೆರೆ ಹಳ್ಳಿ, ಲಿಟಿಲ್ ಫ್ಲವರ್ ಶಾಲೆ ಹತ್ತಿರ
6. ಸಂಪಿಗೆ ರಸ್ತೆ, ಮಂತ್ರಿ ಮಾಲ್ ಹತ್ತಿರ
7. ಕ್ರೈಸ್ಟ್ ಕಾಲೇಜ್ ಹತ್ತಿರ, ಮರೀಗೌಡ ರಸ್ತೆ
8. ಎನ್.ಆರ್ ಕಾಲೋನಿ ಬಸ್ ನಿಲ್ದಾಣ ಹತ್ತಿರ
9. ಪ್ಯಾಲೇಸ್ ಗುಟ್ಟಹಳ್ಳಿ ಬಸ್ ನಿಲ್ದಾಣ ಹತ್ತಿರ, ಬಳ್ಳಾರಿ ರಸ್ತೆ
10. S.J.E.S ಕಾಲೇಜ್ ಎದುರು, ಕೆ.ಆರ್.ಪುರಂ
11. ಅಂಬಲಿಪುರ ಗೇಟ್ ಹತ್ತಿರ, ಸರ್ಜಾಪುರ ರಸ್ತೆ
12. ಮಯೂರ ಬೇಕರಿ ಹತ್ತಿರ, ವೈಟ್ ಫೀಲ್ಡ್
13. N.E.S ಜಂಕ್ಷನ್ ಹತ್ತಿರ, ಯಲಹಂಕ, ದೊಡ್ಡಬಳ್ಳಾಪುರ
14. ಎಂಬೆಸ್ಸಿ ಗಾಲ್ಫ್ ಲಿಂಕ್ ಹತ್ತಿರ, ದೊಮ್ಮಲೂರು.

ಮೇಲೆ ತಿಳಿಸಿದ ಸ್ಥಳಗಳಲ್ಲಿ ಪಾದಚಾರಿ ಮೇಲು ಸೇತುವೆಯನ್ನು DBOOT ಆಧಾರದ ಮೇಲೆ ನಿರ್ಮಿಸಲು ಇ-ಪ್ರೊಕ್ಯುರ್‌ಮೆಂಟ್ ಮುಖಾಂತರ ಟೆಂಡರ್‌ನ್ನು ದಿನಾಂಕ:18-02-2012 ರಂದು ಕರೆಯಲಾಗಿರುತ್ತದೆ.

ಈ ಟೆಂಡರ್ ಪ್ರಕ್ರಿಯೆಯಲ್ಲಿ ಹಳೇ ವಿಮಾನ ನಿಲ್ದಾಣ ರಸ್ತೆ, ಮಾರತ್‌ಹಳ್ಳಿ ಹತ್ತಿರ ಉದ್ದೇಶಿಸಿರುವ ಯೋಜನೆಗೆ ಎರಡು ಏಜೆನ್ಸಿಗಳಾದ (1) ಮೆ॥ ರಾಜ್‌ದೀಪ್ ಬಿಲ್ಡ್‌ಕಾನ್ ಪ್ರೈವೇಟ್ ಲಿಮಿಟೆಡ್ ಮತ್ತು (2) ಮೆ॥ ಪ್ರಕಾಶ್ ಆರ್ಟ್ಸ್ ರವರುಗಳು ಭಾಗವಹಿಸಿದ್ದು ಇಬ್ಬರು ಸಹ ತಾಂತ್ರಿಕ ಅರ್ಹತೆ ಹೊಂದಿರುತ್ತಾರೆ. ಇವರುಗಳು ನಮೂದಿಸಿರುವ ಆರ್ಥಿಕ ಬಿಡ್ ಕೆಳಕಂಡಂತೆ ಇರುತ್ತದೆ.

| ಕ್ರಮ ಸಂಖ್ಯೆ | ಏಜೆನ್ಸಿಗಳ ಹೆಸರು | ಪಾಲಿಕೆಗೆ ನೀಡಲು ಒಪ್ಪಿರುವ ವಾರ್ಷಿಕ ಲೈಸೆನ್ಸ್ ಫೀ (ತೆರಿಗೆ ಸೇರಿ) | ಷರಾ |
|---|---|---|---|
| 1 | ಮೆ॥ ಪ್ರಕಾಶ್ ಆರ್ಟ್ಸ್ | **ರೂ.**10,80,000/- | H1 |
| 2 | ಮೆ॥ ರಾಜ್‌ದೀಪ್ ಬಿಲ್ಡ್‌ಕಾನ್ ಪ್ರೈವೇಟ್ ಲಿಮಿಟೆಡ್ | **ರೂ.**5,89,000/- | H2 |

ಮೇಲ್ಕಾಣಿಸಿದ ಇಬ್ಬರು ಸಂಸ್ಥೆಯವರ ಪೈಕಿ ಮೆ॥ ಪ್ರಕಾಶ್ ಆರ್ಟ್ಸ್ ರವರು ಅತಿ ಹೆಚ್ಚು ಲೈಸೆನ್ಸ್ ಫೀ ನಮೂದಿಸಿದ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ಮೊತ್ತವು ಪ್ರತಿ ವರ್ಷಕ್ಕೆ ರೂ.10,80,000/-ಗಳಾಗಿದ್ದು, ಈ ಮೊತ್ತವು ಆರ್.ಎಫ್.ಪಿ. ಡಾಕ್ಯುಮೆಂಟ್‌ನಲ್ಲಿ ನಿಗಧಿಪಡಿಸಿರುವ ಕನಿಷ್ಠ ಲೈಸೆನ್ಸ್ ಫೀ ಮೊತ್ತವಾದ ರೂ.5,00,000/-ಗಳಿಗಿಂತ ಹೆಚ್ಚಾಗಿರುತ್ತದೆ ಹಾಗೂ ಸಮಜಂಸವಾಗಿರುತ್ತದೆ.

ಸದರಿ ಯೋಜನೆಯನ್ನು ಪಿ.ಪಿ.ಪಿ ಮಾದರಿಯಲ್ಲಿ ತೆಗೆದುಕೊಳ್ಳಲು ಉದ್ದೇಶಿಸಿದ್ದು ಪಾಲಿಕೆಯ ವತಿಯಿಂದ ಯಾವುದೇ ಆರ್ಥಿಕ ಹೊಣೆ ಇರುವುದಿಲ್ಲ. ಸಾರ್ವಜನಿಕರು ರಸ್ತೆಯನ್ನು ಸುರಕ್ಷಿತವಾಗಿ ದಾಟಲು ಈ ಸ್ಕೈವಾಕ್ ಅನ್ನು ಉಪಯೋಗಿಸಬಹುದಾಗಿದ್ದು, ಅತಿ ಹೆಚ್ಚು ದರ ನಮೂದಿಸಿರುವ ಏಜೆನ್ಸಿರವರು ಈ ಸ್ಕೈವಾಕ್ ಅನ್ನು ತಮ್ಮ ವೆಚ್ಚದಲ್ಲಿಯೇ ನಿರ್ಮಿಸಿ, 20 ವರ್ಷಗಳ ಅವಧಿಗೆ ನಿರ್ವಹಣೆ ಮಾಡುತ್ತಾರೆ ಹಾಗೂ ಪಾಲಿಕೆಯು ಈ ಸ್ಕೈವಾಕ್‌ನಲ್ಲಿ ಜಾಹೀರಾತು ಹಕ್ಕನ್ನು ಸದರಿ ಸಂಸ್ಥೆಗೆ ನೀಡಬೇಕಾಗುತ್ತದೆ.

ಈ ಮೇರೆಗೆ ಸದರಿ ಟೆಂಡರ್‌ನಲ್ಲಿ ಅತಿ ಹೆಚ್ಚು ದರ ನಮೂದಿಸಿರುವ ಏಜೆನ್ಸಿಯವರಾದ ಮೆ॥ ಪ್ರಕಾಶ್ ಆರ್ಟ್ಸ್ ರವರ ಬಿಡ್‌ನ್ನು ಪರಿಗಣಿಸಬಹುದಾಗಿದೆ.

ಆದುದರಿಂದ ಹಳೇ ವಿಮಾನ ನಿಲ್ದಾಣ ರಸ್ತೆ, ಮಾರತ್‌ಹಳ್ಳಿ ಹತ್ತಿರ DBOOT ಆಧಾರದ ಮೇಲೆ ಸ್ಕೈವಾಕ್ ನಿರ್ಮಿಸಿ ಜಾಹೀರಾತು ಹಕ್ಕನ್ನು ನೀಡಿ 20 ವರ್ಷಗಳ ಕಾಲಾವಧಿ ನಿರ್ವಹಣೆಯನ್ನು ಮಾಡುವ ಷರತ್ತಿಗೆ ಒಳಪಟ್ಟು ಮೆ॥ ಪ್ರಕಾಶ್ ಆರ್ಟ್ಸ್ ರವರ ಟೆಂಡರ್‌ನ್ನು ಅನುಮೋದಿಸಲು ಕೋರಿ ಬೃಹತ್ ಕಾಮಗಾರಿ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಅಪರ ಆಯುಕ್ತರು(ಯೋಜನೆ) ರವರ ಟಿಪ್ಪಣಿ.

**ನಿರ್ಣಯಃ ದಿನಾಂಕಃ 08-06-2012ರ ಅಪರ ಆಯುಕ್ತರು (ಯೋ) ಇವರ ಟಿಪ್ಪಣಿ ಒಪ್ಪಿದೆ.**

## 11] ವಿಷಯ ಸಂಖ್ಯೆಃ/30/2012-13

ಅಪರ ಆಯುಕ್ತರು (ಯೋಜನೆ) ರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೆಂಗಳೂರು ನಗರದಲ್ಲಿ ವಿವಿಧ ರಸ್ತೆಗಳು ವಾಹನ ದಟ್ಟಣೆಯಿಂದ ಕೂಡಿದ್ದು, ಇಂತಹ ರಸ್ತೆಗಳಲ್ಲಿ ಹಾಗೂ ಕೂಡು ರಸ್ತೆಗಳಲ್ಲಿ ಪಾದಚಾರಿಗಳು ಸುರಕ್ಷಿತವಾಗಿ ರಸ್ತೆ ದಾಟಲು ಪಾದಚಾರಿ ಮೇಲುಸೇತುವೆ ನಿರ್ಮಿಸುವುದು ಅವಶ್ಯಕವಾಗಿರುತ್ತದೆ. ಈ ಸಂಬಂಧ ಮಾನ್ಯ ಶಾಸಕರು/ಪಾಲಿಕೆಯ ಸದಸ್ಯರು ಸೂಚಿಸುವ ಸ್ಥಳಗಳಲ್ಲಿ

ಪಾದಚಾರಿ ಮೇಲು ಸೇತುವೆಗಳನ್ನು ನಿರ್ಮಿಸಲು ಕ್ರಮ ವಹಿಸುವಂತೆ ಪಾಲಿಕೆ ಸಭೆಯ ವಿಷಯ ಸಂಖ್ಯೆ: 13(208)/10-11 ರಲ್ಲಿ ದಿನಾಂಕ: 01-02-2011 ರಂದು ಅನುಮೋದನೆಯಾಗಿರುತ್ತದೆ.

ನಗರದ ವಿವಿಧ ಸ್ಥಳಗಳಲ್ಲಿ ಪಾದಚಾರಿ ಮೇಲುಸೇತುವೆ ನಿರ್ಮಿಸುವ ಸಾಧ್ಯ ಸಾಧ್ಯತೆಗಳನ್ನು ಅಧ್ಯಯನ ಮಾಡಿ Feasibility Report ನ್ನು ತಯಾರಿಸಲು ಯೋಜನಾ ಸಮಾಲೋಚಕರಾದ ಮೆ॥ ಇನ್‌ಫ್ರ ಸಪೋರ್ಟ್ ಇಂಜಿನಿಯರಿಂಗ್ ಕನ್ಸಲ್‌ಟೆಂಟ್ಸ್ ಪ್ರೈವೇಟ್ ಲಿಮಿಟೆಡ್ ರವರನ್ನು ನೇಮಿಸಿಕೊಂಡು ಈ ಕೆಳಕಂಡ 14 ಸ್ಥಳಗಳಲ್ಲಿ ಪಾದಚಾರಿ ಮೇಲುಸೇತುವೆ ನಿರ್ಮಿಸಲು ವರದಿ ಪಡೆಯಲಾಗಿರುತ್ತದೆ.

1. ಗಾಂಧಿ ಬಜಾರ್ ಮುಖ್ಯ ರಸ್ತೆ, ಡಿ.ವಿ.ಜಿ ರಸ್ತೆ ಜಂಕ್ಷನ್ ಹತ್ತಿರ
2. ಹಳೆ ವಿಮಾನ ನಿಲ್ದಾಣ ರಸ್ತೆ, ಮಾರತ್‌ಹಳ್ಳಿ ಹತ್ತಿರ
3. ಮಿಲ್ಲರ್ ರಸ್ತೆ ಭಗವಾನ್ ಮಹಾವೀರ್ ಆಸ್ಪತ್ರೆ ಹತ್ತಿರ
4. ಮಡಿವಾಳ ವಾಣಿಜ್ಯ ಸಂಕೀರ್ಣ ಹತ್ತಿರ, ಹೊಸೂರು ರಸ್ತೆ
5. ಹೊರವರ್ತುಲ ರಸ್ತೆ, ಹೊಸಕೆರೆ ಹಳ್ಳಿ, ಲಿಟಿಲ್ ಫ್ಲವರ್ ಶಾಲೆ ಹತ್ತಿರ
6. ಸಂಪಿಗೆ ರಸ್ತೆ, ಮಂತ್ರಿ ಮಾಲ್ ಹತ್ತಿರ
7. ಕ್ರೈಸ್ಟ್ ಕಾಲೇಜ್ ಹತ್ತಿರ, ಮರೀಗೌಡ ರಸ್ತೆ
8. ಎನ್.ಆರ್ ಕಾಲೋನಿ ಬಸ್ ನಿಲ್ದಾಣ ಹತ್ತಿರ
9. ಪ್ಯಾಲೇಸ್ ಗುಟ್ಟಹಳ್ಳಿ ಬಸ್ ನಿಲ್ದಾಣ ಹತ್ತಿರ, ಬಳ್ಳಾರಿ ರಸ್ತೆ
10. S.J.E.S ಕಾಲೇಜ್ ಎದುರು, ಕೆ.ಆರ್.ಪುರಂ
11. ಅಂಬಲಿಪುರ ಗೇಟ್ ಹತ್ತಿರ, ಸರ್ಜಾಪುರ ರಸ್ತೆ
12. ಮಯೂರ ಬೇಕರಿ ಹತ್ತಿರ, ವೈಟ್ ಫೀಲ್ಡ್
13. N.E.S ಜಂಕ್ಷನ್ ಹತ್ತಿರ, ಯಲಹಂಕ, ದೊಡ್ಡಬಳ್ಳಾಪುರ
14. ಎಂಬೆಸಿ ಗಾಲ್ಫ್ ಲಿಂಕ್ ಹತ್ತಿರ, ದೊಮ್ಮಲೂರು.

ಮೇಲೆ ತಿಳಿಸಿದ ಸ್ಥಳಗಳಲ್ಲಿ ಪಾದಚಾರಿ ಮೇಲು ಸೇತುವೆಯನ್ನು DBOOT ಆಧಾರದ ಮೇಲೆ ನಿರ್ಮಿಸಲು ಇ-ಪ್ರೊಕ್ಯುರ್‌ಮೆಂಟ್ ಮುಖಾಂತರ ಟೆಂಡರ್‌ನ್ನು ದಿನಾಂಕ: 18-02-2012 ರಂದು ಕರೆಯಲಾಗಿರುತ್ತದೆ.

ಈ ಟೆಂಡರ್ ಪ್ರಕ್ರಿಯೆಯಲ್ಲಿ ಎಂಬೆಸ್ಸಿ ಗಾಲ್ಫ್ ಲಿಂಕ್, ದೊಮ್ಮಲೂರು ಹತ್ತಿರ ಉದ್ದೇಶಿಸಿರುವ ಯೋಜನೆಗೆ ಎರಡು ಏಜೆನ್ಸಿಗಳಾದ (1) ಮೆ॥ ರಾಜ್‌ದೀಪ್ ಬಿಲ್ಡ್‌ಕಾನ್ ಪ್ರೈವೇಟ್ ಲಿಮಿಟೆಡ್ ಮತ್ತು (2) ಮೆ॥ ಪ್ರಕಾಶ್ ಆರ್ಟ್ಸ್ ರವರುಗಳು ಭಾಗವಹಿಸಿದ್ದು ಇಬ್ಬರು ಸಹ ತಾಂತ್ರಿಕ ಅರ್ಹತೆ ಹೊಂದಿರುತ್ತಾರೆ. ಇವರುಗಳು ನಮೂದಿಸಿರುವ ಆರ್ಥಿಕ ಬಿಡ್ ಕೆಳಕಂಡಂತೆ ಇರುತ್ತದೆ.

| ಕ್ರಮ ಸಂಖ್ಯೆ | ಏಜೆನ್ಸಿಗಳ ಹೆಸರು | ಪಾಲಿಕೆಗೆ ನೀಡಲು ಒಪ್ಪಿರುವ ವಾರ್ಷಿಕ ಲೈಸೆನ್ಸ್ ಫೀ (ತೆರಿಗೆ ಸೇರಿ) | ಷರಾ |
|---|---|---|---|
| 1 | ಮೆ॥ ಪ್ರಕಾಶ್ ಆರ್ಟ್ಸ್ | **ರೂ.**10,80,000/- | H1 |
| 2 | ಮೆ॥ ರಾಜ್‌ದೀಪ್ ಬಿಲ್ಡ್‌ಕಾನ್ ಪ್ರೈವೇಟ್ ಲಿಮಿಟೆಡ್ | **ರೂ.**5,69,000/- | H2 |

ಮೇಲ್ಕಾಣಿಸಿದ ಇಬ್ಬರು ಸಂಸ್ಥೆಯವರ ಪೈಕಿ ಮೆ॥ ಪ್ರಕಾಶ್ ಆರ್ಟ್ಸ್ ರವರು ಅತಿ ಹೆಚ್ಚು ಲೈಸೆನ್ಸ್ ಫೀ ನಮೂದಿಸಿದ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ಮೊತ್ತವು ಪ್ರತಿ ವರ್ಷಕ್ಕೆ ರೂ.10,80,000/-ಗಳಾಗಿದ್ದು, ಈ ಮೊತ್ತವು ಆರ್.ಎಫ್.ಪಿ. ಡಾಕ್ಯುಮೆಂಟ್‌ನಲ್ಲಿ ನಿಗಧಿಪಡಿಸಿರುವ ಕನಿಷ್ಠ ಲೈಸೆನ್ಸ್ ಫೀ ಮೊತ್ತವಾದ ರೂ.5,00,000/-ಗಳಿಗಿಂತ ಹೆಚ್ಚಾಗಿರುತ್ತದೆ ಹಾಗೂ ಸಮಜಂಸವಾಗಿರುತ್ತದೆ.

ಸದರಿ ಯೋಜನೆಯನ್ನು ಪಿ.ಪಿ.ಪಿ ಮಾದರಿಯಲ್ಲಿ ತೆಗೆದುಕೊಳ್ಳಲು ಉದ್ದೇಶಿಸಿದ್ದು ಪಾಲಿಕೆಯ ವತಿಯಿಂದ ಯಾವುದೇ ಆರ್ಥಿಕ ಹೊಣೆ ಇರುವುದಿಲ್ಲ. ಸಾರ್ವಜನಿಕರು ರಸ್ತೆಯನ್ನು ಸುರಕ್ಷಿತವಾಗಿ ದಾಟಲು ಈ ಸ್ಕೈವಾಕ್ ಅನ್ನು ಉಪಯೋಗಿಸಬಹುದಾಗಿದ್ದು, ಅತಿ ಹೆಚ್ಚು ದರ ನಮೂದಿಸಿರುವ ಏಜೆನ್ಸಿರವರು ಈ ಸ್ಕೈವಾಕ್ ಅನ್ನು ತಮ್ಮ ವೆಚ್ಚದಲ್ಲಿಯೇ ನಿರ್ಮಿಸಿ, 20 ವರ್ಷಗಳ ಅವಧಿಗೆ ನಿರ್ವಹಣೆ ಮಾಡುತ್ತಾರೆ ಹಾಗೂ ಪಾಲಿಕೆಯು ಈ ಸ್ಕೈವಾಕ್‌ನಲ್ಲಿ ಜಾಹೀರಾತು ಹಕ್ಕನ್ನು ಸದರಿ ಸಂಸ್ಥೆಗೆ ನೀಡಬೇಕಾಗುತ್ತದೆ.

ಈ ಮೇರೆಗೆ ಸದರಿ ಟೆಂಡರ್‌ನಲ್ಲಿ ಅತಿ ಹೆಚ್ಚು ದರ ನಮೂದಿಸಿರುವ ಏಜೆನ್ಸಿಯವರಾದ ಮೆ॥ ಪ್ರಕಾಶ್ ಆರ್ಟ್ಸ್ ರವರ ಬಿಡ್‌ನ್ನು ಪರಿಗಣಿಸಬಹುದಾಗಿದೆ.

ಆದುದರಿಂದ ಎಂಬೆಸ್ಸಿ ಗಾಲ್ಫ್ ಲಿಂಕ್, ದೊಮ್ಮಲೂರು ಹತ್ತಿರ DBOOT ಆಧಾರದ ಮೇಲೆ ಸ್ಕೈವಾಕ್ ನಿರ್ಮಿಸಿ ಜಾಹೀರಾತು ಹಕ್ಕನ್ನು ನೀಡಿ 20 ವರ್ಷಗಳ ಕಾಲಾವಧಿ ನಿರ್ವಹಣೆಯನ್ನು ಮಾಡುವ ಶರತ್ತಿಗೆ ಒಳಪಟ್ಟು ಮೆ॥ ಪ್ರಕಾಶ್ ಆರ್ಟ್ಸ್ ರವರ ಟೆಂಡರ್‌ನ್ನು ಅನುಮೋದಿಸಲು ಕೋರಿ ಬೃಹತ್ ಕಾಮಗಾರಿ ಸ್ಥಾಯಿ ಸಮಿತಿ, ನಗರ ಯೋಜನೆ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮತ್ತು ಪಾಲಿಕೆ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿ.

**: ಮುಂದೂಡಿದೆ :**

## 12] ವಿಷಯ ಸಂಖ್ಯೆ:/31/2012-13

ಅಪರ ಆಯುಕ್ತರು (ಯೋಜನೆ) ರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೆಂಗಳೂರು ನಗರದಲ್ಲಿ ವಿವಿಧ ರಸ್ತೆಗಳು ವಾಹನ ದಟ್ಟಣೆಯಿಂದ ಕೂಡಿದ್ದು, ಇಂತಹ ರಸ್ತೆಗಳಲ್ಲಿ ಹಾಗೂ ಕೂಡು ರಸ್ತೆಗಳಲ್ಲಿ ಪಾದಚಾರಿಗಳು ಸುರಕ್ಷಿತವಾಗಿ ರಸ್ತೆ ದಾಟಲು ಪಾದಚಾರಿ ಮೇಲುಸೇತುವೆ ನಿರ್ಮಿಸುವುದು ಅವಶ್ಯಕವಾಗಿರುತ್ತದೆ. ಈ ಸಂಬಂಧ ಮಾನ್ಯ ಶಾಸಕರು/ ಪಾಲಿಕೆಯ ಸದಸ್ಯರು ಸೂಚಿಸುವ ಸ್ಥಳಗಳಲ್ಲಿ ಪಾದಚಾರಿ ಮೇಲು ಸೇತುವೆಗಳನ್ನು ನಿರ್ಮಿಸಲು ಕ್ರಮ ವಹಿಸುವಂತೆ ಪಾಲಿಕೆ ಸಭೆಯ ವಿಷಯ ಸಂಖ್ಯೆ: 13(208)/10-11 ರಲ್ಲಿ ದಿನಾಂಕ: 01-02-2011 ರಂದು ಅನುಮೋದನೆಯಾಗಿರುತ್ತದೆ.

ನಗರದ ವಿವಿಧ ಸ್ಥಳಗಳಲ್ಲಿ ಪಾದಚಾರಿ ಮೇಲುಸೇತುವೆ ನಿರ್ಮಿಸುವ ಸಾಧ್ಯ ಸಾಧ್ಯತೆಗಳನ್ನು ಅಧ್ಯಯನ ಮಾಡಿ Feasibility Report ನ್ನು ತಯಾರಿಸಲು ಯೋಜನಾ ಸಮಾಲೋಚಕರಾದ ಮೆ॥ ಇನ್‌ಫ್ರ ಸಪೋರ್ಟ್ ಇಂಜಿನಿಯರಿಂಗ್ ಕನ್ಸಲ್‌ಟೆಂಟ್ಸ್ ಪ್ರೈವೇಟ್ ಲಿಮಿಟೆಡ್ ರವರನ್ನು ನೇಮಿಸಿಕೊಂಡು ಈ ಕೆಳಕಂಡ 14 ಸ್ಥಳಗಳಲ್ಲಿ ಪಾದಚಾರಿ ಮೇಲುಸೇತುವೆ ನಿರ್ಮಿಸಲು ವರದಿ ಪಡೆಯಲಾಗಿರುತ್ತದೆ.

1. ಗಾಂಧಿ ಬಜಾರ್ ಮುಖ್ಯ ರಸ್ತೆ, ಡಿ.ವಿ.ಜಿ ರಸ್ತೆ ಜಂಕ್ಷನ್ ಹತ್ತಿರ
2. ಹಳೆ ವಿಮಾನ ನಿಲ್ದಾಣ ರಸ್ತೆ, ಮಾರತ್‌ಹಳ್ಳಿ ಹತ್ತಿರ
3. ಮಿಲ್ಲರ್ ರಸ್ತೆ ಭಗವಾನ್ ಮಹಾವೀರ್ ಆಸ್ಪತ್ರೆ ಹತ್ತಿರ
4. ಮಡಿವಾಳ ವಾಣಿಜ್ಯ ಸಂಕೀರ್ಣ ಹತ್ತಿರ, ಹೊಸೂರು ರಸ್ತೆ
5. ಹೊರವರ್ತುಲ ರಸ್ತೆ, ಹೊಸಕೆರೆ ಹಳ್ಳಿ, ಲಿಟಿಲ್ ಫ್ಲವರ್ ಶಾಲೆ ಹತ್ತಿರ
6. ಸಂಪಿಗೆ ರಸ್ತೆ, ಮಂತ್ರಿ ಮಾಲ್ ಹತ್ತಿರ
7. ಕ್ರೈಸ್ಟ್ ಕಾಲೇಜ್ ಹತ್ತಿರ, ಮರೀಗೌಡ ರಸ್ತೆ
8. ಎನ್.ಆರ್ ಕಾಲೋನಿ ಬಸ್ ನಿಲ್ದಾಣ ಹತ್ತಿರ
9. ಪ್ಯಾಲೇಸ್ ಗುಟ್ಟಹಳ್ಳಿ ಬಸ್ ನಿಲ್ದಾಣ ಹತ್ತಿರ, ಬಳ್ಳಾರಿ ರಸ್ತೆ
10. S.J.E.S ಕಾಲೇಜ್ ಎದುರು, ಕೆ.ಆರ್.ಪುರಂ
11. ಅಂಬಲಿಪುರ ಗೇಟ್ ಹತ್ತಿರ, ಸರ್ಜಾಪುರ ರಸ್ತೆ
12. ಮಯೂರ ಬೇಕರಿ ಹತ್ತಿರ, ವೈಟ್ ಫೀಲ್ಡ್
13. N.E.S ಜಂಕ್ಷನ್ ಹತ್ತಿರ, ಯಲಹಂಕ, ದೊಡ್ಡಬಳ್ಳಾಪುರ

14. ಎಂಬೆಸಿ ಗಾಲ್ಫ್ ಲಿಂಕ್ ಹತ್ತಿರ, ದೊಮ್ಮಲೂರು.

ಮೇಲೆ ತಿಳಿಸಿದ ಸ್ಥಳಗಳಲ್ಲಿ ಪಾದಚಾರಿ ಮೇಲು ಸೇತುವೆಯನ್ನು DBOOT ಆಧಾರದ ಮೇಲೆ ನಿರ್ಮಿಸಲು ಇ–ಪ್ರೊಕ್ಯುರ್‌ಮೆಂಟ್ ಮುಖಾಂತರ ಟೆಂಡರ್‌ನ್ನು ದಿನಾಂಕ: 18–02–2012 ರಂದು ಕರೆಯಲಾಗಿರುತ್ತದೆ.

ಈ ಟೆಂಡರ್ ಪ್ರಕ್ರಿಯೆಯಲ್ಲಿ ಪ್ಯಾಲೇಸ್ ಗುಟ್ಟಹಳ್ಳಿ ಬಸ್ ನಿಲ್ದಾಣ ಹತ್ತಿರ ಉದ್ದೇಶಿಸಿರುವ ಯೋಜನೆಗೆ ಎರಡು ಏಜೆನ್ಸಿಗಳಾದ (1) ಮೆ॥ ರಾಜ್‌ದೀಪ್ ಬಿಲ್ಡ್‌ಕಾನ್ ಪ್ರೈವೇಟ್ ಲಿಮಿಟೆಡ್ ಮತ್ತು (2) ಮೆ॥ ಪ್ರಕಾಶ್ ಆರ್ಟ್ಸ್ ರವರುಗಳು ಭಾಗವಹಿಸಿದ್ದು ಇಬ್ಬರು ಸಹ ತಾಂತ್ರಿಕ ಅರ್ಹತೆ ಹೊಂದಿರುತ್ತಾರೆ. ಇವರುಗಳು ನಮೂದಿಸಿರುವ ಆರ್ಥಿಕ ಬಿಡ್ ಕೆಳಕಂಡಂತೆ ಇರುತ್ತದೆ.

| ಕ್ರಮ ಸಂಖ್ಯೆ | ಏಜೆನ್ಸಿಗಳ ಹೆಸರು | ಪಾಲಿಕೆಗೆ ನೀಡಲು ಒಪ್ಪಿರುವ ವಾರ್ಷಿಕ ಲೈಸೆನ್ಸ್ ಫೀ (ತೆರಿಗೆ ಸೇರಿ) | ಷರಾ |
|---|---|---|---|
| 1 | ಮೆ॥ ರಾಜ್‌ದೀಪ್ ಬಿಲ್ಡ್‌ಕಾನ್ ಪ್ರೈವೇಟ್ ಲಿಮಿಟೆಡ್ | 25,50,000/- | H1 |
| 2 | ಮೆ॥ ಪ್ರಕಾಶ್ ಆರ್ಟ್ಸ್ | 12,60,000/- | H2 |

ಮೇಲ್ಕಾಣಿಸಿದ ಇಬ್ಬರು ಸಂಸ್ಥೆಯವರ ಪೈಕಿ ಮೆ॥ ರಾಜ್‌ದೀಪ್ ಬಿಲ್ಡ್‌ಕಾನ್ ಪ್ರೈವೇಟ್ ಲಿಮಿಟೆಡ್ ರವರು ಅತಿ ಹೆಚ್ಚು ಲೈಸೆನ್ಸ್ ಫೀ ನಮೂದಿಸಿದ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ಮೊತ್ತವು ಪ್ರತಿ ವರ್ಷಕ್ಕೆ ರೂ.25,50,000/–ಗಳಾಗಿದ್ದು, ಈ ಮೊತ್ತವು ಆರ್.ಎಫ್.ಪಿ. ಡಾಕ್ಯುಮೆಂಟ್‌ನಲ್ಲಿ ನಿಗಧಿಪಡಿಸಿರುವ ಕನಿಷ್ಠ ಲೈಸೆನ್ಸ್ ಫೀ ಮೊತ್ತವಾದ ರೂ.5,00,000/–ಗಳಿಗಿಂತ ಹೆಚ್ಚಾಗಿರುತ್ತದೆ ಹಾಗೂ ಸಮಂಜಸವಾಗಿರುತ್ತದೆ.

ಸದರಿ ಯೋಜನೆಯನ್ನು ಪಿ.ಪಿ.ಪಿ ಮಾದರಿಯಲ್ಲಿ ತೆಗೆದುಕೊಳ್ಳಲು ಉದ್ದೇಶಿಸಿದ್ದು ಪಾಲಿಕೆಯ ವತಿಯಿಂದ ಯಾವುದೇ ಆರ್ಥಿಕ ಹೊಣೆ ಇರುವುದಿಲ್ಲ. ಸಾರ್ವಜನಿಕರು ರಸ್ತೆಯನ್ನು ಸುರಕ್ಷಿತವಾಗಿ ದಾಟಲು ಈ ಸ್ಕೈವಾಕ್ ಅನ್ನು ಉಪಯೋಗಿಸಬಹುದಾಗಿದ್ದು, ಅತಿ ಹೆಚ್ಚು ದರ ನಮೂದಿಸಿರುವ ಏಜೆನ್ಸಿರವರು ಈ ಸ್ಕೈವಾಕ್ ಅನ್ನು ತಮ್ಮ ವೆಚ್ಚದಲ್ಲಿಯೇ ನಿರ್ಮಿಸಿ, 20 ವರ್ಷಗಳ ಅವಧಿಗೆ ನಿರ್ವಹಣೆ ಮಾಡುತ್ತಾರೆ ಹಾಗೂ ಪಾಲಿಕೆಯು ಈ ಸ್ಕೈವಾಕ್‌ನಲ್ಲಿ ಜಾಹೀರಾತು ಹಕ್ಕನ್ನು ಸದರಿ ಸಂಸ್ಥೆಗೆ ನೀಡಬೇಕಾಗುತ್ತದೆ.

ಈ ಮೇರೆಗೆ ಸದರಿ ಟೆಂಡರ್‌ನಲ್ಲಿ ಅತಿ ಹೆಚ್ಚು ದರ ನಮೂದಿಸಿರುವ ಏಜೆನ್ಸಿಯವರಾದ ಮೆ॥ ರಾಜ್‌ದೀಪ್ ಬಿಲ್ಡ್‌ಕಾನ್ ಪ್ರೈವೇಟ್ ಲಿಮಿಟೆಡ್ ರವರ ಬಿಡ್‌ನ್ನು ಪರಿಗಣಿಸಬಹುದಾಗಿದೆ.

ಆದುದರಿಂದ ಪ್ಯಾಲೇಸ್ ಗುಟ್ಟಹಳ್ಳಿ ಬಸ್ ನಿಲ್ದಾಣ ಹತ್ತಿರ DBOOT ಆಧಾರದ ಮೇಲೆ ಸ್ಕೈವಾಕ್ ನಿರ್ಮಿಸಿ ಜಾಹೀರಾತು ಹಕ್ಕನ್ನು ನೀಡಿ 20 ವರ್ಷಗಳ ಕಾಲಾವಧಿ ನಿರ್ವಹಣೆಯನ್ನು ಮಾಡುವ ಶರತ್ತಿಗೆ ಒಳಪಟ್ಟು ಮೆ॥ ರಾಜ್‌ದೀಪ್ ಬಿಲ್ಡ್‌ಕಾನ್ ಪ್ರೈವೇಟ್ ಲಿಮಿಟೆಡ್ ರವರ ಟೆಂಡರ್‌ನ್ನು ಅನುಮೋದಿಸಲು ಕೋರಿ ಬೃಹತ್ ಕಾಮಗಾರಿ ಸ್ಥಾಯಿ ಸಮಿತಿ, ಮುಂದೆ ಮಂಡಿಸಲಾದ ಅಪರ ಆಯುಕ್ತರು(ಯೋಜನೆ) ರವರ ಟಿಪ್ಪಣಿ.

**: ಮುಂದೂಡಿದೆ :**

## 13] ವಿಷಯ ಸಂಖ್ಯೆ:/32/2012–13

ಅಪರ ಆಯುಕ್ತರು (ಯೋಜನೆ) ರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೆಂಗಳೂರು ನಗರದಲ್ಲಿ ವಿವಿಧ ರಸ್ತೆಗಳು ವಾಹನ ದಟ್ಟಣೆಯಿಂದ ಕೂಡಿದ್ದು, ಇಂತಹ ರಸ್ತೆಗಳಲ್ಲಿ ಹಾಗೂ ಕೂಡು ರಸ್ತೆಗಳಲ್ಲಿ ಪಾದಚಾರಿಗಳು ಸುರಕ್ಷಿತವಾಗಿ ರಸ್ತೆ ದಾಟಲು ಪಾದಚಾರಿ ಮೇಲುಸೇತುವೆ ನಿರ್ಮಿಸುವುದು

ಅವಶ್ಯಕವಾಗಿರುತ್ತದೆ. ಈ ಸಂಬಂಧ ಮಾನ್ಯ ಶಾಸಕರು/ಪಾಲಿಕೆಯ ಸದಸ್ಯರು ಸೂಚಿಸುವ ಸ್ಥಳಗಳಲ್ಲಿ ಪಾದಚಾರಿ ಮೇಲು ಸೇತುವೆಗಳನ್ನು ನಿರ್ಮಿಸಲು ಕ್ರಮ ವಹಿಸುವಂತೆ ಪಾಲಿಕೆ ಸಭೆಯ ವಿಷಯ ಸಂಖ್ಯೆ: 13(208)/10–11 ರಲ್ಲಿ ದಿನಾಂಕ: 01–02–2011 ರಂದು ಅನುಮೋದನೆಯಾಗಿರುತ್ತದೆ.

ನಗರದ ವಿವಿಧ ಸ್ಥಳಗಳಲ್ಲಿ ಪಾದಚಾರಿ ಮೇಲುಸೇತುವೆ ನಿರ್ಮಿಸುವ ಸಾಧ್ಯ ಸಾಧ್ಯತೆಗಳನ್ನು ಅಧ್ಯಯನ ಮಾಡಿ Feasibility Report ನ್ನು ತಯಾರಿಸಲು ಯೋಜನಾ ಸಮಾಲೋಚಕರಾದ ಮೆ॥ ಇನ್‌ಫ್ರ ಸಪೋರ್ಟ್ ಇಂಜಿನಿಯರಿಂಗ್ ಕನ್ಸಲ್‌ಟೆಂಟ್ಸ್ ಪ್ರೈವೇಟ್ ಲಿಮಿಟೆಡ್ ರವರನ್ನು ನೇಮಿಸಿಕೊಂಡು ಈ ಕೆಳಕಂಡ 14 ಸ್ಥಳಗಳಲ್ಲಿ ಪಾದಚಾರಿ ಮೇಲುಸೇತುವೆ ನಿರ್ಮಿಸಲು ವರದಿ ಪಡೆಯಲಾಗಿರುತ್ತದೆ.

1. ಗಾಂಧಿ ಬಜಾರ್ ಮುಖ್ಯ ರಸ್ತೆ, ಡಿ.ವಿ.ಜಿ ರಸ್ತೆ ಜಂಕ್ಷನ್ ಹತ್ತಿರ
2. ಹಳೆ ವಿಮಾನ ನಿಲ್ದಾಣ ರಸ್ತೆ, ಮಾರತ್‌ಹಳ್ಳಿ ಹತ್ತಿರ
3. ಮಿಲ್ಲರ್ ರಸ್ತೆ ಭಗವಾನ್ ಮಹಾವೀರ್ ಆಸ್ಪತ್ರೆ ಹತ್ತಿರ
4. ಮಡಿವಾಳ ವಾಣಿಜ್ಯ ಸಂಕೀರ್ಣ ಹತ್ತಿರ, ಹೊಸೂರು ರಸ್ತೆ
5. ಹೊರವರ್ತುಲ ರಸ್ತೆ, ಹೊಸಕೆರೆ ಹಳ್ಳಿ, ಲಿಟಿಲ್ ಫ್ಲವರ್ ಶಾಲೆ ಹತ್ತಿರ
6. ಸಂಪಿಗೆ ರಸ್ತೆ, ಮಂತ್ರಿ ಮಾಲ್ ಹತ್ತಿರ
7. ಕ್ರೈಸ್ಟ್ ಕಾಲೇಜ್ ಹತ್ತಿರ, ಮರೀಗೌಡ ರಸ್ತೆ
8. ಎನ್.ಆರ್ ಕಾಲೋನಿ ಬಸ್ ನಿಲ್ದಾಣ ಹತ್ತಿರ
9. ಪ್ಯಾಲೇಸ್ ಗುಟ್ಟಹಳ್ಳಿ ಬಸ್ ನಿಲ್ದಾಣ ಹತ್ತಿರ, ಬಳ್ಳಾರಿ ರಸ್ತೆ
10. S.J.E.S ಕಾಲೇಜ್ ಎದುರು, ಕೆ.ಆರ್.ಪುರಂ
11. ಅಂಬಲಿಪುರ ಗೇಟ್ ಹತ್ತಿರ, ಸರ್ಜಾಪುರ ರಸ್ತೆ
12. ಮಯೂರ ಬೇಕರಿ ಹತ್ತಿರ, ವೈಟ್ ಫೀಲ್ಡ್
13. N.E.S ಜಂಕ್ಷನ್ ಹತ್ತಿರ, ಯಲಹಂಕ, ದೊಡ್ಡಬಳ್ಳಾಪುರ
14. ಎಂಬೆಸಿ ಗಾಲ್ಫ್ ಲಿಂಕ್ ಹತ್ತಿರ, ದೊಮ್ಮಲೂರು.

ಮೇಲೆ ತಿಳಿಸಿದ ಸ್ಥಳಗಳಲ್ಲಿ ಪಾದಚಾರಿ ಮೇಲು ಸೇತುವೆಯನ್ನು DBOOT ಆಧಾರದ ಮೇಲೆ ನಿರ್ಮಿಸಲು ಇ–ಪ್ರೊಕ್ಯುರ್‌ಮೆಂಟ್ ಮುಖಾಂತರ ಟೆಂಡರ್‌ನ್ನು ದಿನಾಂಕ: 18–02–2012 ರಂದು ಕರೆಯಲಾಗಿರುತ್ತದೆ.

ಈ ಟೆಂಡರ್ ಪ್ರಕ್ರಿಯೆಯಲ್ಲಿ MH ಮರಿಗೌಡ ರಸ್ತೆ ಕ್ರೈಸ್ಟ್ ಕಾಲೇಜ್ ಹತ್ತಿರ ಉದ್ದೇಶಿಸಿರುವ ಯೋಜನೆಗೆ ಎರಡು ಏಜೆನ್ಸಿಗಳಾದ (1) ಮೆ॥ ರಾಜ್‌ದೀಪ್ ಬಿಲ್ಡ್‌ಕಾನ್ ಪ್ರೈವೇಟ್ ಲಿಮಿಟೆಡ್ ಮತ್ತು (2) ಮೆ॥ ಪ್ರಕಾಶ್ ಆರ್ಟ್ಸ್ ರವರುಗಳು ಭಾಗವಹಿಸಿದ್ದು ಇಬ್ಬರು ಸಹ ತಾಂತ್ರಿಕ ಅರ್ಹತೆ ಹೊಂದಿರುತ್ತಾರೆ. ಇವರುಗಳು ನಮೂದಿಸಿರುವ ಆರ್ಥಿಕ ಬಿಡ್ ಕೆಳಕಂಡಂತೆ ಇರುತ್ತದೆ.

| ಕ್ರಮ ಸಂಖ್ಯೆ | ಏಜೆನ್ಸಿಗಳ ಹೆಸರು | ಪಾಲಿಕೆಗೆ ನೀಡಲು ಒಪ್ಪಿರುವ ವಾರ್ಷಿಕ ಲೈಸೆನ್ಸ್ ಫೀ (ತೆರಿಗೆ ಸೇರಿ) | ಷರಾ |
|---|---|---|---|
| 1 | ಮೆ॥ ರಾಜ್‌ದೀಪ್ ಬಿಲ್ಡ್‌ಕಾನ್ ಪ್ರೈವೇಟ್ ಲಿಮಿಟೆಡ್ | 9,73,000/- | H1 |
| 2 | ಮೆ॥ ಪ್ರಕಾಶ್ ಆರ್ಟ್ಸ್ | 7,20,000/- | H2 |

ಮೇಲ್ಕಾಣಿಸಿದ ಇಬ್ಬರು ಸಂಸ್ಥೆಯವರ ಪೈಕಿ ಮೆ॥ ರಾಜ್‌ದೀಪ್ ಬಿಲ್ಡ್‌ಕಾನ್ ಪ್ರೈವೇಟ್ ಲಿಮಿಟೆಡ್ ರವರು ಅತಿ ಹೆಚ್ಚು ಲೈಸೆನ್ಸ್ ಫೀ ನಮೂದಿಸಿದ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ಮೊತ್ತವು ಪ್ರತಿ ವರ್ಷಕ್ಕೆ ರೂ.9,73,000/–ಗಳಾಗಿದ್ದು, ಈ ಮೊತ್ತವು ಆರ್.ಎಫ್.ಪಿ. ಡಾಕ್ಯುಮೆಂಟ್‌ನಲ್ಲಿ ನಿಗಧಿಪಡಿಸಿರುವ ಕನಿಷ್ಠ ಲೈಸೆನ್ಸ್ ಫೀ ಮೊತ್ತವಾದ ರೂ.5,00,000/–ಗಳಿಗಿಂತ ಹೆಚ್ಚಾಗಿರುತ್ತದೆ ಹಾಗೂ ಸಮಜಂಸವಾಗಿರುತ್ತದೆ.

ಸದರಿ ಯೋಜನೆಯನ್ನು ಪಿ.ಪಿ.ಪಿ ಮಾದರಿಯಲ್ಲಿ ತೆಗೆದುಕೊಳ್ಳಲು ಉದ್ದೇಶಿಸಿದ್ದು ಪಾಲಿಕೆಯ ವತಿಯಿಂದ ಯಾವುದೇ ಆರ್ಥಿಕ ಹೊಣೆ ಇರುವುದಿಲ್ಲ. ಸಾರ್ವಜನಿಕರು ರಸ್ತೆಯನ್ನು ಸುರಕ್ಷಿತವಾಗಿ ದಾಟಲು ಈ ಸ್ಕೈವಾಕ್ ಅನ್ನು ಉಪಯೋಗಿಸಬಹುದಾಗಿದ್ದು, ಅತಿ ಹೆಚ್ಚು ದರ ನಮೂದಿಸಿರುವ ಏಜೆನ್ಸಿರವರು ಈ ಸ್ಕೈವಾಕ್ ಅನ್ನು ತಮ್ಮ ವೆಚ್ಚದಲ್ಲಿಯೇ ನಿರ್ಮಿಸಿ, 20 ವರ್ಷಗಳ ಅವಧಿಗೆ ನಿರ್ವಹಣೆ ಮಾಡುತ್ತಾರೆ ಹಾಗೂ ಪಾಲಿಕೆಯು ಈ ಸ್ಕೈವಾಕ್‌ನಲ್ಲಿ ಜಾಹೀರಾತು ಹಕ್ಕನ್ನು ಸದರಿ ಸಂಸ್ಥೆಗೆ ನೀಡಬೇಕಾಗುತ್ತದೆ.

ಈ ಮೇರೆಗೆ ಸದರಿ ಟೆಂಡರ್‌ನಲ್ಲಿ ಅತಿ ಹೆಚ್ಚು ದರ ನಮೂದಿಸಿರುವ ಏಜೆನ್ಸಿಯವರಾದ ಮೆ॥ ರಾಜ್‌ದೀಪ್ ಬಿಲ್ಡ್‌ಕಾನ್ ಪ್ರೈವೇಟ್ ಲಿಮಿಟೆಡ್ ರವರ ಬಿಡ್‌ನ್ನು ಪರಿಗಣಿಸಬಹುದಾಗಿದೆ.

ಆದುದರಿಂದ ಕ್ರೈಸ್ಟ್ ಕಾಲೇಜ್ ಹತ್ತಿರ DBOOT ಆಧಾರದ ಮೇಲೆ ಸ್ಕೈವಾಕ್ ನಿರ್ಮಿಸಿ ಜಾಹೀರಾತು ಹಕ್ಕನ್ನು ನೀಡಿ 20 ವರ್ಷಗಳ ಕಾಲಾವಧಿ ನಿರ್ವಹಣೆಯನ್ನು ಮಾಡುವ ಶರತ್ತಿಗೆ ಒಳಪಟ್ಟು ಮೆ॥ ರಾಜ್‌ದೀಪ್ ಬಿಲ್ಡ್‌ಕಾನ್ ಪ್ರೈವೇಟ್ ಲಿಮಿಟೆಡ್ ರವರ ಟೆಂಡರ್‌ನ್ನು ಅನುಮೋದಿಸಲು ಕೋರಿ ಬೃಹತ್ ಕಾಮಗಾರಿ ಸ್ಥಾಯಿ ಸಮಿತಿ, ನಗರ ಯೋಜನೆ ಸ್ಥಾಯಿ ಸಮಿತಿ, ಮುಂದೆ ಮಂಡಿಸಲಾದ ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿ.

**ನಿರ್ಣಯಃ ದಿನಾಂಕಃ 08-06-12ರ ಅಪರ ಆಯುಕ್ತರು (ಯೋ) ಇವರ ಟಿಪ್ಪಣಿಯನ್ನು ಒಪ್ಪಿದೆ.**

## 14] ವಿಷಯ ಸಂಖ್ಯೆಃ/33/2012-13

ವಿಶೇಷ ಆಯುಕ್ತರು (ಯೋಜನೆ) ರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, Construction of RCC box drain in SWD V-203 Northern side of Rajkumar Paly ground ಕಾಮಗಾರಿಗೆ ರೂ. 80.00 ಲಕ್ಷಗಳಿಗೆ ಅಂದಾಜನ್ನು ತಯಾರಿಸಿ ಆಡಳಿತಾತ್ಮಕ ಅನುಮೋದನೆಯನ್ನು ಮಾನ್ಯ ಆಯುಕ್ತರಿಂದ ಪಡೆಯಲಾಗಿದೆ ಹಾಗೂ ಕಾಮಗಾರಿ ಸಂಕೇತವನ್ನು ಪಡೆಯಲಾಗಿದ್ದು, ದಿನಾಂಕಃ 29-02-2012ರಂದು ಎರಡನೇ ಕರೆ ಟೆಂಡರ್ ಅಹ್ವಾನಿಸಲಾಗಿರುತ್ತದೆ.

ಟೆಂಡರ್‌ನಲ್ಲಿ ಇಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು, ಈ ಗುತ್ತಿಗೆದಾರರ ತಾಂತ್ರಿಕ ಬಿಡ್‌ಗೆ ದಿನಾಂಖಃ 26-04-12ರಂದು ಅನುಮೋದನೆ ನೀಡಲಾಗಿದೆ ಹಾಗೂ ಮುಖ್ಯ ಅಭಿಯಂತರರು ( ಮಳೆ ನೀರು ಚರಂಡಿ) ರವರ ವರದಿಯಂತೆ ದಿನಾಂಕಃ 03-05-2012ರಂದು ಆರ್ಥಿಕ ಬಿಡ್ಡನ್ನು ತೆರೆಯಲಾಗಿ ಗುತ್ತಿಗೆದಾರರಾದ ಶ್ರೀ. ಮೂರ್ತಿ .ಸಿ.ಎನ್.ಎಸ್. ರವರ ಇ.ಎಂ.ಡಿ. ಮೊತ್ತವನ್ನು ಅನುಮೋದಿಸಲಾಗಿರುವುದಿಲ್ಲ. ಆದ್ದರಿಂದ, ಸದರಿ ಗುತ್ತಿಗೆದಾರರು ಈ ಕಾಮಗಾರಿಗೆ ಅರ್ಹರಾಗಿರುವುದಿಲ್ಲ. ಅದರಂತೆ ಸದರಿ ಕಾಮಗಾರಿಗೆ ಗುತ್ತಿಗೆದಾರರಾದ ಶ್ರೀ.ಪ್ರಶಾಂತ್ ಕೆ.ಸಿ.(ಸಾಯಿ ಕನ್ಸ್ಟ್ರಕ್ಷನ್) ರವರು ಅರ್ಹರಾಗಿರುತ್ತಾರೆ.

ಆರ್ಥಿ ಬಿಡ್‌ನ ವಿವರಗಳು ಈ ಕೆಳಕಂಡಂತಿವೆ

| ಕ್ರ. ಸಂ. | ಗುತ್ತಿಗೆದಾರರ ಹೆಸರು | ಕಾಮಗಾರಿಯ ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ | ಟೆಂಡರ್‌ಗಿಟ್ಟ ಮೊತ್ತ (ಮಂಜೂರಾದ ಅಂದಾಜು ಪಟ್ಟಿಯ ದರದಂತೆ 201-11ನೇ ಸಾಲಿನ ದರಪಟ್ಟಿಗೆ) ರೂ. | ಗುತ್ತಿಗೆದಾರರು ನಮೂದಿಸಿರುವ ಮೊತ್ತ ರೂ. | ಅಂದಾಜು ಪಟ್ಟಿಯ (2010-11ನೇ ಹಾಗೂ 2011-12ನೇ ಸಾಲಿನ ದರಪಟ್ಟಿಯ ದರಗಳಂತೆ) |
|---|---|---|---|---|---|
| 1. | ಶ್ರೀ.ಕೆ.ಸಿ.ಪ್ರಶಾಂತ್ (ಸಾಯಿ ಕನ್ಸ್ಟ್ರಕ್ಷನ್ಸ್) | 80.00 | 79,43,141.00 | 90,64,512.40 | ಎಸ್.ಆರ್.10-11ಕ್ಕೆ ಹೋಲಿಸಿದಾಗ ಶೇ.14.09ರಷ್ಟು ಹೆಚ್ಚು<br>ಎಸ್.ಆರ್.11-12ಕ್ಕೆ ಹೋಲಿಸಿದಾಗ ಶೇ.0.96ರಷ್ಟು ಹೆಚ್ಚು |

ಮೇಲ್ಕಂಡ ವಿವರಗಳನ್ನು ಪರಿಶೀಲಿಸಲಾಗಿ ಈ ಕಾಮಗಾರಿಗೆ ಶ್ರೀ. ಕೆ.ಸಿ. ಪ್ರಶಾಂತ್ (ಸಾಯಿ ಕನ್ಸ್ಟ್ರಕ್ಷನ್) ರವರು ರೂ. 90,64,512.40 ಗಳನ್ನು ನಮೂದಿಸಿದ್ದು, ಈ ಮೊತ್ತವು ಎಸ್.ಆರ್. 2010-11ನೇ ಸಾಲಿನ ದರಪಟ್ಟಿಗೆ ಶೇಕಡ 14.09 ರಷ್ಟು ಹೆಚ್ಚಿಗೆ ಮತ್ತು ಎಸ್.ಆರ್.ದರ 11-12ಕ್ಕೆ ಶೇಕಡ 0.96ರಷ್ಟು ಹೆಚ್ಚಿಗೆ ಇದ್ದು ಸದರಿ ಟೆಂಡರ್‌ಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರವರ ಟಿಪ್ಪಣಿ.

**ನಿರ್ಣಯಃ ದಿನಾಂಕಃ 11-06-2012ರ ವಿಶೇಷ ಆಯುಕ್ತರು(ಯೋ) ಇವರ ಟಿಪ್ಪಣಿ ಒಪ್ಪಿದೆ.**

## 15]ವಿಷಯ ಸಂಖ್ಯೆಃ/34/2012-13

ಅಪರ ಆಯುಕ್ತರು (ಯೋಜನೆ) ರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಗೋವಿಂದರಾಜನಗರ ವಿಧಾನ ಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ 128 ನಾಗರಬಾವಿ ವ್ಯಾಪ್ತಿಯಲ್ಲಿ ಬರುವ 14ನೇ ಅಡ್ಡರಸ್ತೆ, ಜ್ಯೋತಿನಗರ ಇಲ್ಲಿ ಹಾಲಿ ನಿರ್ಮಿಸಲಾಗುತ್ತಿರುವ ಬಿ.ಬಿ.ಎಂ.ಪಿ ವಿವಿದೋದ್ದೇಶ ಕಟ್ಟಡ ನಿರ್ಮಾಣ ಪ್ರಗತಿಯಲ್ಲಿದ್ದು, ಸದರಿ ಕಟ್ಟಡದ 2ನೇ ಹಂತದ ನಿರ್ಮಾಣ ಕಾಮಗಾರಿಗಾಗಿ (Construction of multipurpose building at 14th Cross Jyothinagar,(phase-2) 2011-12ರ ಲೋಕೋಪಯೋಗಿ ಇಲಾಖೆಯ ದರಪಟ್ಟಿ ಅನ್ವಯ ರೂ. 100.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು, ಸದರಿ ಕಾಮಗಾರಿಗೆ 2011-12ನೇ ಸಾಲಿನ ಆಯವ್ಯಯದಲ್ಲಿ ರೂ. 100.00 ಲಕ್ಷಗಳನ್ನು (ಪಿ-0975) ಮೀಸಲಿರಿಸಲಾಗಿದ್ದು, ಹಾಗೂ ದಿನಾಂಕಃ 03-05-2012ರಂದು ಜಾಬ್ ಸಂಕೇತ 128-12-000067 ನೀಡಲಾಗಿರುತ್ತದೆ.

ಸಾರ್ವಜನಿಕರ ಹಿತದೃಷ್ಟಿಯಿಂದ ತುರ್ತಾಗಿ ಕಾಮಗಾರಿಯನ್ನು ಕೈಗೊಳ್ಳಬೇಕಾಗಿರುವುದರಿಂದ ಕೆ.ಆರ್.ಐ.ಡಿ.ಎಲ್. ಸಂಸ್ಥೆ ಮುಖಾಂತರ ನಿರ್ವಹಿಸುವ ಬಗ್ಗೆ ಹಾಗೂ ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಅಪರ ಆಯುಕ್ತರವರ (ಯೋಜನೆ) ರವರ ಟಿಪ್ಪಣಿ.

**ನಿರ್ಣಯಃ ದಿನಾಂಕಃ 12-06-12ರ ಅಪರ ಆಯುಕ್ತರು (ಯೋ) ಇವರ ಟಪ್ಪಣಿ ಒಪ್ಪಿದೆ.**

## 16]ವಿಷಯ ಸಂಖ್ಯೆಃ/35/2012-13

ಅಪರ ಆಯುಕ್ತರು (ಯೋಜನೆ) ರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆಃ 72ರ ಮುದ್ದಯ್ಯನಪಾಳ್ಯ ರಸ್ತೆಯಿಂದ ರಿಂಗ್ ರಸ್ತೆಗೆ ಸಂಪರ್ಕ ಕಲ್ಪಿಸುವ ರಸ್ತೆಯು (ಗಿಡದಕೊನೇನಹಳ್ಳಿ) ಒಂದು ಪ್ರಮುಖ ರಸ್ತೆಯಾಗಿದ್ದು, ಈ ರಸ್ತೆಯ ಮಧ್ಯದಲ್ಲಿ ಒಂದು ನೀರುಗಾಲುವೆ ಹರಿದು ಹೋಗಿದ್ದು ಇಲ್ಲಿ ಇರುವ ಹಳೆಯ ಕಲ್ವರ್ಟ್ ಕಿರಿದಾಗಿದ್ದು ಮಳೆ ನೀರು ಸರಾಗವಾಗಿ ಹರಿಯುತ್ತಿಲ್ಲ. ಅಲ್ಲದೆ ಸದರಿ ಸ್ಥಳವು ಕಿರಿದಾಗಿರುವುದರಿಂದ ಆಗಾಗ್ಗೆ ರಸ್ತೆ ಅಪಘಾತಗಳು ಸಂಭವಿಸುತ್ತಿವೆ. ಈ ಬಗ್ಗೆ ಪಾಲಿಕೆ ಸದಸ್ಯರು ಸಹ ಹೊಸದಾಗಿ ಸೇತುಗೆ ನಿರ್ಮಿಸಲು ಕೋರಿರುತ್ತಾರೆ.

ಈ ಮೇರೆಗೆ ರಸ್ತೆ ಮೂಲಭೂತ ಸೌಕರ್ಯ ವಿಭಾಗದಿಂದ ಹೊಸದಾಗಿ ಸೇತುವೆ ನಿರ್ಮಿಸಲು ರೂ. 89.00 ಲಕ್ಷಗಳಿಗೆ ಅಂದಾಜು ಪಟ್ಟಿ ತಯಾರಿಸಿ ಅನುಮೋದನೆಗಾಗಿ ಸಲ್ಲಿಸಿರುತ್ತಾರೆ.

ಸದರಿ ಕಾಮಗಾರಿಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು ವಿಷಯ ಸಂಖ್ಯೆಃ ತೆಆಸ್ಥಾಸ/236/2011-12 ದಿನಾಂಕಃ 26-09-2011ರಲ್ಲಿ ಅನುಮೋದನೆ ನೀಡಿರುತ್ತದೆ. ಈ ಮೇರೆಗೆ ಸದರಿ ಯೋಜನೆಗೆ ಲೆಕ್ಕ ಶೀರ್ಷಿಕೆ ಪಿ0541ರ ಅಡಿಯಲ್ಲಿ ಜಾಬ್ ಸಂಖ್ಯೆಃ 072-12-000145ಅನ್ನು ನೀಡಲಾಗಿದೆ.

ಈ ಹಿನ್ನಲೆಯಲ್ಲಿ ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ. 89.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಅಪರ ಆಯುಕ್ತರು(ಯೋಜನೆ) ರವರ ಟಿಪ್ಪಣಿ.

**ನಿರ್ಣಯಃ ದಿನಾಂಕಃ 12–06–2012ರ ಅಪರ ಆಯುಕ್ತರು (ಯೋ) ಇವರ ಟಿಪ್ಪಣಿಯನ್ನು ಒಪ್ಪಿದೆ.**

**(ಎನ್.ಆರ್.ಶ್ರೀಧರ ರೆಡ್ಡಿ)**
ಅಧ್ಯಕ್ಷರು
ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ

**ಪ್ರತಿಯನ್ನುಃ**

1. ಪೂಜ್ಯ ಮಹಾಪೌರವರ ಅವಗಾಹನೆಗೆ ಸಲ್ಲಿಸಿದೆ.
2. ಉಪ ಮಹಾಪೌರವರ ಅವಗಾಹನೆಗೆ ಸಲ್ಲಿಸಿದೆ.
3. ಆಡಳಿತ ಪಕ್ಷ ನಾಯಕರು/ ವಿರೋಧ ಪಕ್ಷ ನಾಯಕರು/ ಜೆ.ಡಿ.ಎಸ್.ಪಕ್ಷ ನಾಯಕರಿಗೆ ಕಳುಹಿಸಿದೆ.
4. ಸಮಿತಿಯ ಎಲ್ಲಾ ಸದಸ್ಯರಿಗೆ ಕಳುಹಿಸಿದೆ.
5. ಆಯುಕ್ತರವರಿಗೆ ಕಳುಹಿಸಿದೆ.
6. ವಿಶೇಷ ಆಯುಕ್ತರವರಿಗೆ ಕಳಹಿಸಿದೆ.
7. ಪ್ರಧಾನ ಅಭಿಯಂತರರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
8. ಮುಖ್ಯ ಲೆಕ್ಕಾಧಿಕಾರಿಯವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
9. ಮುಖ್ಯ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ, ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
10. ಮುಖ್ಯ ಅಭಿಯಂತರರು, ಬೃಹತ್ ನೀರು ಗಾಲುವೆ ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
11. ಕೌನ್ಸಿಲ್ ಕಾರ್ಯದರ್ಶಿಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.